ಸಂಪುಟ: 04 ಸಂಚಿಕೆ: 301 ಪುಟಗಳು: 08 ಸೋಮವಾರ 13 ಜನವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

ಮುಂಜಾನೆ ಮಾತು

ಪ್ರಪಂಚದ ಎಲ್ಲಾ ಜ್ಞಾನವನ್ನು ನೀವು ತೆಗೆದುಕೊಳ್ಳಬೇಕು. ನೀವು ಅದನ್ನು ತಲುಪಿ ಹಿಡಿಯಬೇಕು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಮಾರ್ಚ್ ತಿಂಗಳಿಂದ ಕಾರ್ಯಕರ್ತರ ಮನೆಯಲ್ಲಿ ವಾಸ್ತವ್ಯ

• ಉದಯವಾಹಿನಿ, ಬೆಂಗಳೂರು

'ನಾನು ಮಾರ್ಚ್ ತಿಂಗಳಿಂದ ಜಿಲ್ಲೆಗಳಿಗೆ ಪ್ರವಾಸ ಮಾಡುತ್ತೇನೆ, ಕಾರ್ಯಕರ್ತರ ಮನೆಗಳಲ್ಲಿಯೇ ವಾಸ್ತವ್ಯ ಹೂಡಿ ಪಕ್ಷ ಕಟ್ಟುತ್ತೇನೆ' ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು. ಜೆ.ಪಿ.ಭವನದಲ್ಲಿ ಜೆಡಿಎಸ್ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಮ್ಮದು ಸಮರ್ಥ ನಾಯಕರು, ಕಾರ್ಯಕರ್ತರ ಪಕ್ಷ. ನಮ್ಮ ಪಕ್ಷವನ್ನು ಬೇರೆಯವರು ಮುಗಿಸುವುದು ಅಸಾಧ್ಯ, ಸದಸ್ಯತ್ವ ಅಭಿಯಾನವನ್ನು ನೀವು ಮುಂದುವರಿಸಿ ಎಂದು ಸಲಹೆ ನೀಡಿದರು. ಕಾಂಗ್ರೆಸ್ ಪಕ್ಷ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್‌ನ್ನು ಮುಗಿಸಬೇಕೆಂದು ಹೊಂಚು ಹಾಕುತ್ತಿದೆ. ಯಾವುದೇ ಕಾರಣಕ್ಕೂ ಆ ಕನಸು ಈಡೇರುವುದಿಲ್ಲ ಎಂದು ಗುಡುಗಿದರು. ಕುಮಾರಸ್ವಾಮಿ ಅವರನ್ನು ಮುಗಿಸಿದರೆ ಜೆಡಿಎಸ್ ಮುಗಿದು ಹೋಗುತ್ತದೆ ಎಂದು ಕಾಂಗ್ರೆಸ್ ನಂಬಿದೆ. ಅದಕ್ಕೆ ಕಾರಣ ಇಷ್ಟೇ, ಕುಮಾರಸ್ವಾಮಿ ಅವರ ಹಿಂದೆ ಲಕ್ಷಾಂತರ ಕಾರ್ಯಕರ್ತರು ಇದ್ದಾರೆ. ಅವರು ಬಲಿಷ್ಠವಾಗಿ ನಿಂತಿದ್ದಾರೆ. ಹೀಗಾಗಿ ಅವರನ್ನು ಮುಗಿಸುವುದು ಸಾಧ್ಯವಿಲ್ಲದ ಮಾತು ಎಂದರು.

ಜೆಡಿಎಸ್ ಕುಟುಂಬ ಆಧಾರಿತ ಪಕ್ಷ ಎಂದು ಕಾಂಗ್ರೆಸ್ ಹೇಳುತ್ತದೆ. ಯಾರಾದರೂ ಒಮ್ಮೆ ಕಾಂಗ್ರೆಸ್ ಕಚೇರಿಗೆ ಹೋಗಿ ಅಲ್ಲಿ ಗೋಡೆಗಳ ಮೇಲೆ ನೇತು ಹಾಕಿರುವ ಫೋಟೋಗಳನ್ನು ಒಮ್ಮೆ ನೋಡಿ. ಕುಟುಂಬ ಆಧಾರಿತ ಪಾರ್ಟಿ ಯಾವುದು ಎನ್ನುವುದು ಗೊತ್ತಾಗುತ್ತದೆ ಎಂದು ವ್ಯಂಗ್ಯವಾಡಿದರು. ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಪಕ್ಷ ಸಂಘಟನೆಯಲ್ಲಿ ಹಿಂದೆ ಬೀಳುವುದು ಬೇಡ. ಎಲ್ಲಾರೂ ಒಟ್ಟಾಗಿ ಪಕ್ಷ ವಹಿಸುವ ಕೆಲಸ ಮಾಡೋಣ ಎಂದು ಹೇಳಿದರು.

## ಶೀಘ್ರ ಬೆಂಗಳೂರು ದಕ್ಷಿಣ ಜಿಲ್ಲೆ ಅಸ್ತಿತ್ವಕ್ಕೆ: ಡಿಕೆಶಿ

• ಉದಯವಾಹಿನಿ, ಕನಕಪುರ

ಭೂ ವ್ಯಾಜ್ಯಗಳಿಂದಾಗಿ ಜನ ಪೊಲೀಸ್ ಠಾಣೆಗೆ ಹೋಗಬಾರದು, ಬಡವರು ಲಂಚ ನೀಡುವುದನ್ನು ತಪ್ಪಿಸಬೇಕು ಎಂಬ ಉದ್ದೇಶದಿಂದ ನಮ್ಮ ಸರ್ಕಾರ ಮರು ಭೂ ಮಾಪನ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಮಾಡಿದ್ದು ಮುಂದೆ ಇಡೀ ತಾಲ್ಲೂಕಿಗೆ ಕಾರ್ಯಕ್ರಮ ವಿಸ್ತರಣೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಕನಕಪುರದ ಉಯ್ಯಂಬಳ್ಳಿ ಹೋಬಳಿಯ ದೊಡ್ಡ ಆಲಹಳ್ಳಿಯಲ್ಲಿ ಭಾನುವಾರ ನಡೆದ ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ ಹಾಗೂ ಮರು ಭೂ ಮಾಪನ ಯೋಜನೆಯಡಿ ರೈತರಿಗೆ ಜಮೀನಿನ ಆರ್ ಟಿಸಿ ದಾಖಲೆ ನೀಡುವ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಭಾಗವಹಿಸಿ ಮಾತನಾಡಿದರು. ನೂರಾರು ವರ್ಷಗಳ ಹಿಂದೆ ಬ್ರಿಟೀಷರು ಈ ಭಾಗದಲ್ಲಿ ಭೂ ಮಾಪನ ಮಾಡಿದ್ದರು. ಆನಂತರ ಮಾಡಿರಲಿಲ್ಲ. ಈಗ ಹೊಸ ಮಾದರಿಯಲ್ಲಿ ಭೂ ಮಾಪನ ಮಾಡಲಾಗುತ್ತಿದೆ. ನಮ್ಮ ಸರ್ಕಾರ ಈ ಕಾರ್ಯಕ್ರಮ ರೂಪಿಸಿದೆ. ಇದು ಮುಂದಿನ ತಲೆಮಾರಿಗೂ ಬಹಳ ಉಪಯೋಗವಾಗಲಿದೆ' ಎಂದು ತಿಳಿಸಿದರು.



ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಹಿರಿಯ ಶಾಸಕರಾದ ಸನ್ಮಾನ್ಯ ಶ್ರೀ ಡಾ. ಶಾಮನೂರು ಶಿವಶಂಕರಪ್ಪನವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿಯಾಗಿ ಆರೋಗ್ಯ ವಿಚಾರಿಸಿ, ಶ್ರೀಯುತರು ಶತಾಯುಷಿಗಳಾಗಲಿ ಹಾಗೂ ಇನ್ನಷ್ಟು ಕಾಲ ಸಮಾಜವನ್ನು ಮುನ್ನಡೆಸುವ ಶಕ್ತಿಯನ್ನು ಭಗವಂತ ಅವರಿಗೆ ಕರುಣಿಸಲಿ ಎಂದು ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರಮಠದ ಮ ನಿ ಪ್ರ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮಿಗಳು ಆಶೀರ್ವದಿಸಿದ ಸಂದರ್ಭ.

# ಹಸುಗಳ ಕೆಚ್ಚಲು ಕೊಯ್ದು ವಿಕೃತಿ

# ಇದೆಂಥಾ ಕ್ರೂರ ಮನಸ್ಥಿತಿ..!

# ರಾಕ್ಷಸರ ಮಟ್ಟಹಾಕಿ



### ಹಸುಗಳ ಕೆಚ್ಚಲು ಕೊಯ್ದವರಾರು..?

### ಸ್ಥಳಕ್ಕೆ 20ಕ್ಕೂ ಹೆಚ್ಚು ಪೊಲೀಸರು ಆಗಮನ

ಪಾಪಿಗಳ ಕೃತ್ಯಕ್ಕೆ ಸ್ಥಳೀಯರ ಕಣ್ಣೀರು ಹಾಕುತ್ತಿದ್ದಾರೆ. ಸ್ಥಳದಲ್ಲಿ ಜನರು ಜಮಾವಣೆಗೊಂಡಿದ್ದಾರೆ. ಸ್ಥಳಕ್ಕೆ ಹಿಂದೂ ಕಾರ್ಯಕರ್ತರು ಬಂದಿದ್ದು, ಕೃತ್ಯವನ್ನು ಖಂಡಿಸಿದ್ದಾರೆ. ಸ್ಥಳಕ್ಕೆ 20 ಕ್ಕೂ ಹೆಚ್ಚು ಕಾಟನ್ ಪೇಟೆ ಪೊಲೀಸರು ಬಂದಿದ್ದು, ಪೊಲೀಸರ ಮೇಲೆ ಸ್ಥಳೀಯರ ಆಕ್ರೋಶ ವ್ಯಕ್ತಪಡಿದ್ದಾರೆ.

■ ಹಸುಗಳ ಕೆಚ್ಚಲು ಕೊಯ್ದ ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಶಿಕ್ಷೆ: ಸಿಎಂ ■ ಹಸುಗಳ ಕೆಚ್ಚಲು ಕೊಯ್ದವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಕರಾಳ ಸಂಕ್ರಾಂತಿ ಆಚರಣೆ : ಆರ್.ಅಶೋಕ್

• ಉದಯವಾಹಿನಿ, ಬೆಂಗಳೂರು

ಹಸುಗಳ ಕೆಚ್ಚಲು ಕೊಯ್ದ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ.

ಹಿಂದೂಪರ ಸಂಘಟನೆಗಳು ರಾಜಕೀಯಕ್ಕಾಗಿ ಈ ವಿಚಾರದ ಕುರಿತು ಪ್ರತಿಭಟನೆ ಮಾಡಬಾರದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಹಸುಗಳ ಕೆಚ್ಚಲು ಕೊಯ್ದಿರುವುದು ತಪ್ಪು. ಇದನ್ನು ಯಾರು ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಈ ಬಗ್ಗೆ ಪೊಲೀಸ್ ಕಮಿಷನರ್ ಜೊತೆ ಮಾತನಾಡಿದ್ದೇನೆ. ಆದಷ್ಟು ಬೇಗ ಆರೋಪಿಗಳನ್ನು ಪತ್ತೆ ಹಚ್ಚುವಂತೆ ಹೇಳಿದ್ದೇನೆ. ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ ಎಂದು ಹೇಳಿದರು.

**ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ:** ಹಸುವಿನ ಕೆಚ್ಚಲು ಕೊಯ್ದ ಕಿಡಿಗೇಡಿಗಳ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಸುಗಳ ಮಾಲೀಕ ಕರ್ಣ ನೀಡಿದ ದೂರಿನನ್ವಯ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 325 (ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ) ಕಾಯ್ದೆಯಡಿ ಕೇಸು ದಾಖಲಿಸಿಕೊಳ್ಳಲಾಗಿದೆ. ಘಟನೆ ನಡೆದ ಪ್ರದೇಶದ ಸಿಸಿಟಿವಿ ಪರಿಶೀಲನೆ ನಡೆಸಿರುವ ಪೊಲೀಸರು, ಸ್ಥಳೀಯರಿಂದ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಮೂರು ಹಸುಗಳ ಕೆಚ್ಚಲು ಕೊಯ್ದು ವಿಕೃತಿ ಮೆರೆದ ಘಟನೆ ಭಾನುವಾರ ಬೆಳಗಿನ ಜಾವ ನಡೆದಿತ್ತು. ಹಸುಗಳ ಮೇಲಿನ ದಾಳಿ ವಿಷಯ ತಿಳಿಯುತ್ತಿದ್ದಂತೆ ಹಿಂದೂ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಘಟನಾ ಸ್ಥಳಕ್ಕೆ ಆಗಮಿಸಿ ಆರೋಪಿಗಳು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಭದ್ರತೆಗಾಗಿ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿದೆ. ಕಾಟನ್‌ಪೇಟೆ ಠಾಣೆ ಪೊಲೀಸ್ ಸಿಬ್ಬಂದಿ, ಚಿಕ್ಕಪೇಟೆ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿದೆ. ವಿಧಾನಸಭಾ

### ಏನಿದು ಕೆಚ್ಚಲು ಕೊಯ್ದ ಪ್ರಕರಣ..?

ಚಾಮರಾಜಪೇಟೆಯ ಕರ್ಣ ಎಂಬುವವರಿಗೆ ಸೇರಿದ ಹಸುಗಳ ಮೇಲೆ ಕಿಡಿಗೇಡಿಗಳು ವಿಕೃತಿ ಮೆರೆದಿದ್ದಾರೆ. ಓಲ್ಡ್ ಪೆನ್ಷನ್ ಮೊಹಲ್ಲಾದಲ್ಲಿ ತಡ ರಾತ್ರಿ ಮಲಗಿದ್ದ ಮೂರು ಹಸುಗಳ ಕೆಚ್ಚಲು ಕೊಯ್ದು ರಕ್ತದ ಕೋಡಿಯನ್ನೇ ಹರಿಸಿದ್ದಾರೆ. ಕೃತ್ಯ ಎಸಗಿ ಕಿರಾತಕರು ಸ್ಥಳದಿಂದ ಪರಾರಿಯಾಗಿದ್ದು, ಘಟನೆ ಬೆಳಕಿಗೆ ಬಂದಿದೆ. ಸದ್ಯ ಹಸುಗಳಿಗೆ ಚಾಮರಾಜಪೇಟೆಯ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಕಾಟನ್ ಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆರೋಪಿಗಳ ಪತ್ತೆಗೆ ಸಿಸಿ ಕ್ಯಾಮರಾ ದೃಶ್ಯಗಳ ಪರಿಶೀಲನೆ ನಡೆಸುತ್ತಿದ್ದಾರೆ.



ಇಡೀ ದೇಶ ಗೋವನ್ನು ಪವಿತ್ರ ಎಂದು ಪರಿಗಣಿಸಿದೆ. ಸಂಕ್ರಾಂತಿ ಹಬ್ಬದಲ್ಲೂ ಗೋವನ್ನು ಪೂಜಿಸಲಾಗುತ್ತದೆ. ಕಾಂಗ್ರೆಸ್ ಸರ್ಕಾರ ಹೊಸ ವರ್ಷಕ್ಕೆ ಬೆಲೆ ಏರಿಕೆಯ ಕೊಡುಗೆ ನೀಡಿದೆ. ಅದೇ ರೀತಿ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಹಸುವಿನ ಕೆಚ್ಚಲು ಕೊಯ್ದುಹಾಕುವ ಕೊಡುಗೆಯನ್ನು ನೀಡಿದೆ. ಇಂತಹ ಜಿಹಾದಿ ಮನಸ್ಥಿತಿಯನ್ನು ನಾನು ಈವರೆಗೆ ನೋಡಿಲ್ಲ ಎಂದರು.

-ಆರ್.ಅಶೋಕ್
ವಿರೋಧ ಪಕ್ಷದ ನಾಯಕ



### ರಕ್ತದ ಮಡುವಿನಲ್ಲಿ ನರಳಾಡಿದ ಹಸುಗಳು

ತಡರಾತ್ರಿ ಈ ಅಮಾನವೀಯ ಘಟನೆ ನಡೆದಿದೆ ಎಂದು ಹೇಳಲಾಗಿದೆ. ರಸ್ತೆಯಲ್ಲಿ ಮಲಗಿದ್ದ ಮೂರು ಹಸುಗಳ ಕೆಚ್ಚಲುಗಳನ್ನು ಕೊಯ್ದ ಕಿಡಿಗೇಡಿಗಳು ವಿಕೃತಿ ಮೆರೆದಿದ್ದಾರೆ. ರಾತ್ರಿಯಿಡೀ ಹಸುಗಳು ರಕ್ತದ ಮಡುವಿನಲ್ಲಿ ನರಳಾಡಿವೆ. ಭಾನುವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಿದೆ. ಸಧ್ಯ ಹಸುಗಳಿಗೆ ಚಾಮರಾಜೇಟೆಯ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

### ಹಸುಗಳ ಕೆಚ್ಚಲಿಗೆ ಬ್ಲೇಡ ಹಾಕಿದ ಕಿಡಿಗೇಡಿಗಳು

ಹಸುಗಳು ಕರ್ಣ ಎಂಬುವರಿಗೆ ಸೇರಿದ್ದು, ಒಟ್ಟು ಎಂಟು ಹಸುಗಳು ಅವರ ಬಳಿ ಇವೆ. ಮೂರು ಹಸುಗಳನ್ನ ಕಟ್ಟಿ ಹಾಕಿದ್ದರು. ಕಿಡಿಗೇಡಿಗಳು ರಾತ್ರಿ ಮೂರು ಹಸುಗಳ ಕೆಚ್ಚಲು ಕೊಯ್ದಿದ್ದಾರೆ. ಈ ಬಗ್ಗೆ ಮಾತನಾಡಿ, ಹಾಲು ಕರೆಯಬೇಕು ಅಂತಾ ರಾತ್ರಿ ಇಲ್ಲಿ ಹಸುಗಳನ್ನ ಕಟ್ಟಾ ಇದ್ವಿ. ಒಟ್ಟು ಎಂಟು ಹಸು ಇವೆ. ಮೂರು ಹಸುಗಳು ಇಲ್ಲಿತ್ತು. ರಾತ್ರಿ ಯಾರೋ ಬ್ಲೇಡ್ ನಿಂದ ಕೆಚ್ಚಲು ಕೊಯ್ದಿದ್ದಾರೆ. ಮೂರು ಹಸುಗಳ ಕೆಚ್ಚಲಿಗೆ ತುಂಬ ಗಾಯವಾಗಿದೆ. ತೀವ್ರ ರಕ್ತಸ್ರಾವವಾಗಿದೆ. ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ಆಸ್ಪತ್ರೆ ಮುಚ್ಚಬೇಕು ಅಂತಾ ಇದ್ರು. ನಾವು ಹೋರಾಟ ಮಾಡಿ ಅದನ್ನ ಉಳಿಸಬೇಕು ಅಂತಿದ್ವಿ.



ಪಶು ಆಸ್ಪತ್ರೆ ಮಾಡಬೇಕು ಎಂದು ದಾನಿಗಳು ಜಾಗ ನೀಡಿದ್ದರು. ಆದರೆ, ಅಸ್ಪತ್ರೆಗೆ ವಕ್ಫ್ ಬೋರ್ಡ್ ತನ್ನ ಆಸ್ತಿ ಬೋರ್ಡ್ ತಗುಲಿ ಹಾಕಿತ್ತು. ಆಗ ಹೋರಾಟ ಮಾಡಿದ ಬಿಜೆಪಿ ಹಸುಗಳನ್ನು ಬಳಸಿತ್ತು. ಇದರಿಂದ ಹೈಕೋರ್ಟ್ ತಡೆಯಾಜ್ಞೆ ಕೊಟ್ಟ ಕಾರಣ, ಹೋರಾಟಕ್ಕೆ ಬಳಸಿದ್ದ ಹಸುವಿನ ಕೆಚ್ಚಲನ್ನು ಕೊಯ್ದು ಕಿಡಿಗೇಡಿಗಳು ತಮ್ಮ ವಿಕೃತಿ ಮೆರೆದಿದ್ದಾರೆ.

-ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ

ಪ್ರತಿಪಕ್ಷದ ನಾಯಕ ಆರ್.ಅಶೋಕ್, ಸಂಸದ ಪಿ.ಸಿ.ಮೋಹನ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಕರಾಳ ಸಂಕ್ರಾಂತಿ ಎಂದು ಆಚರಣೆ ಮಾಡುಲಾಗುವುದು ಎಂದು ಆರ್.ಅಶೋಕ್ ಎಚ್ಚರಿಕೆ ನೀಡಿದ್ದಾರೆ. ಇನ್ನು ಹಸುಗಳ ಮೇಲಿನ ಅಮಾನವೀಯ ಕೃತ್ಯವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ತೀವ್ರವಾಗಿ ಖಂಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಮೊನ್ನೆಯಷ್ಟೇ ಗೋ ಶಾಲೆಗಳನ್ನು ಮುಚ್ಚುವ ನಿರ್ಧಾರ ಪ್ರಕಟಿಸಿದೆ. ಇದೆಲ್ಲವೂ ಗೋ ಭಕ್ಷಕ ಜನರ ಓಲೈಕೆಗಾಗಿ ಅಲ್ಲದೆ ಬೇರೇನೂ ಅಲ್ಲ ಎಂದು ವಿಜಯೇಂದ್ರ ದೂರಿದ್ದಾರೆ.

## ಬಾಳಪ್ಪ ಹಂದಿಗುಂದ ವಿರುದ್ಧ ತನಿಖೆಗೆ ನಿರ್ದೇಶನ ಕೋರಿ ದೂರು

• ಉದಯವಾಹಿನಿ, ಬೆಂಗಳೂರು

ಹಿಂದಿನ ಸರ್ಕಾರದ ಅವಧಿಯಲ್ಲಿ 'ಪೇ ಸಿಎಂ ಸೇ ಸಿಎಂ' ಘೋಷಣೆ ಮೂಲಕ ಭ್ರಷ್ಟಾಚಾರ ಪ್ರಕರಣಗಳ ವಿರುದ್ಧ ಮೆಗಾ ಅಭಿಯಾನ ಕೈಗೊಂಡು ಆಡಳಿತಕ್ಕೆ ಬಂದಿರುವ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಇದೀಗ 'ಹಂದಿಗುಂದ ಪ್ರಕರಣ' ಸವಾಲಾಗಿ ಪರಿಣಮಿಸಿದೆ. ಭ್ರಷ್ಟಾಚಾರ ವಿರುದ್ಧ ದೇಶವ್ಯಾಪಿ ಕಾನೂನು ಹೋರಾಟ ನಡೆಸುತ್ತಿರುವ 'ಸಿಟಿಜನ್ ರೈಟ್ಸ್ ಫೌಂಡೇಶನ್' ಕೆಎಎಸ್ ಅಧಿಕಾರಿ ಬಾಳಪ್ಪ ಹಂದಿಗುಂದ ವಿರುದ್ಧದ ಭ್ರಷ್ಟಾಚಾರ ಆರೋಪದಲ್ಲಿ ಸಿದ್ದರಾಮಯ್ಯ ಸರ್ಕಾರದ ಲೋಪವನ್ನೇ ಎತ್ತಿ ಹಿಡಿದಿದೆ. ಈ ಸಂಬಂಧ ರಾಜ್ಯಪಾಲರಿಗೆ ದೂರು ನೀಡಿ ಕೆಐಎಡಿಬಿ ಕರ್ಮಕಾಂಡದ ತನಿಖೆಗೆ ರೋಚಕತೆ ತುಂಬಿದೆ. ಕೆಐಎಡಿಬಿಯಲ್ಲಿ ಪ್ರಸ್ತುತ ವಿಶೇಷ ಭೂಸ್ವಾಧೀನ ಅಧಿಕಾರಿಯಾಗಿರುವ ಏಂಖ ಅಧಿಕಾರಿ ಬಾಲಪ್ಪ ಹಂದಿಗುಂದ ವಿರುದ್ಧ ಬೆಂಗಳೂರಿನ ದೇವನಹಳ್ಳಿ



ಸುತ್ತಮುತ್ತ ಅಕ್ರಮವಾಗಿ ಭೂಸ್ವಾಧೀನ ಮಾಡಿರುವ ಹಾಗೂ ಪರಿಹಾರ ಹಂಚಿಕೆಯಲ್ಲಿನ ಅಕ್ರಮಗಳ ವಿರುದ್ಧ ಗಂಭೀರ ಆರೋಪ ಕೇಳಿಬಂದಿವೆ. ಈ ಬಗ್ಗೆ ನ್ಯಾಯಾಲಯದ ಉಸ್ತುವಾರಿಯಲ್ಲಿ ಉನ್ನತಮಟ್ಟದ ತನಿಖೆಗೆ ಕೋರಿ ಸಿಟಿಜನ್ ರೈಟ್ಸ್ ಫೌಂಡೇಶನ್ ಮುಖ್ಯಮಂತ್ರಿಗೆ ಸೆಪ್ಟೆಂಬರ್ 12ರಂದು ದೂರು ಸಲ್ಲಿಸಿದ್ದರು. ಅಷ್ಟೇ ಅಲ್ಲ, ಈ ಭ್ರಷ್ಟಾಚಾರ ಆರೋಪ ಬಗ್ಗೆ ತನಿಖೆಗೆ ಕೋರಿ ಅಕ್ಟೋಬರ್ 10ರಂದು ಲೋಕಾಯುಕ್ತರಿಗೂ ದೂರು ಸಲ್ಲಿಸಿದ್ದರು.

## ರಾಜ್ಯ ಸರ್ಕಾರದಿಂದ ಸಿಕ್ತು ದುಬಾರಿ ಕಾರು!

• ಉದಯವಾಹಿನಿ, ಬೆಂಗಳೂರು



ಅಧಿಕಾರ ವಹಿಸಿಕೊಂಡು ಆರು ತಿಂಗಳು ಕಳೆದರೂ ರಾಜ್ಯ ಕಾಂಗ್ರೆಸ್ ಸರ್ಕಾರ ನನಗೆ ಕಾರು ನೀಡಿಲ್ಲ ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಗಂಭೀರವಾಗಿ ಆರೋಪಿಸಿದ್ದರು. ಇದೀಗ ಈ ಆರೋಪಗಳಿಗೆ ಸ್ಪಷ್ಟನೆ ನೀಡಿರುವ ಕಾಂಗ್ರೆಸ್ ಕುಮಾರಸ್ವಾಮಿ ಅವರಿಗೆ ಕಾರು ಹಂಚಿಕೆ ಮಾಡಿರುವುದಾಗಿ ಹೇಳಿದೆ. ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿದ ಕಾಂಗ್ರೆಸ್ ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷರಾದ ರಮೇಶ್ ಬಾಬು, ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅವರ ಅಪೇಕ್ಷೆಯಂತೆ ಹೊಸ ಟೊಯೋಟಾ ಇನ್ನೋವಾ ಹೈಕ್ರಾಸ್ ವಾಹನ ಹಂಚಿಕೆ ಆಗಿರುತ್ತದೆ. ಮಂಡ್ಯ ಜಿಲ್ಲಾಧಿಕಾರಿಗಳು ಹೊಸ ಕಾರನ್ನು ಪಡೆಯಲು ಕೇಂದ್ರ ಸಚಿವರನ್ನು ಕೋರಿದ್ದು, ಧನುರ್ ಮಾಸದ ಕಾರಣ ನೀಡಿ ಸಂಕ್ರಾಂತಿಯ ನಂತರ ಹೊಸ ಕಾರು ಪಡೆಯುವುದಾಗಿ ತಿಳಿಸಿರುತ್ತಾರೆ ಎಂದು ತಿಳಿದುಬಂದಿದೆ.

# ಜನರ ತಾಳ್ಮೆಯ ಕಟ್ಟೆ ಒಡೆಯುವ ಮುನ್ನ ಸರ್ಕಾರ ತಪ್ಪಿತಸ್ಥರನ್ನು ಬಗ್ಗು ಬಡಿಯಬೇಕು

● ರಾಕ್ಷಸಿ ಮನಸ್ಥಿತಿಯ ಪಾಪಿಗಳು ನಿರ್ದಯವಾಗಿ ಹಸುಗಳ ಕೆಚ್ಚಲನ್ನು ಭೀಕರವಾಗಿ ಕತ್ತರಿಸಿರುವುದು ಅತ್ಯಂತ ಹೇಯ, ಅಮಾನುಷ ಹಾಗೂ ಖೂಳ ಕೃತ್ಯ

• ಉದಯವಾಹಿನಿ, ಬೆಂಗಳೂರು

ರಾಕ್ಷಸಿ ಮನಸ್ಥಿತಿಯ ಪಾಪಿಗಳು

ರಸ್ತೆಯಲ್ಲಿ ಮಲಗಿದ್ದ ಮೂರು ಹಸುಗಳ ಕೆಚ್ಚಲನ್ನು ದುಷ್ಕರ್ಮಿಗಳು ಕೊಯ್ದ ವಿಕೃತಿ ಮೆರೆದಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕೃತ್ಯದ ಹಿಂದಿನ ಶಕ್ತಿಗಳನ್ನು ತಕ್ಷಣ ಬಗ್ಗುಬಡಿಯಬೇಕು ಎಂದು ಆಗ್ರಹಿಸಿದ್ದಾರೆ. ಗೋವು' ಎಂದರೆ ಸಕಲ ಜೀವರಾಶಿಗಳಿಗೂ ಮಾತೆ. ಹೀಗಾಗಿ ಹಿಂದೂಗಳು ಗೋವನ್ನು ಮಾತೃದೇವತೆಯ ಸ್ಥಾನ ನೀಡಿ ಕಾಮಧೇನು ಎಂದು ಪೂಜಿಸುತ್ತಾರೆ. ಕರ್ನಾಟಕದ ಸಂಸ್ಕೃತಿಯಲ್ಲಿ ಪುಣ್ಯಕೋಟಿಯ ಕಥೆಯ ಹಾಡು ಜಗತ್ತಿನ ಮೂಲೆ ಮೂಲೆಗೂ ಪಸರಿಸಿದೆ.

ನಾಡಿದ್ದು ಮಕರ ಸಂಕ್ರಾಂತಿಯಂದು ಗೋ ಮಾತೆಗೆ ಪೂಜೆ ಸಲ್ಲಿಸುವುದು ಹಬ್ಬದ ಆಚರಣೆಯ ಮಹತ್ವದ ಭಾಗ, ಇಂತಹ ಪಾವಿತ್ರ್ಯತೆಯ ಸಂದರ್ಭದಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ರಾಕ್ಷಸಿ ಮನಸ್ಥಿತಿಯ ಪಾಪಿಗಳು ನಿರ್ದಯವಾಗಿ ಹಸುಗಳ ಕೆಚ್ಚಲನ್ನು ಭೀಕರವಾಗಿ ಕತ್ತರಿಸಿರುವುದು ಅತ್ಯಂತ ಹೇಯ, ಅಮಾನುಷ ಹಾಗೂ ಖೂಳ ಕೃತ್ಯವಾಗಿದ್ದು ಇದನ್ನು ಅತ್ಯುಗ್ರವಾಗಿ ಖಂಡಿಸುತ್ತದೆ ಎಂದಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ, ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಮೊನ್ನೆಯಷ್ಟೇ ಗೋಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಪ್ರಕಟಿಸಿದೆ, ಇದೆಲ್ಲವೂ ಗೋ ಭಕ್ಷಕ ಜನರ ಓಲೈಕೆಗಾಗಿ ಅಲ್ಲದೆ ಬೇರೇನೂ ಅಲ್ಲ ಎಂದಿದ್ದಾರೆ. ಇರಿಯುವುದು, ಕತ್ತರಿಸುವುದನ್ನು ಕೇಳಿದ್ದೇವೆ, ಆದರೆ ಮಾತ್ರ ಕೊರತೆ ನೀಗಿಸಲು ಕ್ಷೀರಧಾರೆ ಹರಿಸುವ ಕೆಚ್ಚಲನ್ನೇ ಕತ್ತರಿಸುವಷ್ಟು ಪರಮ ನೀಚ ಕೃತ್ಯಕ್ಕೆ ಇಳಿದಿರುವ ಘಟನೆ ಕರ್ನಾಟಕದ ರಾಜಧಾನಿಯಲ್ಲೇ ನಡೆಯುತ್ತಿದೆ



ಅಂದರೆ ಇದರ ಹಿಂದಿರುವ ಕುಮ್ಮಕ್ಕಿನ ಶಕ್ತಿ ಯಾವುದು ಎನ್ನುವುದು ಊಹಿ ಸಿಕೊಳ್ಳದಷ್ಟು ಕರುನಾಡಿನ ಜನತೆ ಮುಗ್ಧರಲ್ಲ, ಕೃತ್ಯ ನಡೆದಿರುವ ಕ್ಷೇತ್ರ ಯಾರ ಮುಷ್ಟಿಯಲ್ಲಿದೆ, ಈ ರಾಜ್ಯ ಆಳುತ್ತಿರುವವರ ಮನಸ್ಥಿತಿ ಯಾರ ಪರವಿದೆ ಎನ್ನುವುದು ಎಲ್ಲಾರಿಗೂ ತಿಳಿದ ವಿಚಾರವೇ ಎಂದು ಗುಡುಗಿದ್ದಾರೆ.

### ದುಷ್ಕರ್ಮಿಗಳ ವಿರುದ್ಧ ಎಫ್‌ಐಆರ್ ದಾಖಲು

ದುಷ್ಕರ್ಮಿಗಳ ವಿರುದ್ಧ ಬೆಂಗಳೂರಿನ ಕಾಟನ್ ಪೇಟೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ವಿನಾಯಕ ನಗರದಲ್ಲಿ ರಸ್ತೆಯಲ್ಲಿ ಮಲಗಿದ್ದ ಮೂರು ಹಸುಗಳ ಕೆಚ್ಚಲನ್ನೆ ಕೊಯ್ದು ಕಿಡಿಗೇಡಿಗಳು ವಿಕೃತಿ ಮೆರೆದಿದ್ದರು. ಕೃತ್ಯದ ಬಗ್ಗೆ ರಾಜ್ಯಾದ್ಯಂತ ತೀವ್ರ ಖಂಡನೆ ವ್ಯಕ್ತವಾಗಿದೆ. ಈ ನಡುವೆ ಕಾಟನ್ ಪೇಟೆ ಪೊಲೀಸ್ ಠಾಣೆಯಲ್ಲಿ ಕಿಡಿಗೇಡಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಪ್ರಾಣಿಹಿಂಸಾ ತಡೆ ಕಾಯ್ದೆಯಡಿ ಎಫ್ ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗಾಗಿ ಹುಡುಕಾಟ ನಡೆಸಿದ್ದಾರೆ.

### 1 ಲಕ್ಷ ರೂ. ಪರಿಹಾರ ಘೋಷಿಸಿದ ಆರ್. ಅಶೋಕ್.!

ರಸ್ತೆಯಲ್ಲಿ ಮಲಗಿದ್ದ 3 ಹಸುಗಳ ಕೆಚ್ಚಲನ್ನು ದುಷ್ಕರ್ಮಿಗಳು ಕೊಯ್ದಿದ್ದಾರೆ. ಘಟನೆ ಬೆನ್ನಲ್ಲೇ ವಿಪಕ್ಷ ನಾಯಕ ಆರ್.ಅಶೋಕ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹಸುಗಳ ಮಾಲೀಕರಿಗೆ 1 ಲಕ್ಷ ರೂ.ಪರಿಹಾರ ಘೋಷಿಸಿರುವ ಆರ್. ಅಶೋಕ್ ಅವರು, ಪಶು ಆಸ್ಪತ್ರೆ ಉಳಿವಿಗಾಗಿ ಈ ಹಿಂದೆ ಹೋರಾಟ ಮಾಡಲಾಗಿತ್ತು. ಆ ಹೋರಾಟದಲ್ಲಿ ಈ ಹಸುಗಳು ಕೂಡ ಭಾಗಿಯಾಗಿದ್ದವು. ಬ್ರಿಟಿಷರ ಕಾಲದಿಂದಲೂ ಇರುವ ಪಶು ಆಸ್ಪತ್ರೆ ಉಳಿವಿಗಾಗಿ ನಡೆದಿದ್ದ ಬೃಹತ್ ಹೋರಾಟಕ್ಕೆ ಈ ಹಸುಗಳನ್ನು ಬಳಸಿಕೊಂಡಿದ್ದರಿಂದ ಇಂದು ಮೂಕಪ್ರಾಣಿಗಳಾಗಿರುವ ಈ ಹಸುಗಳ ಮೇಲೆ ದುಷ್ಕೃತ್ಯವೆಸಗಲಾಗಿದೆ ಎಂದು ಆರೋಪಿಸಿದ್ದಾರೆ. ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಒಂದು ಘಟನೆ ನಡೆದಿದೆ.

ದಿನದಿಂದ ದಿನಕ್ಕೆ ಹಿಂದೂ ಆಚಾರ -ವಿಚಾರ ಹಾಗೂ ಜನರ ಮೇಲೆ ನಡೆಯುತ್ತಿರುವ ಅಟ್ಟಹಾಸ ಮೇರೆ ಮೀರುತ್ತಿದೆ. ಜನರ ತಾಳ್ಮೆಯ ಕಟ್ಟೆ ಒಡೆಯುವ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಸರ್ಕಾರ ಎಚ್ಚೆತ್ತುಕೊಂಡು ಇಂತಹ ಕೃತ್ಯಗಳ ಹಿಂದಿರುವ ಶಕ್ತಿಯನ್ನು ಬಗ್ಗು ಬಡಿಯದಿದ್ದರೆ ಇದಕ್ಕೆ ಕುಮ್ಮಕ್ಕು ನೀಡುತ್ತಿರುವವರು ಸರ್ಕಾರದೊಳಗಿನ ಶಕ್ತಿಗಳು ಎಂಬ ತೀರ್ಮಾನಕ್ಕೆ ಜನ ಬರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.



**ಸಿದ್ಧಸೂಕ್ತಿ**

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

## ಆಹಾರ ನಿದ್ರಾ ಭಯ ಮೈಥುನಂ ಚ

ಸಾಮಾನ್ಯಮೇತತ್ ಪಶುಭಿರ್ನರಾಣಾಂ.
ಧರ್ಮೋ ಹಿ ತೇಷಾಮಧಿಕೋ ವಿಶೇಷಃ
ಧರ್ಮೇಣ ಹೀನಾಃ ಪಶುಭಿಸ್ಸಮಾನಾಃ.

ತಿನ್ನುವುದು ಕುಡಿಯುವುದು ನಿದ್ದೆ ಮಾಡುವುದು ಭಯಪಡುವುದು ಹೆದುರಿಸುವುದು ದೇಹಸುಖಪಡುವುದು ಮುಂತಾದುದನ್ನು ಮನುಷ್ಯನಂತೆ ಪ್ರಾಣಿಗಳೂ ಮಾಡುತ್ತವೆ. ಮನುಷ್ಯನ ಜೀವನ ಇಷ್ಟಕ್ಕೆ ಮಾತ್ರ ಸೀಮಿತವಾದರೆ ಮನುಷ್ಯ ಇತರ ಪ್ರಾಣಿಗಳಿಗೆ ಸಮ. ಜೀವನ ಶೈಲಿ ಅದ್ದೂರಿಯಾಗಿರಬಹುದಷ್ಟೇ. ಆದರೆ ಜೀವನದ ವಿಧಾನ ಗುರಿ ಮಾತ್ರ ಪ್ರಾಣಿಗಳಂತೆ. ಮನುಷ್ಯ ತಾನು ಇತರ ಪ್ರಾಣಿಗಳಿಗಿಂತ ಭಿನ್ನ ಶ್ರೇಷ್ಠ ಎನ್ನುವುದಾದರೆ ಆತನ ಜೀವನ ಇಷ್ಟಕ್ಕೆ ಮಾತ್ರ ಸೀಮಿತವಾಗದೇ ವಿಶಿಷ್ಟವಾಗಬೇಕು. ಧರ್ಮಮಯ ಬದುಕು ಮಾತ್ರ ವಿಶಿಷ್ಟವಾಗಬಲ್ಲುದು. ಧರ್ಮದ ಬದುಕಿಲ್ಲದ ಪೈಶಾಚಿಕ ಬದುಕು ಮನುಷ್ಯನ ಬದುಕಲ್ಲ. ಅಂಥವನು ಪಶುವಿಗಿಂತ ಕಡೆ.

# ಜಮೀರ್ ಅವರೇ ನಿಮ್ಮದೇ ಕ್ಷೇತ್ರದಲ್ಲಿ ಸಮಾಜ ತಲೆತಗ್ಗಿಸುವ ಕೃತ್ಯ ನಡೆದಿದೆ

### ಮಲಗಿದ್ದ ಹಸುಗಳ ಕೆಚ್ಚಲು ಕೊಯ್ದ ಘಟನೆಗೆ ರಾಜ್ಯ ಬಿಜೆಪಿ ತೀವ್ರ ಖಂಡನೆ, ಪ್ರಕರಣ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್

• ಉದಯವಾಹಿನಿ, ಬೆಂಗಳೂರು

ಮಲಗಿದ್ದ ಹಸುಗಳ ಕೆಚ್ಚಲು ಕೊಯ್ದ ಘಟನೆಗೆ ರಾಜ್ಯ ಬಿಜೆಪಿ ತೀವ್ರ ಖಂಡನೆ ವ್ಯಕ್ತಪಡಿಸಿದ್ದು. ನಿಮ್ಮದೇ ಕ್ಷೇತ್ರದಲ್ಲಿ ಸಮಾಜ ತಲೆತಗ್ಗಿಸುವ ಕೃತ್ಯ ನಡೆದಿದೆ. ನೀವು ಮಾತ್ರ ಕಾಣೆ ಆಗಿರುವುದು ಏಕೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ಪ್ರಶ್ನಿಸಿದೆ. ಪ್ರಕರಣ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ, ಮತಾಂಧರ ಅಡ್ಡೆಯಾಗಿರುವ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಕಿಡಿಗೇಡಿಗಳು ಬ್ಲಡ್‌ನಿಂದ ಗೋಮಾತೆಯ ಕೆಚ್ಚಲು ಕೊಯ್ದು ವಿಕೃತಿ ಮೆರೆದಿದ್ದಾರೆ. ಸಮಾಜಘಾತುಕರು ಚಾಮರಾಜಪೇಟೆಯ ವಿನಾಯಕ ನಗರದ ನಿವಾಸಿ ಕರ್ಣ ಎಂಬುವವರಿಗೆ ಸೇರಿದ 8 ಹಸುಗಳ ಪೈಕಿ 3 ಹಸುಗಳ ಕೆಚ್ಚಲು ಕೊಯ್ದಿದ್ದಾರೆ.

ಚಾಮರಾಜಪೇಟೆಯ ಪಶು ಆಸ್ಪತ್ರೆಯನ್ನು ತೆರುವು ಮಾಡಲು ಭ್ರಷ್ಟ ಕಾಂಗ್ರೆಸ್ ಹೊಂಚು ಹಾಕಿ ಕೂತಿತ್ತು. ಈ ಹಿನ್ನೆಲೆ ಆಸ್ಪತ್ರೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟಕ್ಕೆ ಹಸುಗಳ ಮಾಲೀಕ ಸಿದ್ದರಾಗಿದ್ದರು. ಇದರ ನಡುವೆ ಇಂಥ ಅಮಾನವೀಯ ಘಟನೆ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಮಿಸ್ಟರ್ ಜಮೀರ್ ಅವರೇ, ನಿಮ್ಮದೇ ಕ್ಷೇತ್ರದಲ್ಲಿ ಸಮಾಜ ತಲೆತಗ್ಗಿಸುವ ಕೃತ್ಯ ನಡೆದಿದೆ. ನೀವು ಮಾತ್ರ ಕಾಣೆ ಆಗಿರುವುದು ಏಕೆ ಎಂದು ಪ್ರಶ್ನಿಸಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿವೈ. ವಿಜಯೇಂದ್ರ ಅವರು ಪೋಸ್ಟ್ ಮಾಡಿ, ಗೋವು' ಎಂದರೆ ಸಕಲ ಜೀವರಾಶಿಗಳಿಗೂ ಮಾತೆ. ಹೀಗಾಗಿ ಹಿಂದೂಗಳು ಗೋವನ್ನು ಮಾತೃದೇವತೆಯ ಸ್ಥಾನ ನೀಡಿ ಕಾಮಧೇನು ಎಂದು ಪೂಜಿಸುತ್ತಾರೆ.



ಉದಯವಾಹಿನಿ ಚಿತ್ರ

**ನೀವು ಮಾತ್ರ ಕಾಣೆ ಆಗಿರುವುದು ಏಕೆ?**

ಕರ್ನಾಟಕದ ಸಂಸ್ಕೃತಿಯಲ್ಲಿ ಪುಣ್ಯಕೋಟಿಯ ಕಥೆಯ ಹಾಡು ಜಗತ್ತಿನ ಮೂಲೆ ಮೂಲೆಗೂ ಪಸರಿಸಿದೆ. ನಾಡಿದ್ದು ಮಕರ ಸಂಕ್ರಾಂತಿಯಂದು ಗೋ ಮಾತೆಗೆ ಪೂಜೆ ಸಲ್ಲಿಸುವುದು ಹಬ್ಬದ ಆಚರಣೆಯ ಮಹತ್ವದ ಭಾಗ, ಇಂತಹ ಪಾವಿತ್ರ್ಯತೆಯ ಸಂದರ್ಭದಲ್ಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ರಾಕ್ಷಸಿ ಮನಸ್ಥಿತಿಯ ಪಾಪಿಗಳು ನಿರ್ದಯವಾಗಿ ಹಸುಗಳ ಕೆಚ್ಚಲನ್ನು ಭೀಕರವಾಗಿ ಕತ್ತರಿಸಿರುವುದು ಅತ್ಯಂತ ಹೇಯ, ಅಮಾನುಷ ಹಾಗೂ ಖೂಳ ಕೃತ್ಯವಾಗಿದ್ದು ಇದನ್ನು ಬಿಜೆಪಿ ಅತ್ಯುಗ್ರವಾಗಿ ಖಂಡಿಸುತ್ತದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದೆ. ಮೊನ್ನೆಯಷ್ಟೇ ಗೋಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಪ್ರಕಟಿಸಿದೆ. ಇದೆಲ್ಲವೂ ಗೋ ಭಕ್ಷಕ ಜನರ ಓಲೈಕೆಗಾಗಿ ಅಲ್ಲದೆ ಬೇರೇನೂ ಅಲ್ಲ. ಇರಿಯುವುದು, ಕತ್ತರಿಸುವುದನ್ನು ಕೇಳಿದ್ದೇವೆ, ಆದರೆ ಮಾತ್ರ ಕೊರತೆ ನೀಗಿಸಲು ಕ್ಷೀರಧಾರ ಹರಿಸುವ ಕೆಚ್ಚಲನ್ನೇ ಕತ್ತರಿಸುವಷ್ಟು ಪರಮ ನೀಚ ಕೃತ್ಯಕ್ಕೆ ಇಳಿದಿರುವ ಘಟನೆ ಕರ್ನಾಟಕದ ರಾಜಧಾನಿಯಲ್ಲೇ ನಡೆಯುತ್ತಿದೆ ಎಂದರೆ ಇದರ ಹಿಂದಿರುವ ಕುಮ್ಮಕ್ಕಿನ ಶಕ್ತಿ ಯಾವುದು ಎನ್ನುವುದು ಊಹಿಸಿಕೊಳ್ಳದಷ್ಟು ಕರುನಾಡಿನ ಜನತೆ ಮುಗ್ಧರಲ್ಲ. ಕೃತ್ಯ ನಡೆದಿರುವ ಕ್ಷೇತ್ರ ಯಾರ ಮುಷ್ಟಿಯಲ್ಲಿದೆ, ಈ ರಾಜ್ಯ ಆಳುತ್ತಿರುವವರ ಮನಸ್ಥಿತಿ ಯಾರ ಪರವಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ.

> **ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಪ್ರತಿಕ್ರಿಯಿಸಿ, ಬೆಂಗಳೂರಿನ ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಹಸುಗಳ ಕೆಚ್ಚಲು ಕೊಯ್ದಿರುವ ಘಟನೆ ಅತ್ಯಂತ ಖಂಡನೀಯವಾಗಿದ್ದು ಗೋಮಾತೆಯ ಕೆಚ್ಚಲು ಕತ್ತರಿಸಿದ ಪಾಪಿಗಳನ್ನು ಸರ್ಕಾರ ಈ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.**

> **ದಿನದಿಂದ ದಿನಕ್ಕೆ ಹಿಂದೂ ಆಚಾರ-ವಿಚಾರ ಹಾಗೂ ಜನರ ಮೇಲೆ ನಡೆಯುತ್ತಿರುವ ಅಟ್ಟಹಾಸ ಮೇರೆ ಮೀರುತ್ತಿದೆ. ಜನರ ತಾಳ್ಮೆಯ ಕಟ್ಟೆ ಒಡೆಯುವ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಎಚ್ಚೆತ್ತುಕೊಂಡು ಇಂತಹ ಕೃತ್ಯಗಳ ಹಿಂದಿರುವ ಶಕ್ತಿಯನ್ನು ಬಗ್ಗು ಬಡಿಯದಿದ್ದರೆ ಇದಕ್ಕೆ ಕುಮ್ಮಕ್ಕು ನೀಡುತ್ತಿರುವವರು ಸರ್ಕಾರದೊಳಗಿನ ಶಕ್ತಿಗಳು ಎಂಬ ತೀರ್ಮಾನಕ್ಕೆ ಜನ ಬರಬೇಕಾಗುತ್ತದೆ ಎಂದು ತಿಳಿಸಿದ್ದಾರೆ.**

## ಬಿ.ಎಂ.ಶ್ರೀ ಕಲಾಭವನದಲ್ಲಿ ಜರುಗಿದ ಭಾವಗೀತೆಗಳ ರಸದೌತಣ





ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನರಸಿಂಹರಾಜ ಕಾಲೋನಿಯ ಬಿಎಂಶ್ರೀ ಕಲಾಭವನದಲ್ಲಿ ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ ಜ. 11 ರಂದು ಏರ್ಪಡಿಸಿದ್ದ ಶ್ರೀಮತಿ ರಂಗನಾಯಕಮ್ಮ ಮತ್ತು ಶ್ರೀ ಜಿ. ಸುಬ್ಬರಾವ್ ದತ್ತಿ ಕಾರ್ಯಕ್ರಮದ ಅಡಿಯಲ್ಲಿ ವಿದುಷಿ ಶ್ರೀಮತಿ ಭವಾನಿ ಎಂ. ರಾವ್ ಅವರು ನಾಡಿನ ಪ್ರತಿಷ್ಠಿತ ಕವಿಗಳಿಂದ ರಚಿಸಲ್ಪಟ್ಟ ಪ್ರಸಿದ್ಧ ಭಾವಗೀತೆಗಳನ್ನು ಪ್ರಸ್ತುತ ಪಡಿಸಿದರು. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಜಯ ಜಯ ಜಯ ಕನ್ನಡ ರಾಜೇಶ್ವರಿ, ಬಿ.ಎಂ.ಶ್ರೀ. ಅವರ ಕರುಣಾಳು ಬಾ ಬೆಳಕೆ,ಎಚ್.ಎಸ್. ವೆಂಕಟೇಶಮೂರ್ತಿ ಅವರ ಎಲ್ಲಿಯ ನೀತಿ ಎಲ್ಲಿಯ ನೇಮ,ಜಿ.ಎಸ್. ಶಿವರುದ್ರಪ್ಪ ಅವರ ಎಲ್ಲೋ ಹುಡುಕಿದೆ ಇಲ್ಲದ ದೇವರ ಮತ್ತು ಎದೆ ತುಂಬಿ ಹಾಡಿದೆನು, ನಿಸಾರ್ ಅಹಮದ್ ಅವರ ಜೋಗದ ಸಿರಿ ಬೆಳಕಿನಲ್ಲಿ, ಕನಕದಾಸರ ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ ಗೀತೆಗಳನ್ನು ಹಾಡಿದರು. ಇವರ ಗಾಯನಕ್ಕೆ ಕೀ-ಬೋರ್ಡ್ ವಾದನದಲ್ಲಿ ಶ್ರೀ ಟಿ.ಎಸ್. ರಮೇಶ್ ಮತ್ತು ತಬಲಾ ವಾದನದಲ್ಲಿ ಶ್ರೀ ಶ್ರೀನಿವಾಸ ಕಾಖಂಡಕಿ ಸಾಥ್ ನೀಡಿದರು. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಮುಖ್ಯಸ್ಥರಾದ ಶ್ರೀ ಗುರುಪ್ರಸಾದ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಡಾ|| ಶಾಂತರಾಜು ವಂದನಾರ್ಪಣೆ ಮಾಡಿದರು.

## ರೌಡಿ ಶೀಟರ್ ಆಕೆ ಹಾಗೂ ಆಕೆಯ ತಮ್ಮನ ಮೇಲೆ ದಾಳಿ

• ಉದಯವಾಹಿನಿ, ಬೆಂಗಳೂರು

ರೌಡಿಶೀಟರ್ ಒಬ್ಬ ತನ್ನ ಬರ್ತಡೆಯ ವೇಳೇ ಗದ್ದಲ ನಡೆಸಿದ್ದಾನೆ. ಈ ವೇಳೆ ಕಿರಿಕಿರಿಯಿಂದ ಪಕ್ಕದ ಮನೆಯ ಮಹಿಳೆ ಒಬ್ಬರು ಗದ್ದಲ ಮಾಡಿರುವುದನ್ನು ಪ್ರಶ್ನಿಸಿದ್ದಾರೆ . ಈ ವೇಳೆ ರೌಡಿ ಶೀಟರ್ ಆಕೆ ಹಾಗೂ ಆಕೆಯ ತಮ್ಮನ ಮೇಲೆ ದಾಳಿ ಮಾಡಿ ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕಿನ ಹೆಬ್ಬಗೋಡಿಯ ತಿರುಪಾಳ್ಯದಲ್ಲಿ ನಡೆದಿದೆ. ಕಳೆದ ಶನಿವಾರ ನಡೆದ ಈ ಒಂದು ಘಟನೆ ತಡವಾಗಿ ಬೆಳಕಿಗೆ ಬಂದಿದೆ. ರೌಡಿಶೀಟರ್ ಕರಿಯ ವಿಜಿ ಈ ಒಂದು ಕೃತ್ಯ ಎಸಗಿದ್ದಾನೆ.

ಕರಿಯ ವಿಜಿ ತನ್ನ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮದ್ಯ ಪಾರ್ಟಿ ಆಯೋಜಿಸಿದ್ದ. ಮದ್ಯದ ಅಮಲಿನಲ್ಲಿ ಡಿಜೆ ಗದ್ದಲವೂ ಜೋರಾಗಿತ್ತು.

ಇದನ್ನು ಪಕ್ಕದ ಮನೆಯ ಮಂಜುಳಾ ಪ್ರಶ್ನಿಸಿದ್ದಾರೆ. ಇದರಿಂದ ಕೆರಳಿದ ರೌಡಿಶೀಟರ್, ಚಾಕುವಿನಿಂದ ಇರಿದಿದ್ದಾನೆ ಎಂದು ನೆರೆಮನೆಯವರು ತಿಳಿಸಿದ್ದಾರೆ.

ಘಟನೆ ನಡೆದ ಬಳಿಕ ರೌಡಿ ಶೀಟರ್ ಕರಿಯ ವಿಜಿ ಹಾಗೂ ಆತನ ಜೊತೆಗೆ ಇದ್ದಂತಹ ಉಳಿದವರು ತಲೆಮರೆಸಿಕೊಂಡಿದ್ದು, ಘಟನಾ ಸ್ಥಳಕ್ಕೆ ಹೆಬ್ಬಗೋಡಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಈ ಕುರಿತು ಹೆಬ್ಬಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.



ಉದಯವಾಹಿನಿ ಚಿತ್ರ

## ಗನ್ ಲೈಸೆನ್ಸ್ ಬಗ್ಗೆ ಸ್ಪಷ್ಟನೆ ನೀಡುವಂತೆ ನೋಟಿಸ್ ಜಾರಿ!

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಟ ದರ್ಶನ್ ಸೇರಿದಂತೆ ಎಲ್ಲಾ ಆರೋಪಿಗಳು ಹೈಕೋರ್ಟ್‌ನಿಂದ ರೆಗ್ಯುಲರ್ ಬೇಲ್ ಪಡೆದು ಬಿಡುಗಡೆಯಾಗಿದ್ದಾರೆ.

ಆದರೆ ನಟ ದರ್ಶನ್‌ಗೆ ಜೈಲಿನಿಂದ ಸಂಕಷ್ಟಗಳು ತಪ್ಪುತ್ತಿಲ್ಲ. ಈಗಾಗಲೇ ಹೈ ಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು ಈಗ ಪೊಲೀಸರು ನಟ ದರ್ಶನ್ ಬಳಿ ಇರುವ ಗನ್ ಲೈಸೆನ್ಸ್ ಕುರಿತು ಸ್ಪಷ್ಟನೆ ನೀಡುವಂತೆ ನೋಟಿಸ್ ನೀಡಿದ್ದಾರೆ. ದರ್ಶನ್ ಬಳಿಯಿರುವ ಗನ್ ಲೈಸೆನ್ಸ್ ರದ್ದು ಮಾಡಲು ಪೊಲೀಸ್ ಇಲಾಖೆ ಮುಂದಾಗಿದೆ.

ತಮ್ಮ ಬಳಿಯಿರುವ ಗನ್ ಲೈಸೆನ್ಸ್ ಬಗ್ಗೆ 1 ವಾರದಲ್ಲಿ ಸ್ಪಷ್ಟನೆ ನೀಡುವಂತೆ ಡಿಸಿಪಿ ಪದ್ಮನಿ ಸಾಹು ನೋಟಿಸ್ ನೀಡಿದ್ದಾರೆ. ಅಲ್ಲದೆ ಕೋರ್ಟ್ ಸಹ ನಟ ದರ್ಶನ್ ಅವರಿಗೆ ಬೆಂಗಳೂರಿನಿಂದ ಮೈಸೂರಿಗೆ ತೆರಳಲು ಅನುಮತಿ ನೀಡಿದ್ದು, ಈ ಹಿನ್ನೆಲೆಯಲ್ಲಿ ಅವರು ಬೆಂಗಳೂರಿನಿಂದ ಮೈಸೂರಿಗೆ ತೆರಳಿದ್ದಾರೆ ಎನ್ನಲಾಗಿದೆ. ನೀವು ಕೊಲೆ ಪ್ರಕರಣದ ಆರೋಪಿಯಾಗಿದ್ದೀರಿ.

ಜಾಮೀನಿನ ಮೇಲೆ ಹೊರಗಿರುವುದರಿಂದ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳಿವೆ. ಗನ್ ಇರೋದ್ರಿಂದ ಸಾಕ್ಷಿಗಳನ್ನು ಬೆದರಿಸುವ ಬಗ್ಗೆ ಅನುಮಾನ ಇದೆ. ಆದ್ದರಿಂದ ನಿಮ್ಮ ಲೈಸೆನ್ಸ್ ರದ್ದು ಮಾಡಬೇಕಿದೆ.

ಈ ಬಗ್ಗೆ ಒಂದು ವಾರದೊಳಗೆ ಉತ್ತರಿಸಬೇಕು. ನೋಟಿಸ್‌ಗೆ ಉತ್ತರ ನೀಡಿದ ಬಳಿಕ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.



**ನಟ ದರ್ಶನ್‌ಗೆ ಮತ್ತೊಂದು ಸಂಕಷ್ಟ**

## ಹುಟ್ಟುಹಬ್ಬ ದಿನದಂದೇ ಅಪಘಾತಕ್ಕೆ ಬಲಿ

• ಉದಯವಾಹಿನಿ, ಬೆಂಗಳೂರು

ಹೆಣ್ಣೂರು ಬಂಡೆ ಮುಖ್ಯ ರಸ್ತೆಯಲ್ಲಿ ನಿನ್ನೆ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ವೇದ ಕಲಿಯಲು ಬಂದ ಬಾಲಕ ತಲೆ ಛಿದ್ರಗೊಂಡು ಹುಟ್ಟುಹಬ್ಬದಂದೇ ಸಾವನ್ನಪ್ಪಿದ್ದಾನೆ. ಆಂಧ್ರಪ್ರದೇಶದ ಚಿತ್ತೂರಿನ ಭಾನು ತೇಜ್(12)ಮೃತಪಟ್ಟಿದ್ದು,ಬೈಕ್ ಚಲಾಯಿಸುತ್ತಿದ್ದ ಬಾಲಕನ ಸಂಬಂಧಿ ಚಕ್ರವರ್ತಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆಂಧ್ರ ಪ್ರದೇಶದ ಚಿತ್ತೂರು ಮೂಲದವರಾದ ರವಿ, ಸುಮಾ ದಂಪತಿ ಪುತ್ರ, ಭಾನು ತೇಜ ಆರ್.ಟಿ.ನಗರ ಸತ್ಯಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವೇದ ಕಲಿಯಲು ಗುರುಗಳ ಜೊತೆಗೆ ವಾಸವಾಗಿದ್ದನು. ನಿನ್ನೆ ಭಾನು ತೇಜನ ಹುಟ್ಟುಹಬ್ಬವಿತ್ತು. ಹುಟ್ಟುಹಬ್ಬ ಆಚರಣೆಗಾಗಿ ಹೊರಮಾವುನಲ್ಲಿರುವ ತನ್ನ ಅಕ್ಕನ ಮನೆಗೆ ಹೋಗಿದ್ದನು. ಹುಟ್ಟುಹಬ್ಬ ಆಚರಣೆ ಬಳಿಕ ರಾತ್ರಿ 11.20ರ ಸುಮಾರಿಗೆ ಅಣ್ಣ ಚಕ್ರಧರಣ್ ಜೊತೆಗೆ ಪಲ್ಸರ್ ಬೈಕ್‌ನಲ್ಲಿ ವಾಪಸ್ ಆರ್‌ಟಿ ನಗರದತ್ತ ತೆರಳುತ್ತಿದ್ದನು.

## ಬೆಂಗಳೂರಿಗೆ ರಣದೀಪ್ ಸಿಂಗ್ ಸುರ್ಜೆವಾಲಾ ಆಗಮನ

• ಉದಯವಾಹಿನಿ, ಬೆಂಗಳೂರು

ನಾಳ ಸಂಜೆ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಅಐಕ ಸಭೆ ಹಾಗೂ ಜನವರಿ 21ರಂದು ಬೆಳಗಾವಿಯಲ್ಲಿ ಗಾಂಧಿ ಸಮಾವೇಶದ ಕುರಿತು, ಸೇರಿದಂತೆ ಇನ್ನೂ ಅನೇಕ ವಿಷಯಗಳ ಕುರಿತಂತೆ ಚರ್ಚಿಸಲು ಇಂದು ಬೆಂಗಳೂರಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಆಗಮಿಸಲಿದ್ದಾರೆ ಎಂದು ತಿಳಿದುಬಂದಿದೆ.

ಇದೆ ವೇಳೆ ಎಸ್ ಸಿ, ಎಸ್ ಟಿ ಸಚಿವರಿಂದ ಸಭೆಯ ಕುರಿತು ಅಜೆಂಡ ಮನವರಿಕೆ ಮಾಡುವ ಸಾಧ್ಯತೆ ಇದ್ದು, ಸುರ್ಜೆವಾಲಾಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗುತ್ತದೆ. ಇಂದು ರಾತ್ರಿ ರಣಧೀಪ್ ಸಿಂಗ್ ಸುರ್ಜೆವಾಲಾ ಬೆಂಗಳೂರಿಗೆ ಆಗಮಿಸಲಿದ್ದು ಪಕ್ಷದ ಒಗ್ಗಟ್ಟು ಕಾಪಾಡಲು ಕೆಲವು ಮಹತ್ವದ ಸೂಚನೆ ನೀಡಲಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲಾ ಎಲ್ಲ ನಾಯಕರಿಗೆ ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡುವ ಬಗ್ಗೆ ಸೂಚನೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.ಅಲ್ಲದೇ ನಾಳೆ ಖಾಸಗಿ ಹೋಟೆಲ್ ಸಿ ಎಲ್ ಪಿ ಸಭೆ ನಡೆಯಲಿದ್ದು, ಜನವರಿ 21ರ ಬೆಳಗಾವಿಯಲ್ಲಿ ಗಾಂಧಿ ಸಮಾವೇಶ ಹಾಗೂ ಸಮಾವೇಶದ ಪೂರ್ವ ಸಿದ್ದತೆ ಕುರಿತು ಚರ್ಚಿಸಲಿದ್ದಾರೆ. ಈ ವೇಳೆ ಡಿನ್ನರ್ ಗೆ ಬ್ರೇಕ್ ಹಾಕಿದ ವಿಷಯದ ಕುರಿತು ಚರ್ಚೆ ನಡೆಸಲಾಗುತ್ತದೆ. ಕಾಂಗ್ರೆಸ್ ನಲ್ಲಿ ರಾಜಕೀಯ ಚಟುವಟಿಕೆಗಳು ಇದೀಗ ಬಿರುಸುಗೊಂಡಿವೆ.



ಉದಯವಾಹಿನಿ ಚಿತ್ರ

## ಮೊದಲ ಬಾರಿಗೆ 60 ರೂ. ಗಡಿ ದಾಟಿದ ತೆಂಗಿನಕಾಯಿ ಬೆಲೆ

• ಉದಯವಾಹಿನಿ, ಬೆಂಗಳೂರು

ಮೊದಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಮತ್ತೊಂದು ಶಾಕ್, ಬೆಂಗಳೂರು ಇತಿಹಾಸದಲ್ಲೇ ಮೊದಲ ಬಾರಿಗೆ ತೆಂಗಿನ ಕಾಯಿ ಬೆಲೆ 60 ರೂಪಾಯಿಯ ಗಡಿಯನ್ನು ದಾಟಿದೆ.

ರಾಜ್ಯದಲ್ಲಿ ಈ ಬಾರಿ ಬೇಸಿಗೆಯಲ್ಲಿ ಎಳನೀರಿಗೆ ಸಿಕ್ಕಾಪಟ್ಟೆ ಬೇಡಿಕೆ ಹಿನ್ನೆಲೆ ಎಳನೀರು ಭರ್ಜರಿ ಮಾರಾಟವಾದ ಹಿನ್ನೆಲೆಯಲ್ಲಿ ಈಗ ತೆಂಗಿನಕಾಯಿಯ ಇಳುವರಿ ಕಡಿಮೆ ಆಗಿದೆ. ಆದ್ದರಿಂದ ತೆಂಗಿನ ಕಾಯಿ ಬೆಲೆ ಏರಿಕೆಗೆ ಕಾರಣವಾಗಿದೆ. ಕೆಲ ದಿನಗಳ ಹಿಂದೆಯಷ್ಟೇ ತೆಂಗಿನಕಾಯಿಗೆ 20 ರಿಂದ 30 ರೂ.ವರೆಗೆ ದರ ಇತ್ತು.

ಈಗ 65, ರೂ.ವರೆಗೆ ಮಾರಾಟವಾಗುತ್ತಿದೆ. ಕೆಜಿಗೆ 32 -33 ಗೆ ಮಾರಾಟವಾಗುತ್ತಿದ್ದ ತೆಂಗಿನಕಾಯಿ ಈಗ 60 ರೂ.ಗೆ ತಲುಪಿದೆ. ಈ ಮೂಲಕ ಜನಸಾಮಾನ್ಯರಿಗೆ ಮತ್ತೊಂದು ಶಾಕ್ ಎದುರಾಗಿದೆ.



ಉದಯವಾಹಿನಿ ಚಿತ್ರ

## ವಿಶೇಷ ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸಲು ಜ.20 ಕೊನೆ ದಿನ

• ಉದಯವಾಹಿನಿ, ಬೆಂಗಳೂರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2024 - 25ನೇ ಸಾಲಿನಲ್ಲಿ ಬಿ.ಎಡ್ ನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾಸಿಂಧು (https://sevasindhu. Karnataka.gov.in) ಮೂಲಕ 2025ರ ಜನವರಿ 20 ರ ವರೆಗೂ ಅರ್ಜಿ ಸಲ್ಲಿಸಲು ಅವಧಿಯನ್ನು ವಿಸ್ತರಿಸಲಾಗಿದೆ.



ಉದಯವಾಹಿನಿ ಚಿತ್ರ

**ರಾಜ್ಯದ B.Ed. ವಿದ್ಯಾರ್ಥಿಗಳೇ ಗಮನಿಸಿ**

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೆಬ್ https://dom.karnataka.gov.in 2 ಇಲಾಖೆಯ ಸಹಾಯವಾಣಿ ಸಂಖ್ಯೆ: 8277799990, ಬೆಂಗಳೂರು ಗ್ರಾಮಾಂತರ ಜಿಲ್ಲಾ ದೂರವಾಣಿ ಸಂಖ್ಯೆ: 08022866966, ದೊಡ್ಡಬಳ್ಳಾಪುರ ತಾಲ್ಲೂಕು ಮಾಹಿತಿ ಕೇಂದ್ರ, ದೂರವಾಣಿ ಸಂಖ್ಯೆ: 9986874857, ನೆಲಮಂಗಲ ತಾಲ್ಲೂಕು ಮಾಹಿತಿ ಕೇಂದ್ರ, ದೂರವಾಣಿ ಸಂಖ್ಯೆ: 8660197516, ದೇವನಹಳ್ಳಿ ತಾಲ್ಲೂಕು ಮಾಹಿತಿ ಕೇಂದ್ರ, ದೂರವಾಣಿ ಸಂಖ್ಯೆ: 9591176959, ಹೊಸಕೋಟೆ ತಾಲ್ಲೂಕು ಮಾಹಿತಿ ಕೇಂದ್ರ, ದೂರವಾಣಿ ಸಂಖ್ಯೆ: 7676905779 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ : ಜಿ.ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಕಿಡಿಗೇಡಿಗಳಿಂದ ಪೈಶಾಚಿಕ ಕೃತ್ಯ ನಡೆದಿದ್ದು, ರಸ್ತೆಯ ಮೇಲೆ ಮಲಗಿದಂತಹ ಮೂರು ಹಸುಗಳ ಕೆಚ್ಚಲು ಕೊಯ್ದು ದುಷ್ಕರ್ಮಿಗಳು ವಿಕೃತಿ ಮೆರೆದಿದ್ದಾರೆ. ಇದೀಗ ಈ ವಿಚಾರವಾಗಿ ಗೃಹ ಸಚಿವ ಜಿ.ಪರಮೇಶ್ವರ ಅವರು ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕ್ಕೆ ಸೂಚಿಸುತ್ತೇನೆ ಎಂದು ತಿಳಿಸಿದರು.



Ad removed. Details ಹಸುಗಳ ಕೆಚ್ಚಲು ಕೊಯ್ದು ಕ್ರೌರ್ಯ ಮೆರೆದಿರುವ ಘಟನೆ ಚಾಮರಾಜಪೇಟೆಯ ಓಲ್ಡ್ ಪೆನ್ಷನ್ ಮೊಹಲ್ಲಾದಲ್ಲಿ ನಡೆದಿದೆ. ಕಿಡಿಗೇಡಿಗಳು ರಸ್ತೆಯಲ್ಲಿ ಮಲಗಿದ್ದಂತಹ ಹಸುಗಳ ಕೆಚ್ಚಲು ಕೊಯ್ದಿದ್ದಾರೆ. ಈ ಕುರಿತು ಚಾಮರಾಜಪೇಟೆ ಠಾಣೆಯ ಪೊಲೀಸರ ಜೊತೆಗೆ ನಾನು ಮಾತನಾಡುತ್ತೇನೆ ಕಿಡಿಗೇಡಿಗಳ ವಿರುದ್ಧ ಕಾನೂನು ಪ್ರಕಾರ ಕಠಿಣವಾದಂತಹ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸುತ್ತೇನೆ ಎಂದು ಬೆಂಗಳೂರಿನಲ್ಲಿ ಗೃಹ ಇಲಾಖೆಯ ಸಚಿವ ಡಾ.ಜಿ ಪರಮೇಶ್ವರ್ ಅವರು ತಿಳಿಸಿದರು.

## ವಿವಿಯ ಬಿ.ಕಾಮ್ ಪರೀಕ್ಷೆ ನಡೆಸಲು ಹೈಕೋರ್ಟ್ ವಿಭಾಗೀಯ ಪೀಠದಿಂದ ಗ್ರೀನ್ ಸಿಗ್ನಲ್!

• ಉದಯವಾಹಿನಿ, ಬೆಂಗಳೂರು

ಸಿ ಎ ಫೌಂಡೇಶನ್ ಪರೀಕ್ಷೆಗೆ ಅಡ್ಡಿ ಎಂದು ಬಿಕಾಂ ಪರೀಕ್ಷೆ ಸಿನಿಮಾ ಮುಂದೂಡಲು ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಬೆಂಗಳೂರು ವಿಶ್ವವಿದ್ಯಾಲಯ ಮೇಲ್ಮನವಿ ಸಲ್ಲಿಸಿದ್ದು, ಇದೀಗ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಇಂದು ತುರ್ತು ವಿಚಾರಣೆ ನಡೆದಿದ್ದು, ಬಿಕಾಂ ಪರೀಕ್ಷೆಗಳಿಗೆ ಹೈ ಕೋರ್ಟ್ ಗ್ರೀನ್ ಸಿಗ್ನಲ್ ನೀಡಿದೆ ಪರೀಕ್ಷೆ ಮುಂದೂಡಿಕೆ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಎಂ.ಐ ಅರುಣ್ ಅವರ ಪೀಠದಲ್ಲಿ ಈ ಒಂದು ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಯಿತು. ಸಿ ಎ ಫೌಂಡೇಶನ್ ಪರೀಕ್ಷೆಗೆ ಅಡ್ಡಿ ಎಂದು ಪರೀಕ್ಷೆ ಮುಂದೂಡಲು ಹೈಕೋರ್ಟ್ ಆದೇಶಿಸಿತ್ತು.

ಆರಂಭವಾಗುವ 1,3 ಹಾಗೂ 5ನೇ ಸೆಮಿಸ್ಟರ್ ಬಿಕಾಂ ಪರೀಕ್ಷೆ ಮುಂದೂಡಗೆ ಮಾಡಲಾಗಿತ್ತು. ಕರ್ನಾಟಕ ಮುಂದೂಡಿಕೆಯಿಂದ 40 ರಿಂದ 50 ಸಾವಿರ ಬಿ.ಕಾಮ್ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ.ಹೀಗಾಗಿ ಏಕದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಲು ಮನವಿ ಸಲ್ಲಿಸಿತ್ತು. ಬೆಂಗಳೂರು ವಿಶ್ವವಿದ್ಯಾಲಯದಿಂದ ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಇದೀಗ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಪರೀಕ್ಷೆ ನಡೆಸಲು ಗ್ರೀನ್ ಸಿಗ್ನಲ್ ನೀಡಿದೆ.

# ಕೈ ಸಭೆ, ದಲಿತ ಸಿಎಂ ವಿಚಾರ ಪ್ರಸ್ತಾಪ ಸಾಧ್ಯತೆ!

### ಪರಮೇಶ್ವರ್ ಅವರ ನಿವಾಸದಲ್ಲಿ ನಡೆದ ನಾಯಕರ ಮಾತುಕತೆಗಳು ಸಿಎಲ್‌ಪಿ ಸಭೆ

• ಉದಯವಾಹಿನಿ, ಬೆಂಗಳೂರು

ಆಡಳಿತಾರೂಢ ಕಾಂಗ್ರೆಸ್ ಪಾಳಯದಲ್ಲಿ ಸಿಎಂ ಕುರ್ಚಿಗಾಗಿ ಕಾದಾಟಗಳು ಮುಂದುವರೆದಿರುವ ನಡುವಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಕರೆದಿದ್ದು, ಈ ಸಭೆ ಸಾಕಷ್ಟು ಕುತೂಹಲಗಳನ್ನು ಮೂಡಿಸಿದೆ. ಮುಖ್ಯಮಂತ್ರಿಗಳು ಸಭೆ ಕರೆದಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದೊಳಗೆ ಇರುವ ಬಣಗಳು ಸಕ್ರಿಯವಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಇರುವ ಬಣವು ದಲಿತ ಮುಖ್ಯಮಂತ್ರಿಗಾಗಿ ಆಗ್ರಹಿಸುತ್ತಿದ್ದು. ಸಭೆ ವೇಳೆ ಈ ಕುರಿತ ಸಂದೇಶವನ್ನು ಪಕ್ಷದ ಹೈಕಮಾಂಡ್ ಗೆ ಪರೋಕ್ಷವಾಗಿ ರವಾನಿಸುವ ಸಾಧ್ಯತೆಯಿದೆ.

> **ಜೀವನಶೈಲಿ ಸಿದ್ದರಾಮಯ್ಯ ಅವರ ಬೆಂಬಲಿಗರಾದ ರಾಜಣ್ಣ ಅವರು, ಹೈಕಮಾಂಡ್ ಸಂದೇಶ ರವಾನಿಸುವ ಸಲುವಾಗಿ ಈ ಹೇಳಿಕೆಗಳನ್ನು ನೀಡಿರಬಹುದು ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ.**

ಈ ನಡುವೆ ಶನಿವಾರ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್ ಕೆ ಪಾಟೀಲ್ ಮತ್ತು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಅವರು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರ ಮನೆಗೆ ಭೇಟಿ ನೀಡಿದ್ದು, ಈ ಭೇಟಿ ಮಹತ್ವ ಪಡೆದುಕೊಂಡಿದೆ.

ಪರಮೇಶ್ವರ್ ಅವರ ನಿವಾಸದಲ್ಲಿ ನಡೆದ ನಾಯಕರ ಮಾತುಕತೆಗಳು ಸಿಎಲ್‌ಪಿ ಸಭೆಯಲ್ಲಿ ಪ್ರಸ್ತಾಪವಾಗುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ. 2023 ರಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ, ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವಲ್ಲಿ ಯಶಸ್ವಿಯಾದ ಸಿದ್ದರಾಮಯ್ಯ ಅವರು, ತಮ್ಮ ಅಧಿಕಾರಾವಧಿಯ ಎರಡು ವರ್ಷಗಳನ್ನು ಪೂರ್ಣಗೊಳಿಸಿದ ನಂತರ ಅಧಿಕಾರ ಹಸ್ತಾಂತರಿಸಬೇಕಿದ್ದು, ಇದಕ್ಕೆ ಅವರು ಬದ್ಧರಾಗಿದ್ದಾರೆ. ಆದರೆ, ತಾವು ಆಯ್ಕೆ ಮಾಡಿದ ನಾಯಕ ಮುಖ್ಯಮಂತ್ರಿಯಾಗಬೇಕೆಂದು ಬಯಸುತ್ತಿದ್ದಾರೆದು ಉನ್ನತ ಮೂಲಗಳು ಮಾಹಿತಿ ನೀಡಿವೆ. ಡಿಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ನಾಯಕತ್ವನ್ನು ವಿರೋಧಿಸಿದ ರೀತಿಯೇ ಈ ನಿಲುವುಗೆ ಕಾರಣವೆಂದಬ ಮೂಲಗಳು ತಿಳಿಸಿವೆ.ಈ ಉದ್ದೇಶದಿಂದಲೇ ಪರಮೇಶ್ವರ್ ಅವರ ಪರ ಅಭಿಪ್ರಾಯ ಮೂಡಿಸಲು ಎಸ್‌ಸಿ/ಎಸ್‌ಟಿ ಶಾಸಕರ ಸಭೆ ನಡೆಸುವಂತೆ ಸೂಚಿಸಿದ್ದರು ಎನ್ನಲಾಗಿದೆ. ಆದರೆ, ಶಿವಕುಮಾರ್ ಅವರು ಹೈಕಮಾಂಡ್ ಮೂಲಕ ಸಭೆಗೆ ಬ್ರೇಕ್ ಹಾಕಿಸಿದ್ದರು ಎನ್ನಲಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಕರ್ನಾಟಕದ ಉಸ್ತುವಾರಿ) ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಡಾ. ಪರಮೇಶ್ವರ್ ಅವರಿಗೆ ಸಭೆ ನಡೆಸದಂತೆ ಸೂಚಿಸಿದ್ದರು.

ಆದರೆ, ಅವರ ಸೂಚನೆಯನ್ನು ಪಾಲಿಸಿದ ಡಾ. ಪರಮೇಶ್ವರ್ ಅವರು, ನಾವು ಸಭೆಯನ್ನು ರದ್ದುಗೊಳಿಸಿಲ್ಲ. ಮುಂದೂಡಿದ್ದೇವಷ್ಟೇ. ಶೀಘ್ರದಲ್ಲೇ ಸಭೆ ನಡೆಸಲಾಗುವುದು ಎಂದು ಹೇಳಿದ್ದರು. ಸಭೆ ವಿಚಾರವಾಗಿ ಸಚಿವ ರಾಜಣ್ಣ ಅವರು ಹೈಕಮಾಂಡ್ ಹಾಗೂ ಡಿಕೆ.ಶಿವಕುಮಾರ್ ವಿರುದ್ಧ ಬಹಿರಂಗವಾಗಿಯೇ ಅಸಮಾಧಾ ಹೊರಹಾಕಿದ್ದರು. ಸಭೆ ಹಿನ್ನೆಲೆಯಲ್ಲಿ ರಣದೀಪ್ ಸುರ್ಜೇವಾಲಾ ಅವರು ಇಂದು ನಗರಕ್ಕೆ ಆಗಮಿಸಲಿದ್ದು, ಈ ವೇಳೆ ಸಿದ್ದು ಬಣದಲ್ಲಿರುವ ಡಾ. ಪರಮೇಶ್ವರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಇತರೆ ನಾಯಕರು ಸುರ್ಜೇವಾಲಾ ಅವರನ್ನು ಭೇಟಿ ಮಾಡಿ, ಸಿದ್ದರಾಮಯ್ಯ ಅವರ ಸಲಹೆಯಂತೆ ದಲಿತ ನಾಯಕನನ್ನು ಮುಂದಿನ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಒತ್ತಾಯಿಸುವ ಸಾಧ್ಯತೆಯಿದೆ, ಒಂದು ವೇಳೆ ಪಕ್ಷವು ಒಪ್ಪದಿದ್ದರೆ ಎಸ್‌ಸಿ/ ಎಸ್‌ಟಿಗಳ ಕೋಪಕ್ಕೆ ಗುರಿಯಾಗಬಹುದು ಎಂದು ಗಮನಕ್ಕೆ ತರಲಿದ್ದಾರೆಂದು ಮೂಲಗಳು ತಿಳಿಸಿವೆ. ಡಾ. ಪರಮೇಶ್ವರ ಅವರ ಹಿರಿತನವನ್ನು ಗಮನದಲ್ಲಿಟ್ಟುಕೊಂಡು, ಸುರ್ಜೆವಾಲಾ ಅವರು ಪರಮೇಶ್ವರ್ ಅವರ ನಿವಾಸದಲ್ಲಿ ಭೇಟಿಯಾಗುವ ಸಾಧ್ಯತೆಗಳಿವೆ.



ಉದಯವಾಹಿನಿ ಚಿತ್ರ

> **ನಾನು ಸುರ್ಜೆವಾಲಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ ಮತ್ತು ಎಸ್‌ಸಿ/ಎಸ್‌ಟಿ ಶಾಸಕರ ಸಭೆಯ ಉದ್ದೇಶವನ್ನೂ ವಿವರಿಸಿದ್ದೇನೆ. ಸುರ್ಜೆವಾಲಾ ಅವರು ನಗರಕ್ಕೆ ಬಂದಾಗ, ನಾನು ಅವರೊಂದಿಗೆ ಚರ್ಚೆ ನಡೆಸಿ, ಸಭೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.**
> **ಪರಮೇಶ್ವರ್**

> **ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಸಹೋದರ ಹಾಗೂ ಬೆಂಗಳೂರು ಗ್ರಾಮಾಂತರದ ಮಾಜಿ ಸಂಸದ ಡಿಕೆ.ಸುರೇಶ್ ಅವರು, ರಾಜಣ್ಣ ಅವರು ತಮ್ಮ ಅಭಿಪ್ರಾಯವನ್ನು ಸಿಎಂ ಹಾಗೂ ಪಕ್ಷದ ಹೈಕಮಾಂಡ್ ಮುಂದೆ ವ್ಯಕ್ತಪಡಿಸಬೇಕೆಂದು ಹೇಳಿದ್ದರು.**
> **ಡಿಕೆ ಶಿವಕುಮಾರ್**

## ಸಂದಿಗ್ಧತೆಯಲ್ಲಿ ಕರ್ನಾಟಕ ಅರಣ್ಯಾಧಿಕಾರಿಗಳು!

• ಉದಯವಾಹಿನಿ, ಬೆಂಗಳೂರು

ಅರಣ್ಯಗಳನ್ನು ಪಟ್ಟಣಗಳಾಗದಂತೆ ರಕ್ಷಿಸುವ ಮತ್ತು ಮಾನವ-ಪ್ರಾಣಿ ಸಂಘರ್ಷವನ್ನು ಕಡಿಮೆ ಮಾಡುವ ಸಲುವಾಗಿ ಬುಡಕಟ್ಟು ಜನರ ಸ್ಥಳಾಂತರ ಕಾರ್ಯಕ್ರಮದ ವಿಚಾರವಾಗಿ ಕರ್ನಾಟಕದ ಅರಣ್ಯ ಅಧಿಕಾರಿಗಳು ಸಂದಿಗ್ಧತೆಯಲ್ಲಿದ್ದಾರೆ. ಅರಣ್ಯ ಪ್ರದೇಶಗಳೊಳಗಿನ ಬುಡಕಟ್ಟು ಜನಾಂಗದವರಿಗೆ ಸೌಲಭ್ಯಗಳನ್ನು (ರಸ್ತೆಗಳು, ವಿದ್ಯುತ್, ನೀರು, ಒಳಚರಂಡಿ ಮಾರ್ಗಗಳು, ಶಿಕ್ಷಣ ಸಂಸ್ಥೆಗಳು ಮತ್ತು ಬಿಪಿಎಲ್ ಕಾರ್ಡ್‌ಗಳು) ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನವೆಂಬರ್ 2024 ರ ಆದೇಶ ನೀಡಿದ್ದರೆ ಇತ್ತ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಮತ್ತು ಅರಣ್ಯ, ಪರಿಸರ ಮತ್ತು ಪರಿಸರ ಇಲಾಖೆ ಸಚಿವ ಈಶ್ವರ್ ಖಂಡ್ರೆ ಅವರ ಅರಣ್ಯ ಹಕ್ಕುಗಳ ಕಾಯ್ದೆ (ಎಫ್‌ಆರ್‌ಎ) ಅಡಿಯಲ್ಲಿ ಬುಡಕಟ್ಟು ಜನಾಂಗದವರನ್ನು ಸ್ಥಳಾಂತರಿಸುವ ನಿರ್ದೇಶನಗಳನ್ನು ನೀಡಿದ್ದಾರೆ.ಹೀಗಾಗಿ ಬುಡಕಟ್ಟು ಜನರ ಸ್ಥಳಾಂತರ ವಿಚಾರವಾಗಿ ಅರಣ್ಯಾಧಿಕಾರಿಗಳು ಸಂದಿಗ್ಧತೆಯಲ್ಲಿದ್ದಾರೆ. ಅರಣ್ಯ ಅಧಿಕಾರಿಗಳು ಅರಣ್ಯಗಳೊಳಗಿನ ಬುಡಕಟ್ಟು ಜನಾಂಗದವರಿಗೆ ಸೌಲಭ್ಯಗಳನ್ನು ಒದಗಿಸುವ ರಾಜಕೀಯ ಓಲೈಕೆಯ ಸಾಧನವಾಗುವುದು ಅಥವಾ ಅವರನ್ನು ಸ್ಥಳಾಂತರಿಸದಿದ್ದರೆ ಕಾನೂನು ಕ್ರಮವನ್ನು ಎದುರಿಸುವ ಆಯ್ಕೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಒಂದೆಡೆ, ಅರಣ್ಯ ಅಧಿಕಾರಿಗಳು FRA ಅನ್ನು ಜಾರಿಗೊಳಿಸದಿದ್ದರೆ, ಅದು ಮಾನವ-ಪ್ರಾಣಿ ಸಂಘರ್ಷ ಹೆಚ್ಚಳಕ್ಕೆ ಕಾರಣವಾಗುತ್ತದೆ, ಆದರೆ ಅವರು ರಾಜಕೀಯ ಒತ್ತಡಕ್ಕೆ ಮಣಿದರೆ ಶಿವಮೊಗ್ಗದಲ್ಲಿ ನಡೆದಂತೆ ಲೋಕಾಯುಕ್ತ ಪ್ರಕರಣಗಳಲ್ಲಿ ಅವರನ್ನು ದಾಖಲಿಸಲಾಗುತ್ತದೆ. ಸಾಗರ ಮತ್ತು ಸೊರಬ ತಾಲ್ಲೂಕುಗಳಲ್ಲಿನ 3,111 ಎಕರೆ ಅರಣ್ಯ ಭೂಮಿಯಿಂದ ಜನರನ್ನು ಸ್ಥಳಾಂತರಿಸದಿದ್ದಕ್ಕಾಗಿ ಅರಣ್ಯ ಅಧಿಕಾರಿಗಳ ವಿರುದ್ಧ ದೂರು ದಾಖಲಾಗಿದೆ.

ಉದಯವಾಹಿನಿ ಚಿತ್ರ



# 150 ವರ್ಷ ಹಳೆ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ: ನಕ್ಷೆ ಸಹಿತ ಪಹಣಿ

## ಕ್ಯೂ-ಜಿಐಎಸ್ ತಂತ್ರಾಂಶದ ನಕ್ಷೆ ಭಾರತೀಯ ಸರ್ವೆ ಇಲಾಖೆ ರಾಜ್ಯದ 49 ಕಡೆ ನಿರಂತರ ಕಾರ್ಯಾಚರಣೆ

• **ಉದಯವಾಹಿನಿ ರಾಮನಗರ**

**ಹೊಸ ಮಾದರಿಯ ಭೂ ನಕ್ಷೆ**

ಭೂ ದಾಖಲೆಗಳಿಗೆ ಆಧುನಿಕ ಸ್ಪರ್ಶ ನೀಡಲು ಮುಂದಾಗಿರುವ ಕಂದಾಯ ಇಲಾಖೆಯು ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿಯಲ್ಲಿ ಪ್ರಾಯೋಗಿಕವಾಗಿ ಕೈಗೊಂಡಿದ್ದ ಡ್ರೋನ್ ಆಧಾರಿತ ಮರು ಭೂಮಾಪನ ಯೋಜನೆ ಪೂರ್ಣ ಗೊಂಡಿದೆ. ಈ ಯೋಜನೆ ಅಡಿ ಜಮೀನಿನ ನಕ್ಷೆ, ಅಳತೆ, ಮಾಲೀಕತ್ವದ ವಿವರ ಸೇರಿ ಭೌಗೋಳಿಕ ಮಾಹಿತಿ ವ್ಯವಸ್ಥೆ ಇರುವ ಡಿಜಿಟಲ್ ಪಹಣಿ ವಿತರಣೆಗೆ ಸಿದ್ಧವಾಗಿವೆ. ಹೋಬಳಿ ವ್ಯಾಪ್ತಿಯ 35 ಕಂದಾಯ ಗ್ರಾಮ ಗಳಲ್ಲಿ ಮರು ಭೂಮಾಪನಕ್ಕೆ 2023ರ ಆಗಸ್ಟ್ 14ರಂದು ಅಂದಿನ ಸಂಸದ ಡಿ.ಕೆ. ಸುರೇಶ್ ಅವರು ಚಾಲನೆ ನೀಡಿದ್ದರು. ಯೋಜನೆಯ ನೋಡಲ್ ಅಧಿಕಾರಿಯಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ಮನೀಷ್ ಮೌನ್ಸಿಲ್, ಯೋಜನಾ ನಿರ್ದೇಶಕರಾಗಿ ರಾಮ ನಗರ ಜಿಲ್ಲಾ ಭೂ ದಾಖಲೆಗಳ ಇಲಾಖೆ ಉಪ ನಿರ್ದೇಶಕ ಬಿ.ಆರ್. ಹನುಮೇಗೌಡ, ಹಾಸನ ಜಿಲ್ಲೆಯ ಉಪ ನಿರ್ದೇಶಕ ಸುಜಯ್ ಕುಮಾರ್ ಭೂ ಮರುಮಾಪನದ ವಿಶೇಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಜಮೀನು ಮಾಲೀಕರು ಕೊಟ್ಟ ದಾಖಲೆ ಪರಿಶೀಲಿಸಿ ಅವರ ಸಮ್ಮುಖದಲ್ಲೇ ಡ್ರೋನ್ ಸರ್ವೇ ಮಾಡಲಾಗಿತ್ತು. ನಂತರ ಎಲ್ಲಾ ಮಾಹಿತಿ ಕ್ರೋಡೀಕರಿಸಿ ಮರು ಪರಿಶೀಲಿಸಿ ಅಂತಿಮವಾಗಿ 23,469 ಡಿಜಿಟಲ್ ಪಹಣಿ ಸೃಜಿಸಲಾಗಿದೆ. ಇದರಿಂದಾಗಿ, ಸುಮಾರು 150 ವರ್ಷ ಹಳೆಯ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ ಸಿಕ್ಕಿದೆ ಎಂದು ಹೇಳಿದರು. ಕ್ಯೂ-ಜಿಐಎಸ್ ತಂತ್ರಾಂಶದ ನಕ್ಷೆ ಭಾರತೀಯ ಸರ್ವೆ ಇಲಾಖೆ ರಾಜ್ಯದ 49 ಕಡೆ ನಿರಂತರ ಕಾರ್ಯಾಚರಣೆ ಉಲ್ಲೇಖ ವ್ಯವಸ್ಥೆಯ (ಸಿಒಆರ್‌ಎಸ್) ಬಿಂದುಗಳನ್ನು ಸ್ಥಾಪಿಸಿದೆ. ಅದರಲ್ಲಿ ಕನಕಪುರ ತಾಲ್ಲೂಕು ಕಚೇರಿ ಆವರಣವೂ ಇದೆ. ಇದರ ಆಧಾರದಲ್ಲಿ ಸುಮಾರು 100 ಮೀಟರ್ ಎತ್ತರದಲ್ಲಿ ಡ್ರೋನ್ ಹಾರಿಸಿ ಭೂಮಿ ಚಿತ್ರ ಸೆರೆ ಹಿಡಿಯಲಾಗಿದೆ ಎಂದು ತಿಳಿಸಿದರು.



> **ಜಮೀನಿನ ದಾಖಲೆಗಳಿಗೆ ಸಂಬಂಧಿಸಿದ ದೋಷ ಸರಿಪಡಿಸಿ ಜಮೀನಿನ ನಿಖರ ಮಾಹಿತಿ ಒಳಗೊಂಡ ನಕ್ಷೆ ಸಹಿತ ಪಹಣಿ ವಿತರಿಸಲು ತಂತ್ರಜ್ಞಾನ ಆಧಾರಿತ ಮರು ಭೂಮಾಪನ ಯೋಜನೆಯನ್ನು ಪ್ರಾಯೋಗಿಕ ಯೋಜನ ಯಶಸ್ವಿಯಾಗಿದೆ. ನನ್ನ ಕ್ಷೇತ್ರದ ಉಯ್ಯಂಬಳ್ಳಿ ಕ್ಷೇತ್ರದಲ್ಲಿ ಯಶಸ್ವಿಯಾಗಿರುವ ಈ ಯೋಜನೆಯನ್ನು ಮುಂದೆ ರಾಜ್ಯದಾದ್ಯಂತ ವಿಸ್ತರಿಸಲಾಗುವುದು**
>
> -ಡಿ.ಕೆ. ಶಿವಕುಮಾರ್ ಡಿಸಿಎಂ

> **23,469 ಪಹಣಿ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಇಬ್ಬರು ಅಧೀಕ್ಷಕರು, ನಾಲ್ವರು ಪರ್ಯಾವೇಕ್ಷಕರು, 26 ಸರ್ಕಾರಿ ಭೂ ಮಾಪಕರು, 34 ಪರವಾನಗಿ ಭೂ ಮಾಪಕರು ಹಾಗೂ 16 ಬಾಂದು ಜವಾನರನ್ನು ಒಳಗೊಂಡ 89 ಸಿಬ್ಬಂದಿ ತಂಡ ಸತತ ನಾಲ್ಕು ತಿಂಗಳು ಒಟ್ಟು 5,706 ಸರ್ವೇ ನಂಬರ್‌ಗಳ ಮರು ಭೂಮಾಪನ ಮಾಡಿತ್ತು**
>
> -ಬಿ.ಆರ್. ಹನುಮೇಗೌಡ

ಚಿತ್ರವನ್ನು ಆರ್ಥೋರೆಕ್ಟಿಫೈಡ್ ಇಮೇಜ್ ಆಗಿ ಪರಿವರ್ತಿಸಿ ರೋವರ್ ಉಪಕರಣದ ನೆರವಿನಿಂದ ಜಮೀನಿನ ಬಿಂದುಗಳನ್ನು ಅಳತೆ ಮಾಡಲಾಗುತ್ತದೆ. ನಂತರ, ಬಿಂದುಗಳ ದತ್ತಾಂಶ ಬಳಸಿಕೊಂಡು ಕ್ಯೂ- ಜಿಐಎಸ್ ತಂತ್ರಾಂಶದಲ್ಲಿ ಪ್ರತಿ ಜಮೀನಿನ ನಕ್ಷೆ ತಯಾರಿಸಿ, ಹೊಸ ಮಾದರಿಯ ಭೂ ನಕ್ಷೆ ಸೃಜಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿ ಹಳೆಯ ಭೂ ದಾಖಲೆಗಳಿಗೆ ಆಧುನಿಕ ಸ್ಪರ್ಶ ಯೋಜನೆಯಡಿ 23,469 ಡಿಜಿಟಲ್ ಪಹಣಿ ಸೃಜನೆ 35 ಗ್ರಾಮಗಳಲ್ಲಿ ಸತತ 4 ತಿಂಗಳು ಭೂಮಾಪನಕನಕಪುರ ತಾಲ್ಲೂಕಿನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವಗ್ರಾಮ ದೊಡ್ಡ ಆಲಹಳ್ಳಿ ಭಾನುವಾರ ಜಮೀನು ಮಾಲೀಕರಿಗೆ ಯೋಜನೆ ಅಡಿ ಸೃಜಿಸಿರುವ ಪಹಣಿಗಳನ್ನು ವಿತರಿಸುವ ಕಾರ್ಯಕ್ರಮ ನಡೆಯಲಿದೆ. ಕಂದಾಯ ಸಚಿವ ಕೃಷ್ಣ ಭೈರೇಗೌಡ ಸೇರಿದಂತೆ ಇಲಾಖೆಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

---

## ಶಾರದ ಮಾತೆ, ವಿವೇಕಾನಂದರ ಆದರ್ಶಗಳು ಉತ್ತಮ ಸಮಾಜಕ್ಕೆ ದಾರಿದೀಪ

• **ಉದಯವಾಹಿನಿ, ರಾಮನಗರ**

ಶಾರದ ಮಾತೆ, ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರ ವಿಚಾರಧಾರೆಗಳು ಇಂದಿನ ಸಮಾಜಕ್ಕೆ ಮತ್ತು ಯುವ ಸಮುದಾಯಕ್ಕೆ ದಾರಿದೀಪವಾಗಿವೆ ಎಂದು ಹಿರಿಯೂರು ಶಾರದಾಶ್ರಮದ ಅಧ್ಯಕ್ಷರಾದ ಚೈತನ್ಯಮಯಿ ಮಾತಾಜಿ ಹೇಳಿದರು. ಚನ್ನಪಟ್ಟಣದ ಸ್ವಾಮಿ ವಿವೇಕಾನಂದ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾರದಾ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರವಚನ ನೀಡಿದ ಅವರು, ಪಶ್ಚಾತ್ಯ ಸಂಸ್ಕೃತಿಯ ನಡುವೆ ಇಂದಿನ ಯುವ ಸಮುದಾಯ ದಾರಿ ತಪ್ಪುತ್ತಿರುವ ಸಂದರ್ಭದಲ್ಲಿ ಒಂದು ಶತಮಾನದ ಹಿಂದೆ ಶಾರದ ಮಾತೆ ಹಾಗೂ ವಿವೇಕಾನಂದರು ನೀಡಿದ ವಿಚಾರಧಾರೆಗಳು ಇಂದು ಹೆಚ್ಚು ಪ್ರಸ್ತುತ ಆಗುತ್ತಿವೆ. ನೆಮ್ಮದಿಯ, ಶಾಂತಿಯ ಬದುಕನ್ನು ರೂಪಿಸಿಕೊಳ್ಳಲು ಇವರ ವಿಚಾರಧಾರೆಗಳು ಅಗತ್ಯವಾಗುತ್ತಿವೆ ಎಂದು ಅಭಿಪ್ರಾಯಪಟ್ಟರು. ಶಾರದ ಮಾತೆಯವರು ಬದುಕಿದ ರೀತಿಯು ಇಂದಿನ ಮಹಿಳೆಯರಿಗೆ ದಾರಿದೀಪವಾಗಿವೆ. ಅವರ ಜೀವನ ಮಾದರಿಯು ಕುಟುಂಬ ವ್ಯವಸ್ಥೆಗೆ ಆದರ್ಶವಾಗಿತ್ತು. ಮಹಿಳೆಯು ಕುಟುಂಬದೊಂದಿಗೆ ಬದುಕುವ ಜೀವನ ಸಂದೇಶ ಇದರಿಂದ ನಮಗೆ ತಿಳಿಯುತ್ತದೆ ಎಂದು ಹೇಳಿದರು. ಮಹಿಳೆಯರಿಂದ ಲಲಿತಾ ಸಹಸ್ರನಾಮಾವಳಿ ಪಾರಾಯಣ ಹಾಗೂ ಭಜನೆ ಕಾರ್ಯಕ್ರಮ ನಡೆಯಿತು.

ಕನಕಪುರ ಶಾರದಾಶ್ರಮದ ಮಾತೆ ಜ್ಯೋತ್ಸಾನಮಯಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಪಶುಪಾಲನಾ ಇಲಾಖೆಯ ನಿವೃತ್ತ ಅಧಿಕಾರಿ ಬಸವರಾಜು, ಸಮಾಜ ಸೇವಕ ಧನಂಜಯ, ರಾಜೇಶ್ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಮಾತಾಜಿ ಚೈತನ್ಯಮಯಿ ಅಭಿಮತ**

> **ಸ್ವಾಮಿ ಪುರುಷೋತ್ತಮಾನದ ಮಹಾರಾಜರು ಬರೆದಿರುವ ಶಾರದ ಮಾತೆಯವರ 'ಜೀವನ ಗಂಗಾ' ಕೃತಿಯು ಸಮಾಜದಲ್ಲಿ ವ್ಯಕ್ತಿಯು ಹೇಗೆ ಬದುಕಬೇಕು ಎಂಬುದಕ್ಕೆ ದಾರಿ ತೋರಿಸುತ್ತದೆ. ಈ ಕೃತಿಯನ್ನು ಪ್ರತಿಯೊಬ್ಬರು ಓದಿ ಇಲ್ಲಿನ ವಿಚಾರಧಾರೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕು ಎಂದು ಮಹಿಳೆಯರಿಗೆ ಕಿವಿ ಮಾತು ಹೇಳಿದರು.**

## ತಾಲ್ಲೂಕು ಕಛೇರಿಯಲ್ಲಿ ದಲ್ಲಾಳಿಗಳ ಕಾಟಕ್ಕೆ ಕಡಿವಾಣ

• **ಉದಯವಾಹಿನಿ, ಮಾಲೂರು**

ತಾಲ್ಲೂಕಿನ ರೈತರು 6 ತಿಂಗಳಲ್ಲಿ ತಮಗೆ ಬೇಕಾದ ದಾಖಲೆಗಳನ್ನು ಆನ್‌ಲೈನ್ ಮೂಲಕ ಎಲ್ಲಿ ಬೇಕಾದರೂ ಪಡೆಯುವಂತಹ ಸೌಲಭ್ಯ ಸರ್ಕಾರ ಒದಗಿಸಿದೆ ಇನ್ನು ಮುಂದೆ ತಾಲ್ಲೂಕು ಕಚೇರಿಯಲ್ಲಿ ದಲ್ಲಾಳಿಗಳ ಮತ್ತು ರಿಯಲ್ ಎಸ್ಟೇಟ್ ಹಾವಳಿ ಇರುವುದಿಲ್ಲ ಎಂದು ಶಾಸಕ ಕೆ ವೈ ನಂಜೇಗೌಡ ಹೇಳಿದರು. ಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ನೂತನವಾಗಿ ರೈತರ ಕಡತಗಳು ಸುಲಭವಾಗಿ ಸಿಗಲು ಡಿಜಿಟಲಿಕಾರಣ ಕೊಠಡಿ ಉದ್ಘಾಟಿಸಿ ಮಾತನಾಡಿದರು.

ಹಲವಾರು ವರ್ಷಗಳಿಂದ ಗ್ರಾಮೀಣ ಭಾಗದ ರೈತರು ಭೂಮಿಗೆ ಸಂಬಂಧಿಸಿದ ಹಳೆಯ ದಾಖಲೆಗಳಿಗಾಗಿ ತಾಲ್ಲೂಕು ಕಚೇರಿಯಲ್ಲಿ ಅರ್ಜಿಗಳು ಕೊಟ್ಟು ಕಛೇರಿಗಳಿಗೆ ಅಲೆದಾಡಿತಿದ್ದ ದೂರುಗಳು ಪ್ರತಿದಿನ ತಮ್ಮ ಗಮನಕ್ಕೆ ಬರುತಿದ್ದು ರೈತರು ಹಲವಾರು ದಲ್ಲಾಳಿಗಳಿಗೆ ಹಣ ಕೊಟ್ಟು ದಾಖಲೆಗಳು ಸಿಗದೆ ಕಷ್ಟಪಟ್ಟಿರುವುದು ಸಹ ನನ್ನ ಗಮನಕ್ಕೆ ಬಂದಿದ್ದು, ಇನ್ನು ಮುಂದೆ ರೈತರಿಗೆ ಅಂತಹ ಸಮಸ್ಯೆಗಳು ಇರುವುದಿಲ್ಲ ಹಳೆ ಭೂಮಿಯ ಕಡತಗಳು ಬೇಕಾದಲ್ಲಿ ನೀವು ಆನ್‌ಲೈನ್ ಮೂಲಕ ಎಲ್ಲಿ ಬೇಕಾದರೂ ದಾಖಲೆಗಳನ್ನು ಪಡೆಯುವಂತ ಅವಕಾಶ ಸಿಗಲಿದೆ ಎಂದರು.



ಉದಯವಾಹಿನಿ ಚಿತ್ರ

---

## ಭೀಮನಬೀಡು ಗ್ರಾಮ ಅನೈರ್ಮಲ್ಯ ತಾಂಡವ

• **ಉದಯವಾಹಿನಿ, ಗುಂಡ್ಲುಪೇಟೆ**



ಉದಯವಾಹಿನಿ ಚಿತ್ರ

ತಾಲ್ಲೂಕಿನ ಭೀಮನಬೀಡು ಗ್ರಾಮದ ಬಹುತೇಕ ಚರಂಡಿಗಳಲ್ಲಿ ಹೂಳು ತುಂಬಿ ಗಬ್ಬೆದ್ದು ನಾರುತ್ತಿದೆ. ಹೀಗಿದ್ದರೂ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕ್ರಮ ವಹಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ರೈತ ಸಂಘಟನೆಯವರು ದೂರಿದ್ದಾರೆ. 'ಗ್ರಾಮದಲ್ಲಿ ಸ್ವಚ್ಛತೆ ಮರಿಚಿಕೆಯಾಗಿದ್ದು, 4 ತಿಂಗಳ ಹಿಂದೆ ಚರಂಡಿ ಹೂಳು ತೆಗೆಸುವಂತೆ ಪಂಚಾಯಿತಿಗೆ ಮನವಿ ಮಾಡಿದ್ದರೂ ಕ್ರಮ ವಹಿಸಿಲ್ಲ. ಚರಂಡಿಗಳಲ್ಲಿ ಹೂಳು ತುಂಬಿ ನೀರು ಸರಾಗವಾಗಿ ಹರಿದು ಹೋಗದೆ ನಿಂತಲ್ಲೆ ನಿಂತಿದೆ. ಇದರಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ದುರ್ವಾಸನೆ ಬೀರುತ್ತಿರುವ ಕಾರಣ ಮನೆ ಮುಂದೆ ಮೂಗು ಮುಚ್ಚಿಕೊಂಡು ಓಡಾಡಬೇಕಾಗಿದೆ.

ಸ್ಥಳೀಯರಿಗೆ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದ್ದು, ಕೆಮ್ಮು ನೆಗಡಿ, ಜ್ವರ ಬಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಾಗಿದೆ' ಎಂದು ರೈತ ಸಂಘಟನೆಯ ರಾಜ್, ಮಹೇಶ್, ಕೃಷ್ಣ ಬೇಸರ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಅನೈರ್ಮಲ್ಯದ ಜೊತೆಗೆ ಕೆಲವು ಕಡೆ ಬೀದಿದೀಪಗಳು ಸಹ ಕೆಟ್ಟಿವೆ. ಕೂಡಲೇ ಈ ಬಗ್ಗೆ ಸಂಬಂಧಪಟ್ಟ ಪಿಡಿಒ ಗಮನ ಹರಿಸಿ ಚರಂಡಿಯಲ್ಲಿ ತುಂಬಿರುವ ಹೂಳು ತೆಗೆಸುವ ಜೊತೆಗೆ ಮೂಲಸೌಕರ್ಯ ಕಲ್ಪಿಸಲು ಮುಂದಾಗಬೇಕು. ಇಲ್ಲದಿದ್ದರೆ ಪಂಚಾಯಿತಿ ಕಚೇರಿ ಮುಂದೆ ಧರಣಿ ನಡೆಸಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

15ನೇ ಹಣಕಾಸು ಯೋಜನೆಯಡಿ ಗ್ರಾಮದ ಚರಂಡಿಗಳಲ್ಲಿ ತುಂಬಿರುವ ಹೂಳು ತೆಗೆಸಲು 7 ರಿಂದ 8 ಲಕ್ಷ ವೆಚ್ಚದ ಕ್ರೀಯಾ ಯೋಜನೆ ತಯಾರಿಸಲಾಗಿದೆ. ವಾರದೊಳಗೆ ಹಣ ಬಿಡುಗಡೆಯಾಗುವ ನಿರೀಕ್ಷೆಯಿದ್ದು, ನಂತರ ಹೂಳು ತೆಗೆಸಲು ಕ್ರಮ ವಹಿಸಲಾಗುವುದು' ಎಂದು ಪಿಡಿಒ ಭೋಜೇಶ್ ಪ್ರತಿಕ್ರಿಯಿಸಿದರು.

## ನಿರ್ಗತಿಕರಿಗೆ ಮನೆ ನೀಡಿ ಹುಟ್ಟುಹಬ್ಬ ಆಚರಣೆ: ಈ ವ್ಯಕ್ತಿ ಇತರರಿಗೆ ಮಾದರಿ

• **ಉದಯವಾಹಿನಿ, ಮಡಿಕೇರಿ**

ವೈಭವದ ಹುಟ್ಟುಹಬ್ಬ ಆಚರಿಸಿಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿರುವ ಟ್ರೆಂಡ್. ಆದರೆ, ಇಲ್ಲೊಬ್ಬ ವ್ಯಕ್ತಿ ನಿರ್ಗತಿಕರಿಗೆ ಮನೆಗಳನ್ನು ಉಡುಗೊರೆಯಾಗಿ ನೀಡಿ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದು ಇತರರಿಗೆ ಮಾದರಿಯಾಗಿದ್ದಾರೆ. ವಿದೇಶ ಕ್ರೀಡೆ ಕೊಡಗಿನ ಅರ್ಜಿ ಪಂಚಾಯತ್ ನಿವಾಸಿ ಗಣೇಶ್ ಅವರು, ನಿರ್ಗತಿಕರಿಗೆ ಸಹಾಯದ ಹಸ್ತ ಚಾಚುವ ಮೂಲಕ ತಮ್ಮ 50ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ.

ಅದ್ದೂರಿ ಆಚರಣೆಯ ಬದಲು ಬಡ ಕುಟುಂಬದವರೊಂದಿಗೆ ಕೇಕ್ ಕತ್ತರಿಸಿ, ಮನೆಯನ್ನು ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಈ ಪ್ರಪಂಚದಲ್ಲಿ ಯಾರೂ ಶಾಶ್ವತವಲ್ಲ. ಕೊನೆಯ ಕ್ಷಣದಲ್ಲಿ ನಾವೇನನ್ನೂ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಹೀಗಾಗಿ ಹೆಚ್ಚೆಚ್ಚು ಆಸ್ತಿ ಗಳಿಸುವ ಬದಲು, ಯೋಗ್ಯ ಜೀವನ ನಡೆಸಲು ಅಗತ್ಯವಿದ್ದಷ್ಟು ಇಟ್ಟುಕೊಂಡು, ಉಳಿದದ್ದನ್ನು ನಿರ್ಗತಿಕರಿಗೆ ದಾನ ಮಾಡಬೇಕು. ಇದು ನನ್ನ ಬದುಕಿನ ಮಂತ್ರವಾಗಿದೆ ಎಂದು ಗಣೇಶ್ ಅವರು ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ಗಣೇಶ್ ಅವರು ವಿದ್ಯುತ್ ಗುತ್ತಿಗೆದಾರನಾಗಿ ಕೆಲಸ ಮಾಡಿ, ಜೀವನ ನಡೆಸುತ್ತಿದ್ದಾರೆ. ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪವು ನನಗೆ ಯೋಗ್ಯ ಜೀವನವನ್ನು ನೀಡಿದೆ. ಬಡ ಕುಟುಂಬದಲ್ಲಿ ಜನಿಸಿದ ನಾನು ಹಲವು ವರ್ಷಗಳ ಕಾಲ ಒಣಹುಲ್ಲಿನ ಗುಡಿಸಲಿನಲ್ಲಿ ವಾಸವಿದ್ದೆ. ಇದೀಗ ಶ್ರೀಮಂತನಾಗಿದ್ದೇನೆ. ಬಡತನದ ಸಂಕಷ್ಟ ತಿಳಿದ ನಾನು ನಿರ್ಗತಿಕರಿಗೆ ಸಹಾಯ ಮಾಡುವ ಹಂಬಲವನ್ನು ಹೊಂದಿದ್ದೇನೆಂದು ತಿಳಿಸಿದ್ದಾರೆ. 2000ರಲ್ಲಿ ಬೆಟೋಲಿ ಗ್ರಾಮ ಪಂಚಾಯತ್ (ಈಗ ಅರ್ಜಿ ಪಂಚಾಯತ್ ಎಂದು ಕರೆಯಲಾಗುತ್ತದೆ) ಚುನಾವಣೆಯಲ್ಲಿ 5 ಮತಗಳ ಅಂತರದಿಂದ ಗೆಲುವು ಸಾಧಿಸಿದೆ. ಈ ವೇಳೆ ಜನರ ಜೀವನ ಪರಿಸ್ಥಿತಿ ಅರಿತುಕೊಂಡೆ. 2005ರಲ್ಲಿ ಮರು ಆಯ್ಕೆಯಾದೆ. ಉಪಾಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದೆ. ನಂತರ ತಾಲ್ಲೂಕು ಪಂಚಾಯತ್ ಸದಸ್ಯನಾದೆ.

### ಉಚಿತ ವಿದ್ಯುತ್ ಸಂಪರ್ಕ

**ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 95 ರಷ್ಟು ಅಂಕಗಳನ್ನು ಗಳಿಸಿದ ಆರ್ಥಿಕವಾಗಿ ದುರ್ಬಲ ಹಿನ್ನೆಲೆಯ ಯುವತಿಯೊಬ್ಬಳನ್ನು ನಾನು ಭೇಟಿಯಾದೆ. ಆಕೆ ವಾಸಿಸುತ್ತಿದ್ದ ಗುಡಿಸಲಿಗೆ ವಿದ್ಯುತ್ ಸಂಪರ್ಕವಿರಲಿಲ್ಲ. ಎಣ್ಣೆ ದೀಪದ ಕೆಳಗೆ ಓದುತ್ತಿದ್ದದ್ದ ವಿಡಿಯೋ ವೈರಲ್ ಆಗಿತ್ತು. ಅವರ ಕಥೆ ನನಗೆ ಸ್ಫೂರ್ತಿ ನೀಡಿತು. ಬಳಿಕ ನಾನು ಅವರ ಮನೆಗೆ ಉಚಿತ ವಿದ್ಯುತ್ ಸಂಪರ್ಕವನ್ನು ಒದಗಿಸಿದೆ.**

---

## ನಾಟಿ ಹಸುವಿನ ಹಾಲಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ

• **ಉದಯವಾಹಿನಿ, ಗೌರಿಬಿದನೂರು**

ಸಮಗ್ರ ಕೃಷಿ ರೈತರಿಗೆ ನಷ್ಟ ತರುವುದಿಲ್ಲ. ಇದು ಜನಜನಿತ ಮಾತು. ಇದಕ್ಕೆ ತಾಲ್ಲೂಕಿನ ಡಿ.ಪಾಳ್ಯ ಹೋಬಳಿಯ ಹುಲಿಕುಂಟೆ ಗ್ರಾಮದ ಬಾಲಕೃಷ್ಣ ಸಹ ನಿದರ್ಶನ. ಡಿ.ಇಡಿ ವಿದ್ಯಾಭ್ಯಾಸ ಮುಗಿಸಿ ಅವರಿಗೆ ಯಾವುದೇ ಕೆಲಸ ಸಿಗಲಿಲ್ಲ. ತಮ್ಮ ಮೂಲ ಕಸುಬು ವ್ಯವಸಾಯದಲ್ಲೇ ಜೀವನ ರೂಪಿಸಿಕೊಳ್ಳಬೇಕು ಎಂದುಕೊಂಡರು ಬಾಲಕೃಷ್ಣ. ತಮ್ಮ ಕುಟುಂಬಕ್ಕೆ ವಂಶಪಾರಂಪರ್ಯವಾಗಿ ಬಂದಿರುವ ಜಮೀನಿನಲ್ಲಿ ಶೇಂಗಾ ಸೇರಿದಂತೆ ವಿವಿಧ ಬೆಳೆ ಬೆಳೆದಿದ್ದಾರೆ. ತಮ್ಮ ಕುಟುಂಬಕ್ಕಿರುವ 7 ಎಕರೆ ಜಮೀನಿನಲ್ಲಿ 2 ಎಕರೆ ಜಾಗದಲ್ಲಿ ಕೆ6 ಎಂಬ ಉತ್ತಮ ಇಳುವರಿ ಬರುವ ಶೇಂಗಾ ಬೆಳೆದಿದ್ದಾರೆ. ಎರಡು ಎಕರೆಯಲ್ಲಿ ಖಾಸಗಿ ಸಂಸ್ಥೆಯವರು ನೀಡಿರುವ ಉತ್ತಮ ಬೆಲೆ ಬರುವ ನಾಟಿ ದವನ ಬೆಳೆದಿದ್ದಾರೆ. ಶೇಂಗಾ ಎರಡು ಎಕರೆಯಿಂದ 40 ಮೂಟೆಗೂ ಹೆಚ್ಚು ಇಳುವರಿ ಬರುವ ನಿರೀಕ್ಷೆ ಇದೆ. ದವನ 12 ರಿಂದ 15 ಟನ್ ಬರ ಬಹುದು ಎಂದು ನಿರೀಕ್ಷೆ ಇದೆ. ಮಾರುಕಟ್ಟೆಯಲ್ಲಿ ಎರಡು ಬೆಳೆಗಳಿಗೂ ಉತ್ತಮ ಬೆಲೆ ಇದೆ. ಉತ್ತಮ ಆದಾಯದ ನಿರೀಕ್ಷೆಯಲ್ಲಿ ಇದ್ದಾರೆ ರೈತ ಬಾಲಕೃಷ್ಣ. ಈ ಇದಕ್ಕಾಗಿಯೇ ಮನೆಯಲ್ಲಿ ಎರಡು ನಾಟಿ ಹಸುಗಳನ್ನು ಸಾಕಿದ್ದಾರೆ.

ಕುರಿಗಳು, ಮೇಕೆಗಳು, ನಾಟಿ ಕೋಳಿಗಳೂ ಇವೆ. ಜಮೀನಿಗೆ ಬೇಕಾಗುವ ಗೊಬ್ಬರ ದೊರೆಯುತ್ತದೆ. ನಾಟಿ ಹಸುವಿನ ಹಾಲಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇರುವುದರಿಂದ ಮಾರಾಟದ ಜೊತೆಗೆ ಮನೆಗೆ ಬಳಸಲಾಗುತ್ತದೆ. ಇದರಿಂದ ಆರೋಗ್ಯದ ಜೊತೆಗೆ, ಆದಾಯವು ಸಹ ಬರುತ್ತಿದೆ. ಮೇಕೆಗಳು, ವರ್ಷಕ್ಕೆ ಕನಿಷ್ಠ ಮೂರು ಬಾರಿ ಮರಿ ಹಾಕುತ್ತವೆ. ಒಮ್ಮೊಮ್ಮೆ ಎರಡು, ಮೂರು ಮರಿಗಳು ಹಾಕುವುದರಿಂದ ನಮಗೆ ಮರಿಗಳ ರೂಪದಲ್ಲಿ ಬರುವುದೆಲ್ಲ ಲಾಭವೇ.

ಕುರಿ ಮತ್ತು ನಾಟಿ ಕೋಳಿಗಳನ್ನು ಸಹ ಸಾಕಲಾಗಿದೆ. ಕುರಿಗಳನ್ನು 3 ರಿಂದ 4 ತಿಂಗಳಿಗೊಮ್ಮೆ ಮಾರಾಟ ಮಾಡಿ, ಮತ್ತೆ ಹೊಸ ಕುರಿಗಳನ್ನು ತರಲಾಗುವುದು ಎಂದು ವಿವರಿಸಿದರು.



ಉದಯವಾಹಿನಿ ಚಿತ್ರ

**ಬದುಕಿಗೆ ಸಮಗ್ರ ಕೃಷಿಯ ಬಲ**

> **ಜಮೀನಿಗೆ ರಸಗೊಬ್ಬರದ ಬದಲಾಗಿ ಕೊಟ್ಟಿಗೆ ಗೊಬ್ಬರವನ್ನು ಹೆಚ್ಚು ನೀಡಿದ್ದೇವೆ. ರಸ ಗೊಬ್ಬರ ಕೇವಲ ಒಂದು ಬೆಳೆಗೆ ಮಾತ್ರ ಕೆಲಸ ಮಾಡುತ್ತದೆ. ಆದರೆ ಕೊಟ್ಟಿಗೆ ಗೊಬ್ಬರ ಒಮ್ಮೆ ಹಾಕಿದರೆ, ಎರಡು ಮೂರು ಬೆಳೆಗಳಿಗೆ ಸಮೃದ್ಧವಾಗಿ ಪೋಷಕಾಂಶ ಒದಗಿಸುತ್ತದೆ**
>
> -ಬಾಲಕೃಷ್ಣ, ರೈತ

## ಶಾಲಾ ಕಟ್ಟಡ ನಿರ್ಮಾಣ- ಜಮೀನುಗಳಿಗೆ ದಾರಿಯಿಲ್ಲ

• **ಉದಯವಾಹಿನಿ, ಬಂಗಾರಪೇಟೆ**

ಅನಾದಿ ಕಾಲದಿಂದಲೂ ರೈತರು ತಮ್ಮ ಜಮೀನುಗಳಿಗೆ ಹೋಗುತ್ತಿದ್ದ ದಾರಿಯನ್ನು ಖಾಸಗಿಯವರು ಮುಚ್ಚಿ ಅಲ್ಲಿ ಖಾಸಗಿ ಶಾಲೆ ನಿರ್ಮಾಣ ಮಾಡಿಕೊಂಡು ರೈತರು ತಮ್ಮ ಜಮೀನುಗಳಿಗೆ ಹೋಗಲು ದಾರಿಯಿಲ್ಲದಂತೆ ಮಾಡಿದ್ದಾರೆ ಎಂದು ಗ್ರಾಮಸ್ಥರು ತಹಶೀಲ್ದಾರ್, ಶಾಸಕರು ಹಾಗೂ ಸಂಸದರಿಗೆ ಮನವಿ ಸಲ್ಲಿಸಿದ್ದಾರೆ.

ತಾಲ್ಲೂಕಿನ ಕಾಮಸಮುದ್ರ ಬಳಿಯ ನಲ್ಲಗುಟ್ಲಹಳ್ಳಿ ಬಳಿ ಜಯಪ್ಪ ಎನ್ನುವವರು ಜೀವನ್ ಪ್ರಗತಿ ಗೋಲ್ಡನ್ ಇಂಟರ್ ನ್ಯಾಷನಲ್ ಶಾಲೆ ಪ್ರಾರಂಭಿಸಿದ್ದು ಖಾಸಗಿ ಶಾಲೆಯವರು ರೈತರ ಜಮೀನಿಗೆ ಹೋಗುತ್ತಿದ್ದ ದಾರಿಯನ್ನೂ ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಿದ್ದು ರೈತರು ತಮ್ಮ ಜಮೀನುಗಳಿಗೆ ಹೋಗಲು ದಾರಿಯಿಲ್ಲದೆ ಪರದಾಡುತ್ತಿದ್ದಾರೆ, ಈ ಬಗ್ಗೆ ಶಾಲಾ ಆಡಳಿತ ಮಂಡಳಿಯವರನ್ನು ಕೇಳಿದರೆ ನಾವು ದಾರಿ ಬಿಡುವುದಿಲ್ಲ ನಿಮ್ಮಂದಾಗುವ ಕೆಲಸ ನೀವು ಮಾಡಿಕೊಳ್ಳಿ ಎಂದು ಜೋರು ಧ್ವನಿಯಲ್ಲಿ ಬೆದರಿಕೆ ಹಾಕುತ್ತಿದ್ದಾರೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಆ ಸ್ಥಳದಲ್ಲಿ ಶಾಲೆ ಪ್ರಾರಂಭ ವಾದಾಗಿನಿಂದ ಗ್ರಾಮಸ್ಥರು ಪ್ರತಿ ನಿತ್ಯ ನಾನಾ ರೀತಿಯ ಹಿಂಸೆ ಅನುಭವಿಸು ತ್ತಿದ್ದು ಶಾಲಾ ಮುಖ್ಯಸ್ಥರು ಪಕ್ಕದ ಜಮೀನಿನ ಮಹಿಳೆಯ ಮೇಲೆ ಅತ್ಯಾಚಾರ ಪ್ರಯತ್ನ ಮಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ, ರಾತ್ರಿ ವೇಳೆಯಲ್ಲಿ ರೈತರ ಜಮೀನುಗಳಲ್ಲಿನ ಹುಲ್ಲಿಗೆ ರಾಸಾಯನಿಕಗಳು ಸಿಂಪಡಿಸಿ ಆ ಹುಲ್ಲನ್ನು ತಿಂದು ಎರಡು ಸೀಮೆ ಹಸುಗಳು ಸಾವನ್ನಪ್ಪಿದ್ದು ಈ ಬಗ್ಗೆಯೂ ಕಾಮಸಮುದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ರೈತರ ಜಮೀನಿನ ದಾರಿ ಒತ್ತುವರಿ ಮಾಡಿಕೊಂಡಿರುವುದಲ್ಲದೆ ಶಾಲೆಯ ಪಕ್ಕದಲ್ಲಿನ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಶಾಲಾ ವಾಹನ ನಿಲ್ಲಿಸುವ ಶೆಡ್ ಗಳನ್ನು ನಿರ್ಮಿಸಿಕೊಂಡಿದ್ದಾರೆ ಎಂದು ಗ್ರಾಮಸ್ಥರು ಒತ್ತಾಯಿಸಿ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ರೈತರ ಜಮೀನುಗಳಿಗೆ ದಾರಿ ಬಿಡದಿದ್ದರೆ ಮುಂದಿನ ದಿನಗಳಲ್ಲಿ ಶಾಲೆಯ ಬಳಿ ಗ್ರಾಮಸ್ಥರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಮಾಡುವುದಾಗಿ ನಿರ್ಧಾರ ಮಾಡಲಾಗಿದೆ.




ಉದಯವಾಹಿನಿ ಚಿತ್ರ

---

# ಮಕರ ಸಂಕ್ರಾಂತಿ 66ನೇ ಮಹಾರಥೋತ್ಸವಕ್ಕೆ ಗ್ರಾಮ ಸಿಂಗಾರ

## ಸೋಮವಾರಪೇಟೆ ಪಟ್ಟಣದಿಂದ ಬಸ್ ಸೌಲಭ್ಯ, ಪ್ರವಾಸಿಗರು ಮಲ್ಲಳ್ಳಿ ಜಲಪಾತ, ಪುಷ್ಪಗಿರಿಗೆ ಶಾಂತಳ್ಳಿ ಮಾರ್ಗವಾಗಿಯೇ ತೆರಳಬೇಕು

• **ಉದಯವಾಹಿನಿ, ಸೋಮವಾರಪೇಟೆ**

ಶಾಂತಳ್ಳಿ ಗ್ರಾಮದ ಧಾರ್ಮಿಕ ಕ್ಷೇತ್ರ, ಕುಮಾರ ಲಿಂಗೇಶ್ವರ ಜಾತ್ರೆ, ಪ್ರತಿವರ್ಷ ಮಕರ ಸಂಕ್ರಾತಿ ಹಬ್ಬದ ಸಂದರ್ಭ ನಡೆಯುತ್ತಿದ್ದು, ಈ ಬಾರಿಯೂ ರಥೋತ್ಸವ, ಒಂದು ವಾರ ವಿವಿಧ ಪೂಜಾ ಕಾರ್ಯಗಳು ಶ್ರದ್ಧೆಯಿಂದ ನಡೆಯಲಿವೆ.

ಪ್ರಸಕ್ತ ವರ್ಷ 66ನೇ ಮಹಾರಥೋತ್ಸವಕ್ಕೆ ಗ್ರಾಮ ಸಿಂಗಾರಗೊಳ್ಳುತ್ತಿದೆ. ಜ. 13 ರಿಂದ ಜಾತ್ರೋತ್ಸವ ಪ್ರಾರಂಭವಾಗಲಿದ್ದು, ಬೆಳ್ಳಿ ಬಂಗಾರ ದಿನ, ಮಕರ ಸಂಕ್ರಮಣದಂದು ಕರುವಿನ ಹಬ್ಬವನ್ನು ಆಚರಿಸಲಾಗುವುದು.

ಹಲವಾರು ದಶಕಗಳಿಂದ ಇಲ್ಲಿನ ನಡೆಸಿಕೊಂಡು ಬರುತ್ತಿರುವ ದೇವರ ಜಾತ್ರೋತ್ಸವನ್ನು ಈ ಬಾರಿಯೂ ಅದ್ದೂರಿ ಯಿಂದ ಆಚರಿಸಲಾಗುವುದು. ಜ. 15ರಿಂದ 17ರ ವರೆಗೆ ದೇವ ಸ್ಥಾನಕ್ಕೆ ಬರುವವರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಶಾಂತಳ್ಳಿ ಹೆಸರಿಗೆ ತಕ್ಕಂತೆ ಶಾಂತವಾಗಿದ್ದು, ಹೋಬಳಿ ಕೇಂದ್ರವಾಗಿದೆ. ಕೃಷಿ, ಶೈಕ್ಷಣಿಕ, ಧಾರ್ಮಿಕವಾಗಿ ಮುಂಚೂಣಿಯಲ್ಲಿರುವ ಈ ಗ್ರಾಮ ಸುಂದರ ಪರಿಸರದ ನಡುವೆ ಇದ್ದು, ಸೋಮವಾರಪೇಟೆ ಪಟ್ಟಣದಿಂದ ಬಸ್ ಸೌಲಭ್ಯವಿದೆ. ಪ್ರವಾಸಿಗರು ಮಲ್ಲಳ್ಳಿ ಜಲಪಾತ ಹಾಗೂ ಪುಷ್ಪಗಿರಿಗೆ ಶಾಂತಳ್ಳಿ ಮಾರ್ಗವಾಗಿಯೇ ತೆರಳಬೇಕು. ಇವತ್ತಿಗೂ ಶಾಂತಳ್ಳಿ ಕೃಷಿ ಪ್ರಧಾನ ಗ್ರಾಮ, ಭತ್ತ, ಬಾಳೆ, ಏಲಕ್ಕಿ, ತರಕಾರಿ ಬೆಳೆಗಳನ್ನು ಅತೀ ಹೆಚ್ಚು ಬೆಳೆಯುತ್ತಾರೆ. ಪ್ರಾಚೀನ ಕಾಲದಿಂದಲೂ ಶಾಂತಳ್ಳಿಯ ಕುಮಾರಲಿಂಗೇಶ್ವರ ಜಾತ್ರೆ ಮತ್ತು ಮಹಾ ರಥೋತ್ಸವ ಉತ್ತರ ಕೊಡಗಿನ ವಿಶಿಷ್ಟ ಆಚರಣೆಯಾಗಿದೆ. ಶಾಂತಳ್ಳಿ ಹೋಬಳಿಯ ಪ್ರತಿ ಮನೆಯ ಆರಾಧ್ಯ ದೈವವೆಂದು ಕುಮಾರಲಿಂಗೇಶ್ವರ ಸ್ವಾಮಿಯನ್ನು ಕರೆಯುತ್ತಾರೆ. ಕೂತಿನಾಡು, ತೋಳುನಾಡು, ಪುಷ್ಪಗಿರಿ ಹೆಗ್ಗಡಮನೆ, ಯಡೂರು, ತಲ್ತಾರೆಶೆಟ್ಟಳ್ಳಿ ಗ್ರಾಮಗಳ ಜನರು ಪರಿಶುದ್ಧತೆಯಿಂದ ಶಾಂತಳ್ಳಿಗೆ ಬಂದು ಪೂಜೆ ಸಲ್ಲಿಸಿ, ದೇವರಿಗೆ ಫಲ, ತಾಂಬೂಲ, ದವಸ-ಧಾನ್ಯ, ಕಾಣಿಕೆ, ಹರಕೆ ಸಲ್ಲಿಸುತ್ತಾರೆ ಎಂದು ದೇವಾಲಯ ಧರ್ಮದರ್ಶಿ ಮಂಡಳಿ ಅಧ್ಯಕ್ಷ ಕೆ.ಎಂ. ಲೋಕೇಶ್ ತಿಳಿಸಿದರು.

ಚೋಳರ ನೆಚ್ಚಿನ ನಾಡಾಗಿ ಧಾರ್ಮಿಕವಾಗಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ವಾರ್ಷಿಕ 300 ರಿಂದ 400 ಸೆ.ಮೀ. ಮಳೆ ಬೀಳುವ ಪ್ರದೇಶವಾಗಿರುವುದರಿಂದ ಇಲ್ಲಿನ ಕಾಡಿನ ಸಂಪತ್ತು ಹೆಚ್ಚು.

ವನ್ಯಜೀವಿಗಳ ವಾಸಸ್ಥಾನವಾಗಿತ್ತು. ಬೇಟೆ ಪ್ರಿಯರಾದ ಚೋಳರಿಗೆ ಕೂರ ಮೃಗಗಳು ಹೆಚ್ಚಾಗಿದ್ದ ಈ ಸ್ಥಳ ಬಹಳ ಅಚ್ಚುಮೆಚ್ಚು ಪುರಾಣದ ಪ್ರಕಾರ ಗೊಂಡಾರಣ್ಯವಾಗಿದ್ದ ಈ ನಾಡು ತಾರಕಾಸುರ ಎಂಬ ರಾಕ್ಷಸನ ವಾಸಸ್ಥಳವಾಗಿತ್ತು. ಒಮ್ಮೆ ಶಾಂತಿ ಪ್ರಿಯ ಶಿವ ತಪಸ್ಸು ಮಾಡಲು ಬಂದಾಗ ಈ ಪ್ರದೇಶದಲ್ಲಿ ತಾರಕಾಸುರನ ಕಾಟದಿಂದ ನೊಂದ ಜನರು ಶಿವನಲ್ಲಿ ರಾಕ್ಷಸನಿಂದ ರಕ್ಷಿಸುವಂತೆ ಮೊರೆಯಿಡುತ್ತಾರೆ. ಈ ವೇಳೆ ತಾರಕಾಸುರನ ಸಂಹಾರಕ್ಕೆ ಸುಬ್ರಹ್ಮಣ್ಯನನ್ನು ಕಳುಹಿಸುತ್ತಾರೆ ಎಂಬುದು ನಂಬಿಕೆ.

ಪುಷ್ಪಗಿರಿ ಬೆಟ್ಟವನ್ನು ಏರಿದ ಸುಬ್ರಹ್ಮಣ್ಯ ಪಕ್ಕದ ಕುಮಾರ ಪರ್ವತದಲ್ಲಿದ್ದ ತಾರಕಾಸುರನನ್ನು ಸಂಹರಿಸಿದ ಎನ್ನಲಾಗಿದೆ. ರಾಕ್ಷಸ ಸಂಹಾರದ ನಂತರ ಬೆಟ್ಟದಲ್ಲಿ ಹೂವಿನ ಮಳೆ ಸುರಿದು ನಂತರ ಪುಷ್ಪಗಿರಿ ಬೆಟ್ಟ ಎಂದು ನಾಮಕರಣವಾಯಿತೆಂದು ಪುರಾಣದಲ್ಲಿ ಉಲ್ಲೇಖ ಇದೆ. ರಾಕ್ಷಸ ಸಂಹಾರದ ನಂತರ ಶಿವ ತಪಸ್ಸು ಮಾಡಿರುವ ಶಾಂತ ಜಾಗ ಕ್ರಮೇಣ ಶಾಂತಳ್ಳಿ ಎಂದು ನಾಮಕರಣವಾಯಿತು.



ಉದಯವಾಹಿನಿ ಚಿತ್ರ

**ಪುಷ್ಪಗಿರಿ ಬೆಟ್ಟ ಎಂದು ನಾಮಕರಣ**

> **ಕುಮಾರ ಪರ್ವತದಿಂದ ಇಳಿದು ಬಂದ ಶಿವನ ಮಗ ಸುಬ್ರಹ್ಮಣ್ಯ ಶಾಂತಳ್ಳಿಯಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದ ನಂತರ ಕುಮಾರಲಿಂಗೇಶ್ವರ ಎಂದು ನಾಮಕರಣವಾಗಿರಬಹುದು ಎಂದು ಇಲ್ಲಿನ ಹಿರಿಯರು ಹೇಳುತ್ತಾರೆ. ತಾರಕ ಸಂಹಾರದ ಚೋಳರನಾಡು**

### ದೇವಸ್ಥಾನದಲ್ಲಿ ವಾರ್ಷಿಕ ಪೂಜೆ

**ಸುಬ್ರಹ್ಮಣ್ಯಕ್ಕೂ ತೆರಳಲು ಸಮೀಪದ ರಸ್ತೆ ಇದಾಗಿದೆ. ಶಿಲಾಶಾಸನಗಳ ಪ್ರಕಾರ ಈ ನಾಡಿನ ಆರಾಧ್ಯದೇವ ಕುಮಾರಲಿಂಗೇಶ್ವರ ದೇವಸ್ಥಾನ ಚೋಳ ಅರಸರ ಕಾಲದಲ್ಲಿ ನಿರ್ಮಿಸಲ್ಪಟ್ಟಿತು. 1200 ವರ್ಷ ಪುರಾತನವಾಗಿದೆ. ಗಡಸು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಅಂದಿನ ರಾಜರು, ಪಾಳೆಗಾರರು ಶಾಂತಳ್ಳಿಗೆ ಬಂದು ದೇವಸ್ಥಾನದಲ್ಲಿ ವಾರ್ಷಿಕ ಪೂಜೆ ನೆರವೇರಿಸಿ, ಕೃಷಿಕರು ಬೆಳೆದ ಫಸಲಿನ ಕಪ್ಪ ಸ್ವೀಕರಿಸಿ ತೆರಳುತ್ತಿದ್ದರು ಎಂಬ ಮಾಹಿತಿ ಇದೆ.**

---

## ಮಿನಿ ನ್ಯೂಸ್

### ವ್ಯಕ್ತಿತ್ವ ರೂಪಿಸುವ ಜಾನಪದ: ಪ್ರಭು

• **ಉದಯವಾಹಿನಿ, ತುಮಕೂರು**

ಭಾರತ ಸುಮಾರು 10 ಸಾವಿರ ವರ್ಷಗಳ ನಾಗರಿಕತೆಯ ಪರಂಪರೆ ಹೊಂದಿದೆ. ನಾವು ನಮ್ಮ ಮೂಲ ಬೇರು ಮರೆಯುತ್ತಿರುವುದು ವಿಷಾದದ ಸಂಗತಿ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ಹೇಳಿದರು. ವಿಶ್ವವಿದ್ಯಾಲಯದಲ್ಲಿ ಶನಿವಾರ ಕರ್ನಾಟಕ ಜಾನಪದ ಅಕಾಡೆಮಿ ಹಮ್ಮಿಕೊಂಡಿದ್ದ ಜಾನಪದ ನಡೆ ವಿದ್ಯಾರ್ಥಿಗಳ ಕಡೆ ಎಂಬ ವಿಚಾರ ಸಂಕಿರಣ, ಜಾನಪದ ಗಾಯನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸಂಸ್ಕೃತಿ, ಪರಂಪರೆ ಭಾರತೀಯರನ್ನು ಪ್ರಭಾವಿಸಿದೆ. ಐದು ಸಾವಿರ ವರ್ಷಗಳಿಂದ ನಮ್ಮನ್ನಾಳಿದ ರಾಜರು, ಅವರು ಕಲೆ, ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯನ್ನು ಜಗತ್ತಿನ ಮುಂದಿಡುವ ಪ್ರಯತ್ನ ಮಾಡಬೇಕು. ಕವಿವಾಣಿ ಹೂ, ಜನವಾಣಿ ಬೇರು. ಇವೆರಡೂ ನಮ್ಮ ಸಂಸ್ಕೃತಿಯ ಮೂಲ. ಜಾನಪದದಿಂದ ಜ್ಞಾನ ಸಂಪಾದನೆ ಸಿದ್ಧಿಸುತ್ತದೆ. ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ಲೇಖಕಿಯರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಚ್.ಎಲ್.ಪುಷ್ಪಾ, ನಮ್ಮ ಜೀವನ ಕ್ರಮವನ್ನು ಮುಂದಿನ ಪೀಳಿಗೆಗೆ ಸಾಗಿಸುವ ಸಂಪರ್ಕ ಸೇತುವೆಯೇ ಜಾನಪದ, ಜಾನಪದ ಗೀತೆಗಳು ನಮ್ಮ ಬದುಕಿನ ಎಲ್ಲಾ ಆಯಾಮಗಳನ್ನು ಕಟ್ಟಿ ಕೊಡುತ್ತವೆ ಎಂದು ಅಭಿಪ್ರಾಯಪಟ್ಟರು. ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಸ್ವಹಿತಾಸಕ್ತಿಗಾಗಿ ಬದುಕಿದವರು ಸ್ವಾವಲಂಬಿಯಾಗುತ್ತಾರೆ. ಇತರರಿಗಾಗಿ ಬದುಕಿದವರು ಇತಿಹಾಸವಾಗುತ್ತಾರೆ. ಸಾಧಕರಿಗೆ ಸಾವಿಲ್ಲ ಎಂಬುದನ್ನು ಬುದ್ಧ, ಬಸವ ಮತ್ತು ಅನೇಕ ಸಂತರು ನಮಗೆಲ್ಲರಿಗೂ ತೋರಿಸಿಕೊಟ್ಟಿದ್ದಾರೆ ಎಂದರು.

### ಕೊಡವ ಕೌಟುಂಬಿಕ ಹಾಕಿ ಲೋಗೊ ಬಿಡುಗಡೆ

• **ಉದಯವಾಹಿನಿ, ಮಡಿಕೇರಿ**

ಮಾರ್ಚ್ 28ರಿಂದ ಏಪ್ರಿಲ್ 27ರವರೆಗೆ ಇಲ್ಲಿ ನಡೆಯಲಿರುವ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ 25ನೇ ಆವೃತಿ 'ಮುದ್ದಂಡ ಹಾಕಿ ಉತ್ಸವ'ದ ಲೋಗೊ ಇಲ್ಲಿನ ಕಾವೇರಿ ಹಾಲ್‌ನಲ್ಲಿ ಶನಿವಾರ ಬಿಡುಗಡೆಗೊಂಡಿತು. ಬೃಹತ್ ಎಲ್‌ಇಡಿ ಪರದೆಯ ಮೇಲೆ ಅನಾವರಣಗೊಂಡ ಲೋಗೊವನ್ನು ಅತಿಥಿಗಳು ಕಣ್ತುಂಬಿಕೊಂಡರು. ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, ನಮ್ಮ ತಂದೆ ಹಾಕಿ ಪಂದ್ಯಾವಳಿ ಆರಂಭಿಸಿದಾಗ ಈ ಮಟ್ಟಕ್ಕೆ ಬೆಳೆಯುತ್ತದೆಂಬ ನಿರೀಕ್ಷೆ ಇರಲಿಲ್ಲ' ಎಂದರು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂತರ್‌ಗೌಡ, ಮಾಜಿ ಶಾಸಕ ಕೆ.ಜಿ.ಬೋಪಯ್ಯ ಭಾಗವಹಿಸಿದ್ದರು.

### ಯುವತಿ, ಆಕೆಯ ಸ್ನೇಹಿತನ ಮೇಲೆ ಹಲ್ಲೆ; ನಾಲ್ವರ ಬಂಧನ

• **ಉದಯವಾಹಿನಿ, ಕೋಲಾರ**

ತಾಲ್ಲೂಕಿನ ನರಸಾಪುರದ ಕುರ್ಕಿ ಕೆರೆ ಬಳಿ ಯುವತಿ ಹಾಗೂ ಆಕೆಯ ಸ್ನೇಹಿ ತನ ಮೇಲೆ ಹಲ್ಲೆ ನಡೆಸಿ ಚಿನ್ನದ ಸರ ದೋಚಿದ್ದ ನಾಲ್ವರು ಆರೋಪಿಗಳನ್ನು ವೇಮಗಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕೋಲಾರ ನಗರದ ಕಾರಂಜಿ ಕಟ್ಟೆ ನಿವಾಸಿ ಪ್ರಸನ್ನ ಎ. (31) ಬಂಗಾರಪೇಟೆ ತಾಲ್ಲೂಕಿನ ಅತ್ತಿಗಿರಿ ಗ್ರಾಮದ ಅರುಣ್ ಕುಮಾರ್ (37), ಬಂಗಾರ ಪೇಟೆ ತಾಲ್ಲೂಕಿನ ಭಾವರಹಳ್ಳಿಯ ಅರ್ಜುನ್ ಕುಮಾರ್ (32), ಕಲ್ಯಾಣ್ ಕುಮಾರ್ (28) ಬಂಧಿತ ಆರೋಪಿಗಳು.ಆರೋಪಿಗಳಿಂದ 65 ಸಾವಿರ ಮೌಲ್ಯದ 5.7 ಗ್ರಾಂ ಚಿನ್ನದ ಚೈನನ್ನು ವಶಪಡಿಸಿಕೊಳ್ಳಲಾಗಿದೆ. ಈ ಪೈಕಿ ಆರೋಪಿ ಪ್ರಸನ್ನ ಕೋಲಾರ ಗ್ರಾಮಾಂತರ ಠಾಣಾ ವ್ಯಾಪ್ತಿಯ ದೇವಸ್ಥಾನವೊಂದರಲ್ಲಿನ ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಜ.9ರಂದು ಮಧ್ಯಾಹ್ನ 3 ಗಂಟೆ ಸುಮಾರಿಗೆ ದೂರುದಾರ ಯುವತಿ, ಆಕೆಯ ಸ್ನೇಹಿತ ಪ್ರಕಾಶ್ ಕುರ್ಕಿ ಕೆರೆಯ ಸಮೀಪದಲ್ಲಿರುವ ಬೆಟ್ಟದ ಬಂಡೆಯ ಮೇಲೆ ಕುಳಿತು ಮಾಡುತ್ತಿದ್ದರು.

ಆಗ ನಾಲ್ವರು ಆರೋಪಿಗಳು ಯುವತಿ, ಆಕೆಯ ಸ್ನೇಹಿತನ ಮೇಲೆ ಹಲ್ಲೆ ನಡೆಸಿ ಯುವತಿಯ ಕತ್ತಿನಲ್ಲಿದ್ದ 10 ಗ್ರಾಮ ತೂಕದ ಬಂಗಾರದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಯುವತಿ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಜ.10ರಂದು ಆರೋಪಿಗಳನ್ನು ಬಂಧಿಸಲಾಗಿದೆ ಎಂದಿದ್ದಾರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ., ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ರವಿಶಂಕರ್, ಜಗದೀಶ್, ಡಿವೈಎಸ್ಪಿ ಎಂ.ಎಚ್.ನಾಗೆ ಮಾರ್ಗದರ್ಶನದಲ್ಲಿ ವೇಮಗಲ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಬಿ.ಪಿ.ಮಂಜು ನೇತೃತ್ವದಲ್ಲಿ ಪಿಎಸ್‌ಐ ಹೇಮಂತಕುಮಾರ್ ಆರ್., ಸಿಬ್ಬಂದಿಯಾದ ನಾರಾಯಣಸ್ವಾಮಿ, ಎಚ್.ಎಂ.ಸುರೇಶ್, ಮಹೇಶ್ ಮತ್ತು ರವಿ ಕಾರ್ಯಾಚರಣೆ ನಡೆಸಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

### ಘೋರ ಘಟನೆ: ಹಾವು ಕಚ್ಚಿ ಎರಡು ವರ್ಷದ ಬಾಲಕಿ ಸಾವು

• **ಉದಯವಾಹಿನಿ, ಚಾಮರಾಜನಗರ**

ಹಾವು ಕಚ್ಚಿ 2 ವರ್ಷದ ಬಾಲಕಿ ಸಾವನ್ನಪ್ಪಿದ ಘಟನೆ ಕೊಳ್ಳೇಗಾಲದಲ್ಲಿ ನಡೆದಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ಶ್ರೀಧರ್ ಎಂಬುವವರ ಮಗು ಸಾವನ್ನಪ್ಪಿದೆ. ಕೊಳ್ಳೇಗಾಲ ತಾಲ್ಲೂಕಿನ ತೇರಂಬಳ್ಳಿ ಗ್ರಾಮದಲ್ಲಿ ಘಟನೆ ನಡೆದಿದೆ. ಶ್ರೀಧರ್ ಎಂಬುವವರು ತಮ್ಮ ಕುಟುಂಬದ ಜೊತೆ ಕಬ್ಬು ಕಟಾವು ಮಾಡಲು ಬಳ್ಳಾರಿಯಿಂದ ಬಂದಿದ್ದರು. ಈ ವೇಳೆ ಮಕ್ಕಳು ಕಬ್ಬಿನ ಗದ್ದೆಯಲ್ಲಿ ಆಟವಾಡುತ್ತಿದ್ದರು. ಆಗ ಹಾವು ಕಚ್ಚಿ ಮಗು ಮೃತಪಟ್ಟಿದೆ.

### ಭೀಕರ ಅಪಘಾತ: ಲಾರಿ-ಕ್ರೂಸ್ ಡಿಕ್ಕಿಯಾಗಿ ಸ್ಥಳದಲ್ಲೇ ಇಬ್ಬರು ಸಾವು

• **ಉದಯವಾಹಿನಿ, ತುಮಕೂರು**

ಜಿಲ್ಲೆಯಲ್ಲಿ ರಾಜ್ಯದಲ್ಲೇ ಮತ್ತೊಂದು ಭೀಕರ ಅಪಘಾತ ಎನ್ನುವಂತೆ ಲಾರಿ ಕ್ರೂಸರ್ ಡಿಕ್ಕಿಯಾಗಿ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿರುವಂತ ಘಟನೆ ನಡೆದಿದೆ. ತುಮಕೂರಿನ ಶಿರಾ ಬಳಿಯಲ್ಲಿ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಲಾರಿ ಹಾಗೂ ಕ್ರೂಸರ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಈ ಅಪಘಾತದಲ್ಲಿ ಸ್ಥಳದಲ್ಲೇ ಕ್ರೂಸರ್ ಚಾಲಕ ಸಾವನ್ನಪ್ಪಿದ್ದಾನ. ಮೃತ ಕ್ರೂಸರ್ ಚಾಲಕನನ್ನು ಬಸವರಾಜ್ ಎಂಬುದಾಗಿ ಗುರುತಿಸಲಾಗಿದೆ. ಮತ್ತೋರ್ವ ವ್ಯಕ್ತಿಯನ್ನು ಸುರೇಶ್ ಎಂಬುದಾಗಿ ತಿಳಿದು ಬಂದಿದೆ. ಮೃತರು ರಾಯಚೂರು ಜಿಲ್ಲೆಯ ಮಾನ್ವಿ ಮೂಲದವರು ಎಂಬುದಾಗಿ ತಿಳಿದು ಬಂದಿದೆ. ಈ ಅಪಘಾತದಲ್ಲಿ ಇನ್ನೂ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ಕರ್ನಾಟಕ ಸಂಬಂಧ ಶಿರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತರಾಳದಿಂದ... EDITORIAL

# ಯುಜಿಸಿ ಪ್ರಸ್ತಾವ: ವಿಶ್ವವಿದ್ಯಾನಿಲಯಗಳ ಮೇಲೆ ನಡೆಯಲಿರುವ ಸ್ವದೇಶಿ ದಾಳಿ


ಉದಯವಾಹಿನಿ ಚಿತ್ರ

ಒಂದು ದೇಶ- ಒಂದು ಚುನಾವಣೆಯ ವಿರುದ್ಧ ರಾಜ್ಯಗಳು ಆಕ್ರೋಶ ವ್ಯಕ್ತಪಡಿಸುತ್ತಿರುವ ಹೊತ್ತಿನಲ್ಲೇ, ವಿವಿ ಕುಲಪತಿ ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿ ಯುಜಿಸಿ (ವಿಶ್ವವಿದ್ಯಾಲಯ ಧನ ಸಹಾಯ ಆಯೋಗ) ಪ್ರಸ್ತಾವವೊಂದನ್ನು ಮುಂದಿಟ್ಟಿದೆ. ಇದಕ್ಕೆ ಸಂಬಂಧಿಸಿದ ಕರಡು ಮಾರ್ಗಸೂಚಿಗಳನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಬಿಡುಗಡೆಗೊಳಿಸಿದ್ದಾರೆ.ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಹಾಗೂ ವೈವಿಧ್ಯಮಯ ಪ್ರತಿಭೆಗಳನ್ನು ಗುರುತಿಸುವ ಮೂಲಕ ನಾವು ಭಾರತದ ಕ್ರಿಯಾತ್ಮಕ ಶೈಕ್ಷಣಿಕ ಭವಿಷ್ಯಕ್ಕೆ ದಾರಿಯನ್ನು ಕಲ್ಪಿಸುತ್ತಿದ್ದೇವೆ ಎಂದು ಸಚಿವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

ಹಾಲಿ ಇರುವಂತೆ ಕುಲಪತಿಗಳ ಹುದ್ದೆಗೆ ಅಭ್ಯರ್ಥಿಗಳು ವಿವಿಯಲ್ಲಿ ಅಥವಾ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯಲ್ಲಿ ಅಥವಾ ಶೈಕ್ಷಣಿಕ ಅಧಿಕಾರಿಯಾಗಿ 10 ವರ್ಷಗಳ ಅನುಭವ ಇದ್ದರೆ ಸಾಕು. ಎಲ್ಲಕ್ಕಿಂತ ಮುಖ್ಯವಾಗಿ ಕುಲಪತಿಗಳ ನೇಮಕಾತಿಯಲ್ಲಿ ರಾಜ್ಯಗಳ ಹಸ್ತಕ್ಷೇಪವನ್ನು ನಿಯಮಾವಳಿ ಸಂಪೂರ್ಣ ನಿರಾಕರಿಸುತ್ತದೆ.

ಈ ಹಿಂದೆ ಯುಪಿಎಸ್ಸಿಯಲ್ಲಿ ಹಿಂಬಾಗಿಲ ನೇಮಕಾತಿಯನ್ನು ಮಾಡಲು ಹೊರಟು ಕೇಂದ್ರ ಸರಕಾರ ತೀವ್ರ ಮುಖಭಂಗವನ್ನು ಅನುಭವಿಸಿತ್ತು. ಬೇರೆ ಬೇರೆ ಕ್ಷೇತ್ರಗಳಲ್ಲಿ ಪರಿಣಿತರಾದವರನ್ನು ಸರಕಾರದ ಉನ್ನತ ಹುದ್ದೆಗಳಲ್ಲಿ ನೇಮಕಗೊಳಿಸಿ, ಆಡಳಿತವನ್ನು ಸುಧಾರಣೆಗೊಳಿಸಲಾಗುವುದೆಂದು ಸರಕಾರ ಹೇಳಿತ್ತಾದರೂ, ಇದು ಸರಕಾರದೊಳಗೆ ತನ್ನ ಮೂಗಿನ ನೇರಕ್ಕಿರುವ ಶಕ್ತಿಗಳನ್ನು ನುಗ್ಗಿಸುವ ತಂತ್ರವೂ ಆಗಿತ್ತು. ಲೇಟರಲ್ ಎಂಟ್ರಿಯ ಮೂಲಕ ನಡೆಯುವ ನೇಮಕಾತಿ ಆರಂಭದಲ್ಲೇ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತ್ತು. ಈ ಬಗ್ಗೆ ಹಲವು ತಜ್ಞರು ತಮ್ಮ ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದರು.

> **ಕರಡು ನಿಯಮಗಳ ಪ್ರಕಾರ ಕನಿಷ್ಠ 10 ವರ್ಷಗಳ ಅನುಭವವನ್ನು ಹೊಂದಿರುವ ಉದ್ಯಮರಂಗದ ಪರಿಣತರು, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆಯಲ್ಲಿ ಕಾರ್ಯ ನಿರ್ವಹಿಸಿದವರು ಮತ್ತು ಸರಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿಗಳು ವಿವಿ ಕುಲಪತಿಗಳಾಗಿ ನೇಮಕಗೊಳ್ಳಲು ಅರ್ಹರಾಗಲಿದ್ದಾರೆ. ಅಷ್ಟೇ ಅಲ್ಲ ಬೋಧಕ ಸಿಬ್ಬಂದಿ ನೇಮಕಾತಿಯ ನಿಯಮಗಳಿಗೂ ಭಾರೀ ಸರ್ಜರಿಗಳನ್ನು ಮಾಡಲಾಗಿದೆ.**

ನೇಮಕಾತಿಯ ಪ್ರಕ್ರಿಯೆ ನಿಧಾನಕ್ಕೆ ಸರಕಾರದೊಳಗೆ ಅನರ್ಹರನ್ನೂ ಸೇರಿಸಲು ಅವಕಾಶ ನೀಡಬಹುದು ಎನ್ನುವ ಆತಂಕವನ್ನು ಹಲವರು ವ್ಯಕ್ತಪಡಿಸಿದ್ದರು. ಉನ್ನತ ಹುದ್ದೆಗಳಲ್ಲಿ ಮೀಸಲಾತಿಯನ್ನು ರದ್ದುಗೊಳಿಸಲು ಈ ಹಿಂಬಾಗಿಲನ ನೇಮಕಾತಿಯನ್ನು ಬಳಸಿಕೊಳ್ಳಲಾಗಿದೆ ಎಂದು ವಿರೋಧ ಪಕ್ಷಗಳು ಭಾರೀ ಪ್ರತಿಭಟನೆಗಳನ್ನು ನಡೆಸಿದವು. ಲೋಕಸಭೆಯಲ್ಲೂ ಗದ್ದಲಕ್ಕೆ ಕಾರಣವಾಯಿತು. ಈ ನೇಮಕಾತಿ ಕಾಂಟ್ರಾಕ್ಟ್ ಬೇಸಿಸ್ ಆಗಿರುವುದರಿಂದ, ಆಡಳಿತದ ಆಳಅಗಲಗಳನ್ನು ಅರಿತು ಕಾರ್ಯನಿರ್ವಹಿಸಲು ಬಹುದೊಡ್ಡ ತೊಡಕಾಗುತ್ತದೆ ಎನ್ನುವ ಕಳವಳವನ್ನು ತಜ್ಞರು ಮುಂದಿಟ್ಟರು.

ಈ ನೇಮಕಾತಿಗೆ ವ್ಯಕ್ತವಾದ ಪ್ರತಿರೋಧ, ಕೇಂದ್ರ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಎಸ್ಡಿಎ ಮಿತ್ರರು ಕೂಡ ಇದರ ವಿರುದ್ಧ ಧ್ವನಿಯೆತ್ತ ತೊಡಗಿದ ಕಾರಣದಿಂದ, ಕೊನೆಗೂ ತನ್ನ ನೇಮಕಾತಿ ಆದೇಶವನ್ನು ಸರಕಾರ ಹಿಂದೆಗೆದುಕೊಂಡು ಮುಖ ಉಳಿಸಿಕೊಂಡಿತು. ಆ ಹಿಂಬಾಗಿಲ ನೇಮಕಾತಿಯನ್ನೇ ಕೇಂದ್ರ ಸರಕಾರ ಇದೀಗ ಶಿಕ್ಷಣ ಕ್ಷೇತ್ರದ ಉನ್ನತ ಸ್ಥಾನಗಳಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದೆ. ಈಗಾಗಲೇ ಪ್ರಾಥಮಿಕ ಹಂತದಲ್ಲಿ ಶಿಕ್ಷಣವನ್ನು ಕೇಸರೀಕರಣಗೊಳಿಸಲು ಭಾಗಶಃ ಯಶಸ್ವಿಯಾಗಿರುವ ಕೇಂದ್ರ ಸರಕಾರ, ವಿಶ್ವವಿದ್ಯಾನಿಲಯಗಳಲ್ಲಿ ತನ್ನ ಮೂಗಿನ ನೇರಕ್ಕೆ ತಕ್ಕ ಹಾಗೆ ನೇಮಕಾತಿಗಳನ್ನು ಮಾಡಿ ಆ ಮೂಲಕ ಶಿಕ್ಷಣ ಕೇಂದ್ರಗಳನ್ನು ತನ್ನ ನಿಯಂತ್ರಣಕ್ಕೆ ತರಲು ಮುಂದಾಗಿದೆ. ಇತ್ತೀಚಿನ ದಿನಗಳಲ್ಲಿ ಕುಲಪತಿಗಳ ನೇಮಕಾತಿಗಳ ವಿಷಯದಲ್ಲಿ ರಾಜ್ಯಪಾಲರು ಮತ್ತು ರಾಜ್ಯ ಸರಕಾರದ ನಡುವಿನ ಸಂಘರ್ಷ ತಾರಕಕ್ಕೇರಿತ್ತು.

ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರವೂ ಈ ವಿಷಯದಲ್ಲಿ ರಾಜ್ಯಪಾಲರ ಜೊತೆಗೆ ಗುದ್ದಾಟ ನಡೆಸಿತ್ತು ಮಾತ್ರವಲ್ಲ, ಕುಲಪತಿ ನೇಮಕಾತಿಯ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ತೆಗೆದುಕೊಂಡ ವಿಧೇಯಕ ತಿದ್ದುಪಡಿ ನಿರ್ಣಯಕ್ಕೆ ಸಂಪುಟ ಸಭೆ ಅನುಮೋದನೆಯನ್ನೂ ನೀಡಿತ್ತು. ಆದರೆ ಇದು ಕೇಂದ್ರ ಸರಕಾರಕ್ಕೆ ಅಧಿಕಪ್ರಸಂಗವಾಗಿ ಕಂಡಿತು. ದಕ್ಷಿಣ ಭಾರತದ ರಾಜ್ಯಗಳು ವಿಶ್ವವಿದ್ಯಾನಿಲಯಗಳಲ್ಲಿ ರಾಜ್ಯಪಾಲರ ಹಸ್ತಕ್ಷೇಪಕ್ಕೆ ತೀವ್ರ ಪ್ರತಿರೋಧ ನಡೆಸುತ್ತಿರುವುದು ಕೇಂದ್ರ ಸರಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿತ್ತು. ಆ ಕಾರಣದಿಂದಲೇ, ಇದೀಗ ಯುಜಿಸಿಯ ಮೂಲಕ ಕುಲಪತಿಗಳ ನೇಮಕಾತಿಯ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಳ್ಳಲು ಯೋಜನೆಯನ್ನು ಹಾಕಿಕೊಂಡಿದೆ.

ಈ ಮೂಲಕ ಕೇಂದ್ರ ಸರಕಾರ ಒಕ್ಕೂಟ ಸಂರಚನೆಯನ್ನು ಇನ್ನಷ್ಟು ದುರ್ಬಲಗೊಳಿಸಿ, ಹಂತ ಹಂತವಾಗಿ ರಾಜ್ಯ ಸರಕಾರಗಳನ್ನು ದುರ್ಬಲಗೊಳಿಸಲು ಮುಂದಾಗಿದೆ. ಯುಜಿಸಿ ಪ್ರಸ್ತಾವಕ್ಕೆ ಮೊತ್ತ ಮೊದಲು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಧ್ವನಿಯೆತ್ತಿದ್ದಾರೆ. ಉಪಕುಲಪತಿಗಳ ನೇಮಕಾತಿಯ ಅರ್ಹತೆಗೆ ಸಂಬಂಧಿಸಿದಂತೆ ಪ್ರಸ್ತಾವದಲ್ಲಿ ಹಲವು ಗಂಭೀರ ಬದಲಾವಣೆಗಳನ್ನು ಮಾಡಲಾಗಿದೆ. ಹೊಸ ನಿಯಮಗಳ ಪ್ರಕಾರ ಉಪಕುಲಪತಿಗಳನ್ನು ಕೇವಲ ಅಕಾಡಮಿಕ್ ವಲಯದಿಂದ ಮಾತ್ರ ನೇಮಿಸಿಕೊಳ್ಳದೆ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ ಉದ್ಯಮಿಗಳು, ಸಾರ್ವಜನಿಕ ಆಡಳಿತದ ನೀತಿ ನಿರೂಪಕರು ಸೇರಿದಂತೆ ಇತರ ಕ್ಷೇತ್ರಗಳ ತಜ್ಞರನ್ನು ನೇಮಕ ಮಾಡಬಹುದಾಗಿದೆ.

# ರಾಮಾಯಣ



## ದಶರಥ ರಾಯನ ವಂಶಾವಳಿ

• ಹಿಂದಿನ ಸಂಚಿಕೆಯಿಂದ 73ನೆಯ ಅಧ್ಯಾಯ

ನಾನು ನನ್ನ ಒಡಹುಟ್ಟಿದವಳಾದ ಕೈ ಕೇಯಿದೇವಿಯ ಕುಮಾರನಾದ ಶ್ರೀಚಾಮರಾಜೋಕ್ತಿ ವಿಲಾಸವೆಂಬ ಕನ್ನಡ ರಾಮಾಯಣ ಭರತನನ್ನು ನೋಡಬೇಕೆಂಬ ಪ್ರೀತಿಯಿಂದ ಅಯೋಧ್ಯಾಪಟ್ಟಣಕ್ಕೆ ಬಂದೆನು. ಅಲ್ಲಿ ನಿನ್ನ ಮಕ್ಕಳ ವಿವಾಹದ ನಿಮಿತ್ತವಾಗಿ ನೀನು ನಾಲ್ವರು ಮಕ್ಕಳನ್ನು ಕರೆದುಕೊಂಡು ಮಿಥಿಲಾಪಟ್ಟಣಕ್ಕೆ ಬಂದದ್ದನ್ನು ಕೇಳಿ ಅತ್ಯಂತ ಸಂತೋಷದಿಂದ ನನ್ನ ಸೋದರಳಿಯನಾದ ಭರತನ ವಿವಾಹವನ್ನು ನೋಡಬೇಕೆಂದು ಇಲ್ಲಿಗೆ ಬಂದೆನು ಎಂದು ಹೇಳಿದನು.

ಯುಧಾಜಿತ್ತಿನ ಮನೋಹರವಾದ ವಾಕ್ಯವನ್ನು ಕೇಳಿ ದಶರಥರಾಯನು ಅತಿಹರ್ಷಪಟ್ಟು ತನ್ನ ಮೈದುನನಿಗೆ ಅನೇಕ ಸತ್ಕಾರಗಳನ್ನು ಮಾಡಿ ಆ ರಾತ್ರಿಯನ್ನು ಕಳೆದು ಮಾರನೆಯ ದಿವಸ ಪ್ರಾತಃ ಕಾಲದಲ್ಲಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ವಸಿಷ್ಠ ವಿಶ್ವಾಮಿತ್ರರು ಮೊದಲಾದ ಋಷಿಗಳನ್ನು ಮುಂದಿಟ್ಟುಕೊಂಡು ವಿವಾಹಮಂಟಪಕ್ಕೆ ಬಂದನು. ಆಗ ಅತಿತೇಜಸ್ವಿಯಾದ ಶ್ರೀರಾಮನು ಸಾಭರಣಭೂಷಿತರಾದ ತಮ್ಮಂದಿರನ್ನು ಕೂಡಿಕೊಂಡು ವಿವಾಹಕಾಲೋಚಿತವಾದ ಅಲಂಕಾರಗಳನ್ನು ಮಾಡಿಕೊಂಡು ವಸಿಷ್ಠಮುನೀಶ್ವರನನ್ನು ಮುಂದಿಟ್ಟುಕೊಂಡು ತನ್ನ ತಂದೆಯಾದ ದಶರಥ ರಾಯನ ಸಮೀಪದಲ್ಲಿ ನಿಂತಿದ್ದನು. ವಸಿಷ್ಠಮುನೀಶ್ವರನು ಜನಕರಾಯನನ್ನು ಕುರಿತು ಎಲ್ಫ್ ಜನಕ ಮಹಾರಾಯನೆ, ದಶರಥ ರಾಯನು ತನ್ನ ಕುಮಾರರಿಗೆ ವಿವಾಹಕಾಲೋಚಿತವಾದ ಮಾಂಗಲ್ಯ ಕೃತ್ಯಗಳನ್ನು ಮಾಡಿಸಿ ವಿವಾಹಲಗ್ನದ ಸಮಯವಾಯಿತೆಂದು ಅವರನ್ನು ಕರೆದುಕೊಂಡು ಬಂದಿದ್ದಾನೆ.

ಕನ್ಯಾದಾನವನ್ನು ತೆಗೆದುಕೊಳ್ಳುವವರಿಗೂ ಕೊಡುವವರಿಗೂ ಮಹಾಶ್ರೇಯಸ್ಸುಂಟಾಗುವುದು ! ಈಗ ವಿವಾಹಮುಹೂರ್ತವು. ಈ ಮುಹೂರ್ತದಲ್ಲಿ ವಿವಾಹವನ್ನು ಮಾಡಿಸು ಎಂದು ನುಡಿದನು. ಜನಕಮಹಾರಾಯನು ವಸಿಷ್ಠ ಮುನೀಶ್ವರರೆ, ನಾನು ವಿವಾಹವನ್ನು ಮಾಡಿಸುವುದಕ್ಕೆ ಸ್ವತಂತ್ರನೇನು ! ಈ ರಾಜ್ಯವೂ ಈ ಪಟ್ಟಣವೂ ಈ ಅರಮನೆಯೂ ನಿಮ್ಮದೇ ಸರಿ. ಕರ್ತರಾಗಿರು ವಂಥ ನಿಮಗೆ ಅಪ್ಪಣೆಯನ್ನು ಕೊಡುವುದಕ್ಕೆ ನಾನು ಸಮರ್ಥನಲ್ಲ. ನೀವೇ ಮದುವೆ ಮಾಡಿಸಿರಿ. ನಾನು ಹಸೆಯಜಗಲಿಯನ್ನಲಂಕರಿಸಿ ಆ ಜಗಲಿಯ ಮೇಲೆ ನನ್ನ ಕುಮಾರಿಯರನ್ನು ಕುಳ್ಳಿರಿಸಿ ಕೊಂಡಿರುತ್ತೇನೆ.

ನನ್ನ ಕುಮಾರಿಯರು ಪ್ರಕಾಶಮಾನವಾದ ಯಜ್ಞಪುರುಷನಂತೆ ತೇಜಸ್ವಿಗಳಾಗಿ ಅತಿಕಾಂತಿಯುಳ್ಳವರಾಗಿದ್ದಾರೆ. ನಾನು ಹಸೆಯಜಗಲಿಯ ಮೇಲೆ ಕುಳಿತುಕೊಂಡು ನಿಮ್ಮ ಬರುವಿಕೆಯನ್ನು ಕಾಯ್ದುಕೊಂಡಿದ್ದೇನೆ. ನೀವು ಏಕೆ ಕಾಲವಿಳಂಬವನ್ನು ಮಾಡುತ್ತಿದ್ದೀರಿ? ಶೀಘ್ರದಲ್ಲಿ ವಿವಾಹವನ್ನು ನಡೆಸಿರಿ ಎಂದು ಹೇಳಿದನು. ಆಮೇಲೆ ವಸಿಷ್ಠಮುನೀಶ್ವರನು ವಶರಥರಾಯನ ಕುಮಾರರನ್ನೂ ಋಷಿಗಳನ್ನೂ ವಿವಾಹಮಂಟಪಕ್ಕೆ ಕರೆದುಕೊಂಡು ಬಂದನು. ಜನಕರಾಯನು ವಸಿಷ್ಠ ಮುನೀಶ್ವರನನ್ನು ಕುರಿತು ಸುಮುಹೂರ್ತದಲ್ಲಿ ಸಮಸ್ತ ಲೋಕ ಮನೋಹರನಾದ ಶ್ರೀರಾಮನಿಗೆ ವಿವಾಹವನ್ನು ಮಾಡಿಸಿರಿ. ನೀವು ಸರಜ್ಞರು. ನೀವು ಅರಿಯದ ಕೃತ್ಯವೇ ಇಲ್ಲ, ಆದ್ದರಿಂದ ಸಮಸ್ತವನ್ನೂ ನೀವೇ ಮಾಡಿಸಬೇಕು ಎಂದು ಹೇಳಿದನು. **ಮುಂದುವರೆಯುವುದು.............**

# ಎಳ್ಳು-ಬೆಲ್ಲ ತಿಂದು ನಾವು ನೀವು ಒಳ್ಳೆಯ ಮಾತನಾಡೋಣ



☛ ಬಾಲರಾಜ ಎಂ. ವಿಶ್ವಕರ್ಮ
• ಉದಯವಾಹಿನಿ ವಿಶೇಷ

ನಮ್ಮ ಸನಾತನ ಹಿಂದೂ ಧರ್ಮದ ಪ್ರತಿಯೊಂದು ಹಬ್ಬ ಆಚರಣೆಗಳು ತನ್ನದೇ ಆದ ವಿಶೇಷತೆ ಹಾಗೂ ವೈಜ್ಞಾನಿಕ ಹಿನ್ನಲೆಗಳನ್ನೊಳಗೊಂಡಿವೆ. ವೈಜ್ಞಾನಿಕ ಜಗತ್ತು ಇತ್ತೀಚೆಗೆ ನಮ್ಮ ಎಲ್ಲಾ ಪ್ರಮುಖ ಸಂಪ್ರದಾಯ, ಹಬ್ಬ, ಆಚರಣೆಗಳ ಹಿನ್ನಲೆ ಹಾಗೂ ಅವುಗಳ ವಿಶೇಷತೆಗಳ ಕುರಿತು ಅಧ್ಯಯನ ಮಾಡಿ ಸನಾತನ ಧರ್ಮದ ಪ್ರತಿಯೊಂದು ಪ್ರಮುಖ ಆಚರಣೆಗಳು ತನ್ನದೇ ಆದ ವೈಜ್ಞಾನಿಕ ಕಾರಣಗಳನ್ನು ಹೊಂದಿವೆ ಎಂದು ಸ್ವತಃ ಒಪ್ಪಿಕೊಳ್ಳುತ್ತಿದೆ. ಅಂತಹ ಸನಾತನ ಹಿಂದೂ ಧರ್ಮದ ಪ್ರಮುಖ ಹಬ್ಬಗಳಲ್ಲೊಂದಾದ ಹಬ್ಬವೇ ಮಕರ ಸಂಕ್ರಾಂತಿ ಹಬ್ಬ. ಸಂಕ್ರಮಣ- ಎಂದರೆ ಚಲಿಸುವಿಕೆ ಎಂದರ್ಥ.

ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವುದಕ್ಕೆ ಸಂಕ್ರಮಣ ಎಂದು ಕರೆಯುತ್ತೇವೆ. ಈ ರೀತಿ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಒಟ್ಟು ಹನ್ನೆರಡು ಮಾಸಿಕ ಸಂಕ್ರಮಣಗಳು ಸಂಭವಿಸುತ್ತವೆ.

ಸೂರ್ಯದೇವನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಚಲಿಸುತ್ತ ಧನುರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಪುಣ್ಯ ಕಾಲವೇ ಈ ಮಕರ ಸಂಕ್ರಾಂತಿ. ಇದನ್ನು ಉತ್ತರಾಯಣ ಪರ್ವ ಕಾಲವೆಂದೂ ಕರೆಯಲಾಗುತ್ತದೆ.

ಮಕರ ಸಂಕ್ರಾತಿ ಹಬ್ಬವನ್ನು ಭಾರತ ದೇಶದಾದ್ಯಂತ ಆಚರಿಸಲಾಗುತ್ತದೆ. ತೆಲಂಗಾಣ, ಆಂದ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಸಂಕ್ರಾಂತಿ, ಮಕರ ಸಂಕ್ರಾಂತಿ ಎಂದು ಆಚರಿಸಿದರೇ, ತಮಿಳುನಾಡಿನಲ್ಲಿ ಪೊಂಗಲ್ ಎಂದು, ಗುಜರಾತ್ ರಾಜ್ಯದಲ್ಲಿ ಉತ್ತರಾಯಣವೆಂದು, ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಕಿಚಡಿ ಎಂದು, ಪಂಜಾಬ್ ರಾಜ್ಯದಲ್ಲಿ ಮಾಘೀ ಎಂದೂ ಇನ್ನು ಹಲವು ರಾಜ್ಯಗಳಲ್ಲಿ ವಿವಿಧ ರೀತಿಯಲ್ಲಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಏಕತೆಯಲ್ಲಿ ವೈವಿಧ್ಯತೆ ಎಂಬಂತೆ ನಮ್ಮ ಭಾರತ ದೇಶದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಭಾಷೆ, ಉಡುಗೆ, ತೊಡುಗೆ, ಆಚರಣೆಗಳ ಹೆಸರು ಮಾತ್ರ ಬೇರೆಯಾದರೂ ಸಂಪ್ರದಾಯ ಮಾತ್ರ ಒಂದೇ.

ಮಕರ ಸಂಕ್ರಾಂತಿಯಿಂದ ರಥಸಪ್ತಮಿವರೆಗಿನ ಅವಧಿಗೆ ಪುಣ್ಯಪ್ರದ ಉತ್ತರಾಯಣಕಾಲ ಎಂದು ಕರೆಯಲಾಗುತ್ತದೆ. ಈ ಪುಣ್ಯಮಯ ಕಾಲವು ದಾನ-ಧರ್ಮಕ್ಕೆ ಶ್ರೇಷ್ಠ ಅವಧಿಯೆಂದು ಪರಿಗಣಿಸಲಾಗಿದೆ. ನಮ್ಮ ಪುರಾಣಗಳಲ್ಲಿ ಉಲ್ಲೇಖವಿರುವಂತೆ ಈ ಮಕರ ಸಂಕ್ರಮಣದ ಉತ್ತರಾಯಣ ಕಾಲವು ಪರಮ ಪವಿತ್ರತೆಯಿಂದ ಕೂಡಿದೆ. ಈ ಪುಣ್ಯಮಯ ಕಾಲದಲ್ಲಿ ಸ್ವರ್ಗಲೋಕದ ಬಾಗಿಲು ತೆರೆದಿರುತ್ತದೆ ಎಂದೂ, ಈ ಪುಣ್ಯಕಾಲದಲ್ಲಿ ದೇಹ ತ್ಯಜಿಸಿದವರು ನೇರ ಸ್ವರ್ಗಲೋಕಕ್ಕೆ ಹೋಗುವವರೆಂಬುದು ಆದಿಕಾಲದಿಂದಲೂ ನಮ್ಮಲ್ಲಿ ಬಂದಿರುವ ನಂಬಿಕೆ.

ಅಂದು ಮಹಾಭಾರತದ ಕುರುಕ್ಷೇತ್ರ ಯುದ್ಧದಲ್ಲಿ ಗಾಂಡೀವಿ ಅರ್ಜುನನ ಬಾಣಗಳಿಂದ ಘಾತಕ್ಕೊಳಗಾಗಿ ಶರಶಯ್ಯೆ ಮೇಲೆ ಮಲಗಿದ್ದ ಭೀಷ್ಮ ಪಿತಾಮಹರು, ಪುಣ್ಯಕಾಲಕ್ಕಾಗಿ ಕಾದು ತಮ್ಮ ದೇಹ ತೊರೆದದ್ದು ಇದೇ ಉತ್ತರಾಯಣ ಪುಣ್ಯ ಕಾಲದಲ್ಲಿ.

ಭಗೀರತ ಮಹರ್ಷಿಗಳ ತಪಸ್ಸಿಗೆ ಒಲಿದು ಭುವಿಗಿಳಿದು ಬಂದ ದೈವಗಂಗಾ ಮಾತೆಯು ಕಪಿಲ ಮಹರ್ಷಿಗಳ ಆಶ್ರಮವನ್ನು ಪ್ರವೇಶಿಸಿದ ದಿನಕ್ಕೆ ಪಾಪ ನಾಶನ ದಿನವೆಂಬ ಹೆಸರು ಬರುವಂತಾಗಿದ್ದು ಇದೇ ಮಕರ ಸಂಕ್ರಾಂತಿಯಂದು.

ದೇವಿ ಭಾಗವತ ಪುರಾಣದ ಪ್ರಕಾರ ಕೈಲಾಸವಾಸಿ ಮಹಾದೇವನು ಮಹಾವಿಷ್ಣುವಿಗೆ ಆತ್ಮ ಜ್ಞಾನವನ್ನು ಬೋಧಿಸಿದ್ದು ಇದೇ ಉತ್ತರಾಯಣ ಪರ್ವಕಾಲದಲ್ಲಿ.

ಮತ್ಸ್ಯ ಪುರಾಣದ ಪ್ರಕಾರ ದೇವ ದೇವತೆಗಳ ದಿನವು ಪ್ರಾರಂಭವಾಗುವುದೇ ಈ ಪುಣ್ಯಪ್ರದ ಮಕರ ಸಂಕ್ರಮಣದಂದು ಹಾಗಾಗಿ ಈ ದಿನವನ್ನು ಕಲ್ಯಾಣಕರ ದಿನವೆಂದೂ ಕರೆಯಲಾಗುತ್ತದೆ.

ಚಳಿಗಾಲದಲ್ಲಿ ಬರುವ ಈ ಮಕರ ಸಂಕ್ರಾಂತಿ ಹಬ್ಬದಂದು ಹೆಚ್ಚಾಗಿ ಎಳ್ಳು, ಎಳ್ಳು-ಬೆಲ್ಲ, ನೆಲಗಡಲೆ ಕಾಳು(ಶೇಂಗಾ), ಕೊಬ್ಬರಿ ಹೀಗೆ ಎಣ್ಣೆಯ ಅಂಶವುಳ್ಳ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸುವ ಪದ್ಧತಿ ನಮ್ಮಲ್ಲಿ ಕಾಣಬಹುದು. ಇದರ ಹಿಂದೆ ಒಂದು ವೈಜ್ಞಾನಿಕ ಕಾರಣವೂ ಅಡಗಿದೆ. ಏನೆಂದರೆ ಚಳಿಗಾಲದ ಮೈಕೊರೆವ ಚಳಿಗೆ ನಮ್ಮ ಚರ್ಮವು ಒಣಗಿ ಎಣ್ಣೆಯ ತೇವಾಂಶವನ್ನೆ ಕಳೆದುಕೊಂಡಿರುತ್ತದೆ. ಹಾಗಾಗಿ ನಮ್ಮ ದೇಹದಲ್ಲಿ ಪುನಃ ಎಣ್ಣೆಯ ಅಂಶ ಮತ್ತು ಕಾಂತಿಯನ್ನು ತರಲು ಈ ಚಳಿಗಾಲದಲ್ಲಿ ಬರುವ ಮಕರ ಸಂಕ್ರಾಂತಿ ಹಬ್ಬದಂದು ಎಣ್ಣೆಯ ಸ್ನಾನ, ಎಳ್ಳು, ಅರಿಶಿನ ಕುಟ್ಟಿಮಾಡಿದ ಪುಡಿಯಿಂದ ಸ್ನಾನ, ಎಳ್ಳು ಬೆಲ್ಲ, ಕೊಬ್ಬರಿ, ಶೇಂಗಾ ಹೀಗೆ ಎಣ್ಣೆಯ ಅಂಶವುಳ್ಳ ಪದಾರ್ಥಗಳನ್ನು ಸೇವಿಸುವ ಮೂಲಕ ಪುನಃ ತೇವಾಂಶವನ್ನು ಹೆಚ್ಚಿಸಿಕೊಳ್ಳುವ ಈ ಪದ್ಧತಿಯನ್ನು ನಮ್ಮ ಪೂರ್ವಜರು ಆಗಲೇ ಸಂಪ್ರದಾಯವೆಂಬ ಹೆಸರಿನೊಂದಿಗೆ ಈ ಹಬ್ಬಗಳಲ್ಲಿ ಸೇರಿಸಿದ್ದಾರೆ. ಅಷ್ಟೇ ಅಲ್ಲದೇ ಮಕರ ಸಂಕ್ರಮಣ ಹಬ್ಬದ ದಿನದಂದು ಎಳ್ಳು ಬೆಲ್ಲವನ್ನು ನೆರೆ ಹೊರೆಯವರಿಗೆ, ಬಂಧು ಮಿತ್ರರಿಗೆ ಹಾಗೂ ಓಣಿಯವರಿಗೆಲ್ಲ ಹಂಚಿ ಎಳ್ಳು ಬೆಲ್ಲ ತಿಂದು ನಾವು ನೀವು ಒಳ್ಳೆಯ ಮಾತನಾಡೋಣ ಎಂಬ ಶುಭ ಹಾರೈಕೆಯ ಮೂಲಕ ಸಮಾಜದಲ್ಲಿ ಉತ್ತಮ ಬಾಂಧವ್ಯವನ್ನು ಬೆಸೆಯುವಲ್ಲಿ ಈ ಸಂಕ್ರಾಂತಿ ಹಬ್ಬವು ಪ್ರಮುಖ ಪಾತ್ರ ವಹಿಸುತ್ತದೆ.

ಒಟ್ಟಿನಲ್ಲಿ ರಾಜ್ಯಗಳಿಂದ ರಾಜ್ಯಗಳಿಗೆ ವೇಷ, ಭಾಷೆ ಹಾಗೂ ಜೀವನ ಶೈಲಿ ಬದಲಾದರೂ ಭಾರತದಾದ್ಯಂತ ಸನಾತನ ಹಿಂದೂ ಧರ್ಮದ ಹಬ್ಬ, ಆಚರಣೆಗಳು ವೈಜ್ಞಾನಿಕ ಹಿನ್ನಲೆಗಳೊಂದಿಗೆ ವಿವಿಧತೆಯಲ್ಲಿ ಏಕತೆಯ ಸಂದೇಶವನ್ನು ಸಾರುತ್ತವೆ.

ಎಲ್ಲರಿಗೂ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.




**ಕೃಷಿ ಪ್ರಧಾನವಾದ ನಮ್ಮೀ ಭಾರತ ದೇಶದಲ್ಲಿನ ರೈತರು ಈ ಮಕರ ಸಂಕ್ರಾಂತಿ ಹಬ್ಬದಂದು ತಾವು ಬೆಳೆದ ಬೆಳೆಯ ಫಸಲನ್ನು ಒಂದೆಡೆ ಹಾಕಿ ಅದಕ್ಕೆ ಪೂಜೆಯನ್ನು ಮಾಡಿ ಇಳುವರಿ ಅಧಿಕವಾಗಿ ಬರುವಂತೆ ದೇವರಲ್ಲಿ ಪ್ರಾರ್ಥಿಸಿ ಸುಗ್ಗಿಯನ್ನು ಆಚರಿಸುತ್ತಾರೆ. ಇನ್ನು ಹಬ್ಬದ ದಿನದ ಅಂದಿನ ಸಂಜೆ ರೈತರೆಲ್ಲರೂ ಒಂದೆಡೆ ಸೇರಿ ಕೃಷಿ ಚಟುವಟಿಕೆಗೆ ಬಳಸುವ ತಮ್ಮ ತಮ್ಮ ಸಾಕು ಎತ್ತುಗಳನ್ನು ಸಿಂಗರಿಸಿ ಕರೆತಂದು ಬೆಂಕಿಯ ಮೇಲಿಂದ ಹಾರಿಸುತ್ತಾರೆ. ಇದಕ್ಕೆ ಕಿಚ್ಚು ಹಾಯಿಸುವುದು ಎಂದು ಕರೆಯಲಾಗುತ್ತದೆ.**

# ದಿನಕ್ಕೊಂದು ಮುಕ್ತಕ -71



☛ ಹೆಚ್.ಎಸ್. ಪ್ರತಿಮಾ
• ಉದಯವಾಹಿನಿ ವಿಶೇಷ

**ಚಂಗುಲಾಬಿಯ ಹೂವು ಪರಿಮಳವ ಚೆಲ್ವಂತೆ**
**ಸಂಘಟಕರಾಗಿ ಜನರೊಡನೆ ಬೆರೆತು**
**ಸಂಘರ್ಷ ಮಾಡಿ ಉನ್ನತ ಹುದ್ದೆಯನು ಏರಿ**
**ತಂಗಾಳಿ ಬೀಸಿದರು ಲಕ್ಷ್ಮಿದೇವಿ....**



**ಭಾವಾರ್ಥ :** ಗುಲಾಬಿಯ ಹೂವು ಬಹಳಷ್ಟು ಸುಂದರವಾಗಿರುತ್ತದೆ. ಹಾಗೆಯೇ ಅದರ ಪರಿಮಳವು ಚಂದವೇ. ಸಂಘಟಕರಾದ ಹಲವು ನಾಯಕರುಗಳು ಎಲ್ಲರೊಂದಿಗೆ ಹೊಂದಿಕೊಳ್ಳುತ್ತ ಸಮಾಜದ ಕೆಲಸಗಳನ್ನು ಮಾಡಬೇಕಾಗಿದೆ. ಕೆಲವರು ಹುದ್ದೆಗಳನ್ನು ಹಠ ಮಾಡಿ ಹೋರಾಟಗಳನ್ನು ಮಾಡಿ ಸಂಘರ್ಷದಲ್ಲಿ ಗೆದ್ದು ಹುದ್ದೆಯನ್ನು ಪಡೆಯುತ್ತಾರೆ. ಆ ಹುದ್ದೆಯನ್ನು ಪಡೆದು ತಂಗಾಳಿಯು ಬೀಸುವ ರೀತಿಯಲ್ಲಿ ಎಲ್ಲೆಡೆಯೂ ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ. ಒಟ್ಟಾರೆ ಸಮಾಜಕ್ಕೆ ಒಳಿತನ್ನು ಮಾಡಬೇಕು. ಅವರು ಆ ಸಮಾಜದಲ್ಲಿ ಜನರೊಂದಿಗೆ ಹೊಂದಿಕೊಂಡು ಬಾಳಬೇಕಾಗುತ್ತದೆ. ಅವರ ಒಳಿತಿಗಾಗಿ ಕೆಲಸವನ್ನು ಮಾಡಬೇಕಾಗುತ್ತದೆ.

# ಶುಗರ್ ಇರುವವರು ಲವಂಗದ ನೀರು ಕುಡಿದ್ರೆ ಮಧುಮೇಹ ಕಂಟ್ರೋಲ್ ಬರುತ್ತಂತೆ ನಿಜನಾ?

• ಉದಯವಾಹಿನಿ ಬೆಂಗಳೂರು

ಲವಂಗವು ಸಾಕಷ್ಟು ಆಯುರ್ವೇದಿಕ್ ಗುಣಗಳನ್ನು ಹೊಂದಿದೆ. ಇದನ್ನು ನಮ್ಮ ಆಹಾರದಲ್ಲಿ ಬಳಸುವುದು ಆರೋಗ್ಯಕ್ಕೆ ಉತ್ತಮ ಎನ್ನಲಾಗುತ್ತದೆ. ಇದರ ನೀರನ್ನು ಖಾಲಿ ಹೊಟ್ಟೆಯಲ್ಲಿ ಕುಡಿಯೋದು ಪ್ರಯೋಜನಕಾರಿಯಾಗಿದೆಯಂತೆ.

ನಾವು ಅಡುಗೆಯಲ್ಲಿ ಬಳಸುವ ಲವಂಗವು ಒಂದು ಆಯುರ್ವೇದಿಕ್ ಗುಣಗಳಿರುವ ಮಸಾಲೆಯಾಗಿದೆ. ಇದು ಆಹಾರದ ಪರಿಮಳ ಮಾತ್ರವಲ್ಲದೆ, ರುಚಿಯನ್ನೂ ಹೆಚ್ಚಿಸುತ್ತದೆ. ಹಲವಾರು ಆರೋಗ್ಯ ಸಮಸ್ಯೆಗಳಿಗೆ ಇದೊಂದು ಪ್ರಯೋಜನಕಾರಿ ಆಯುರ್ವೇದಿಕ್ ಔಷಧಿಯಾಗಿದೆ.

ಪ್ರತಿದಿನ ಖಾಲಿ ಹೊಟ್ಟೆಯಲ್ಲಿ ಲವಂಗದ ನೀರನ್ನು ಕುಡಿಯೋದು ಆರೋಗ್ಯಕರ ಎನ್ನಲಾಗುತ್ತದೆ. ಅದಕ್ಕೆ ಸಂಬಂಧಿಸಿದ ವಿಡಿಯೋವೊಂದು ಯೂಟ್ಯೂಬ್‌ನಲ್ಲಿ ಹರಿದಾಡುತ್ತಿದೆ.

**ವಿಡಿಯೋದಲ್ಲಿ ಏನಿದೆ?** @sehatsootra ಎಂಬ ಹೆಸರಿನ ಯೂಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿರುವ ವಿಡಿಯೋದಲ್ಲಿ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಲವಂಗದ ನೀರನ್ನು ಕುಡಿಯುವುದರಿಂದ ತಲೆನೋವಿನಿಂದ ಪರಿಹಾರ ಸಿಗುವುದಲ್ಲದೆ, ಗ್ಯಾಸ್ ಇತ್ಯಾದಿ ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂದು ಹೇಳಲಾಗಿದೆ. ಜೊತೆಗೆ ಮಧುಮೇಹಿಗಳು ಇದನ್ನು ಸೇವಿಸುವುದರಿಂದ ಶುಗರ್ ಲೆವೆಲ್ ಕಂಟ್ರೋಲ್‌ನಲ್ಲಿರುತ್ತದೆ ಎನ್ನಲಾಗಿದೆ. ಅದನ್ನು ಕುಡಿಯುವುದರಿಂದ ಜೀರ್ಣಕ್ರಿಯೆಯೂ ಚೆನ್ನಾಗಿರುತ್ತದೆ. ಲವಂಗವು ಇನ್ಸುಲಿನ್ ಉತ್ಪಾದನೆಗೆ ಸಹಾಯ ಮಾಡುವ ಅನೇಕ ಸಂಯುಕ್ತಗಳನ್ನು ಹೊಂದಿದ್ದು, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡುತ್ತದೆ ಎನ್ನಲಾಗಿದೆ.

ಈ ವಿಡಿಯೋದಲ್ಲಿನ ಮಧುಮೇಹಿಗಳು ಖಾಲಿ ಹೊಟ್ಟೆಯಲ್ಲಿ ಲವಂಗದ ನೀರು ಕುಡಿಯುವುದರಿಂದ ಸಕ್ಕರೆಯ ಮಟ್ಟ ಕಡಿಮೆಯಾಗುತ್ತದೆ ಎಂದು ಹೇಳಲಾಗಿದೆ. ಇದರ ಬಗ್ಗೆ ನಮ್ಮ ಸಜಗ್ ಫ್ಯಾಕ್ಟ್ ಚೆಕ್ ತಂಡವು ವೈದ್ಯರ ಅಭಿಪ್ರಾಯವನ್ನು ಕೇಳಿದೆ. ಈ ಬಗ್ಗೆ ವೈದ್ಯರು ಏನಂದಿದ್ದಾರೆ ತಿಳಿಯೋಣ.

**ವೈದ್ಯರ ಅಭಿಪ್ರಾಯ:** ಮಣಿಪಾಲ್ ಆಸ್ಪತ್ರೆಯ ವೈದ್ಯ ಡಾ. ಅಭಿಜಿತ್ ಭೋಗರಾಜ್ ಅವರ ಪ್ರಕಾರ ಲವಂಗ ಆರೋಗ್ಯಕ್ಕೆ ಒಳ್ಳೆಯದು. ಹಾಗಂತ ಲವಂಗ ನೀರಿನಿಂದಲೇ ಡಯಬಿಟಿಸ್ ಸಂಪೂರ್ಣ ನಿಯಂತ್ರಣಕ್ಕೆ ಬರೋದಿಲ್ಲ. ನಾವು ಹೆಚ್ಚಿನ ಚಿಕಿತ್ಸೆಯನ್ನು ತೆಗೆದುಕೊಳ್ಳೋದು ಸೂಕ್ತ. ಹಾಗಾಗಿ ಇದು ಜನರ ದಾರಿ ತಪ್ಪಿಸುತ್ತಿದೆ ಎಂದಿದ್ದಾರೆ.




## ಲವಂಗವನ್ನು ಹೇಗೆ ಸೇವಿಸಬೇಕು

**ವೈದ್ಯರ ಪ್ರಕಾರ, ಲವಂಗವನ್ನು ಸೇವಿಸಲು ಸುಲಭವಾದ ಮಾರ್ಗವೆಂದರೆ ಲವಂಗದ ನೀರನ್ನು ಕುಡಿಯುವುದು. ಎರಡರಿಂದ ಮೂರು ಲವಂಗಗಳನ್ನು 100 ಮಿಲಿ ನೀರಿನಲ್ಲಿ ರಾತ್ರಿಯಿಡೀ ನೆನೆಸಿಡಿ. ಮರುದಿನ, ಅದನ್ನು ಸ್ವಲ್ಪ ಬಿಸಿ ಮಾಡಿ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು.**

# ಪ್ರೀ ಮೆನ್ಸ್ಟ್ರುವಲ್ ಸಿಂಡ್ರೋಮ್ ಲಕ್ಷಣಗಳು

• ಉದಯವಾಹಿನಿ ಬೆಂಗಳೂರು



ಪ್ರೀ ಮೆನ್ಸುವಲ್ ಸಿಂಡ್ರೋಮ್ ಇದು ಸಾಮಾನ್ಯವಾಗಿ ಮಹಿಳೆಯ ಋತುಚಕ್ರದ ಮೊದಲು ಕಾಣಿಸಿಕೊಳ್ಳುತ್ತದೆ. ಮೂಡ್ ಸ್ವಿಂಗ್ಸ್, ಎದೆನೋವು, ಆಯಾಸ, ಕಿರಿಕಿರಿ ಮುಂತಾದ ಅನೇಕ ದೈಹಿಕ ಲಕ್ಷಣಗಳಿವೆ. ಅದೇ ಸಮಯದಲ್ಲಿ ಕೆಲವು ಮಹಿಳೆಯರು ಪಿರಿಯಡ್ಸ್ ಮೊದಲು ನಿದ್ರೆಯ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಈ ಮುಖಪುಟ ಈ ನಿದ್ರೆಯ ಸಮಸ್ಯೆ ಪಿಎಂಎಸ್ ಸಂಬಂಧಿಸಿವೆ ಎಂದು ವೈದ್ಯರು ಹೇಳುತ್ತಾರೆ.

ಪಿರಿಯಡ್ಸ್ ಸಮಯದಲ್ಲಿ ಅನೇಕ ಮಹಿಳೆಯರಿಗೆ ಪಿಎಂಎಸ್ ನಿಂದ ತೊಂದರೆಯಾಗಬಹುದು. ಇದು ಅವರ ಅವಧಿಯ ಮೊದಲು ಅಥವಾ ಎರಡು ವಾರಗಳಲ್ಲಿ ಶೇ.90ಕ್ಕಿಂತ ಹೆಚ್ಚು ಪರಿಣಾಮ ಬೀರಬಹುದು. ಸಂಶೋಧನೆಯೊಂದರ ಪ್ರಕಾರ 75% ಮುಟ್ಟಿನ ಮಹಿಳೆಯರು ವಿವಿಧ ರೀತಿಯ ಪಿಎಂಎಸ್ ರೋಗ ಲಕ್ಷಣಗಳನ್ನು ಅನುಭವಿಸುತ್ತಾರೆ ಮತ್ತು 3-8% ತೀವ್ರ ರೋಗಲಕ್ಷಣಗಳನ್ನು ಹೊಂದಿದ್ದಾರೆ.

ಸ್ತ್ರೀರೋಗತಜ್ಞ ಪ್ರಕಾರ, ಪಿಎಂಎಸ್ ರೋಗಲಕ್ಷಣಗಳು ಸಾಮಾನ್ಯವಾಗಿ ಉಬ್ಬುವುದು, ಸ್ತನ ನೋವು ಮತ್ತು ಖಾಸಗಿ ಭಾಗಗಳು ಅಥವಾ ಸ್ನಾಯುಗಳಲ್ಲಿ ನೋವವನ್ನು ಒಳಗೊಂಡಿರುತ್ತದೆ. ಇದು ಮಹಿಳೆಯರನ್ನು ಎಚ್ಚರವಾಗಿರಿಸುತ್ತದೆ ಅಥವಾ ನಿದ್ರಾಹೀನತೆಗೆ ಕಾರಣವಾಗಬಹುದು. ನಿದ್ರಾಹೀನತೆ, ಚಡಪಡಿಕೆಯಿಂದಾಗಿ ಜನರು ಸಾಕಷ್ಟು ನಿದ್ರೆ ಪಡೆಯುವುದಿಲ್ಲ.

ಇದರಿಂದಾಗಿ ದೈನಂದಿನ ಜೀವನ ಶೈಲಿಯು ಹೆಚ್ಚು ಪರಿಣಾಮ ಬೀರುತ್ತದೆ. 2017ರಲ್ಲಿ ನಡೆಸಿದ ಅಧ್ಯಯನವೊಂದರ ಪ್ರಕಾರ, ಇದರಲ್ಲಿ ಭಾಗವಹಿಸಿದ್ದ 17 ರಿಂದ 22 ವರ್ಷ ವಯಸ್ಸಿನ 194 ಮಹಿಳೆಯರಲ್ಲಿ 20.1% ನಿದ್ರಾಹೀನತೆಯ ಜತೆಗೆ ಪಿಎಂಎಸ್ ಅನ್ನು ಅನುಭವಿಸಿದ್ದಾರೆ ಎಂಬುದನ್ನು ಕಂಡುಹಿಡಿದಿದೆ. ಈ ಸಮಯದಲ್ಲಿ ಮಹಿಳೆಯರು ಅನುಭವಿಸುವ ಕೆಲವು ಸಾಮಾನ್ಯ ಲಕ್ಷಣಗಳನ್ನು ಸಂಶೋಧಕರು ಪಟ್ಟಿ ಮಾಡಿದ್ದಾರೆ. ಅವುಗಳು ಹೊಟ್ಟೆನೋವು, ಆಯಾಸ, ಮನಸ್ಥಿತಿ ಬದಲಾವಣೆ, ಆತಂಕ ಮತ್ತು ಕಿರಿಕಿರಿ ಎಂದು ಹೇಳಲಾಗಿದೆ.

# ಹಸುಗಳ ಕೆಚ್ಚಲು ಕೊಯ್ದ ಜಿಹಾದಿಗಳನ್ನು ಕೂಡಲೇ ಬಂಧಿಸಿ

• ಉದಯವಾಹಿನಿ ಬೆಂಗಳೂರು



☛ ಶ್ರೀ. ಮೋಹನ ಗೌಡ

**ಹಿಂದೂ ಜನಜಾಗೃತಿ ಸಮಿತಿ ಆಗ್ರಹ**

ಗೋವಿಗೆ ಭಾರತದಲ್ಲಿ ಪೂಜನೀಯ ಸ್ಥಾನ ನೀಡಲಾಗಿದೆ. ಸಂಪೂರ್ಣ ಹಿಂದೂ ಸಮಾಜವು ಗೋವನ್ನು ಮಾತೆಯ ರೂಪದಲ್ಲಿ ನಿತ್ಯ ಪೂಜಿಸುತ್ತಾರೆ. ಹೀಗಿರುವಾಗ ಹಿಂದೂ ಸಮಾಜದ ಧಾರ್ಮಿಕ ಭಾವನೆಗೆ ಧಕ್ಕೆ ತರಲೆಂದೇ ಚಾಮರಾಜಪೇಟೆಯಲ್ಲಿ ಜಿಹಾದಿಗಳು ರಾತ್ರೋರಾತ್ರಿ ಮಲಗಿದ್ದ ಹಸುಗಳ ಕೆಚ್ಚಲನ್ನು ಕೊಯ್ಯುವ ಕುಕೃತ್ಯ ಎಸಗಿದ್ದಾರೆ. ಇದೊಂದು ಭಯೋತ್ಪಾದನೆ ಕೃತ್ಯವೇ ಆಗಿದೆ. ಇದನ್ನು ಸಂಪೂರ್ಣ ಹಿಂದೂ ಸಮಾಜ ಖಂಡಿಸುತ್ತದೆ.

ತನ್ನನ್ನು ಸೆಕ್ಯುಲರ್ ಹೇಳಿಕೊಳ್ಳುವ ರಾಜ್ಯ ಕಾಂಗ್ರಸ್ ಆಡಳಿತದಲ್ಲಿ ನಿರಂತರವಾಗಿ ಹಿಂದೂ ಸಮಾಜದ ಮೇಲೆ ಈ ರೀತಿಯ ಆಘಾತಗಳು ನಡೆಯುತ್ತಿವೆ. ಪ್ರಾಣಿಗಳ ಮೇಲೆ ಹಲ್ಲೆಯಾದಾಗ ಕೂಡಲೇ ಬೊಬ್ಬೆ ಹಾಕುವ (ಪ್ರಾಣಿ ದಯಾ ಸಂಘ) ಈ ಘಟನೆಯ ಬಗ್ಗೆ ಮೌನವಹಿಸಿದೆ, ಇದೊಂದು ದುರ್ದೈವದ ಸಂಗತಿಯಾಗಿದೆ. ಹಿಂದೂ ಸಮಾಜವು ಇನ್ನು ಇಂತಹ ದಾಳಿಗಳನ್ನು ನೋಡಿ ಸುಮ್ಮನೆ ಕೂರುವುದಿಲ್ಲ. ರಾಜ್ಯ ಸರಕಾರವು ಕೂಡಲೇ ಜಿಹಾದಿಗಳ ಬಂಧನ ಮಾಡಬೇಕೆಂದು ಹಿಂದೂ ಜನಜಾಗೃತಿ ಸಮಿತಿ ಆಗ್ರಹಿಸುತ್ತದೆ.

# ಸಂಧಿವಾತ ಸಮಸ್ಯೆಗೆ ರೊಬೋಟಿಕ್ ರಿಪ್ಲೇಸ್‌ಮೆಂಟ್ ಸರ್ಜರಿ

• ಉದಯವಾಹಿನಿ ಬೆಂಗಳೂರು

ದೀರ್ಘಕಾಲದ ನೋವಿನಿಂದ ಬಳಲುತ್ತಿದ್ದ ಮಲ್ಲೇಷ್ವಾ, 53 ಸಾಫ್ಟ್‌ವೇರ್ ಬನ್ನೇರುಘಟ್ಟ ಫೋರ್ಟಿಸ್ ಆಸ್ಪತ್ರೆಯ ತಂಡ ಯಶಸ್ವಿಯಾಗಿ ರೋಬೋಟ್ ಸಹಾಯದ ''ಹಿಪ್ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು. ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯ ಮೂಳೆಚಿಕಿತ್ಸಾ ನಿರ್ದೇಶಕ ನಾರಾಯಣ್ ಹುಲ್ಸೆ ಅವರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದ್ದು, ರೋಗಿಯು ನಡೆಯಲು ಈ ಮಾತನಾಡಿದ ನಾರಾಯಣ್ ಮಲ್ಲೇಷ್ವಾ, 53 ಸಾಫ್ಟ್‌ವೇರ್ ಇಂಜಿನಿಯರ್ ರೋಗಿಯು ಅಡ್ಡಪರಿಣಾಮದಿಂದ ಅವಾಸ್ಕುಲರ್ ನೆಕ್ರೋಸಿಸ್‌ಗೆ ಬಳಲುತ್ತಿದ್ದರು. ವಿಶ್ವಾದ್ಯಂತ ಅನೇಕ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದಿದ್ದರೂ ಸಫಲ ಅಲ್ಲದೆ, ಎರಡು ವಿಫಲ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಅವರು ಫೋರ್ಟಿಸ್ ಆಸ್ಪತ್ರೆಗೆ ದಾಖಲಾದರು. ನಮ್ಮ ತಂಡ ಅವರನ್ನು ತಪಾಸಣೆಗೆ ಒಳಪಡಿಸಿದ ಭಾಗದಲ್ಲೂ ಸರಿಪಡಿಸುವ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ನಿರ್ಧರಿಸಲಾಯಿತು.

ಅತ್ಯಾಧುನಿಕ ರೋಬೋಟ್ ಸಹಾಯದಿಂದ ಅವರಿಗೆ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಯಿತು, ರೋಗಿಯು ಶಸ್ತ್ರಚಿಕಿತ್ಸೆಗೆ ನಡೆದಾಡಲು ಸಾಧ್ಯವಾಯಿತು ಎಂದರು.

# ಮಹಾಕುಂಭದಲ್ಲಿ ಸನಾತನದ ಧರ್ಮಶಿಕ್ಷಾ ಪ್ರದರ್ಶನಿಯ ಉದ್ಘಾಟನೆ

## ಸನಾತನ ಧರ್ಮಶಿಕ್ಷಾ ಪ್ರದರ್ಶನಿಯಿಂದ ಅಧ್ಯಾತ್ಮಪ್ರಸಾರ ಮಾಡುವುದು ಮಹತ್ವಪೂರ್ಣ ಹಾಗೂ ದೊಡ್ಡ ಧರ್ಮಕಾರ್ಯವಾಗಿದೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಂಗಳೂರು
• ಶ್ರೀ. ಚೇತನ ರಾಜಹಂಸ,



**ಆದಿವಾಸಿ ಮಕ್ಕಳಿಗೆ ಗುರುಕುಲ ಶಿಕ್ಷಣ**

ಪ್ರಯಾಗರಾಜ - ಸನಾತನ ಧರ್ಮದ ಚಿಕ್ಕ ಚಿಕ್ಕ ಕೃತಿಗಳನ್ನು ಆಚರಣೆಗೆ ತರುವ ದೃಷ್ಟಿಯಿಂದ ಸನಾತನ ಧರ್ಮಶಿಕ್ಷಾ ಪ್ರದರ್ಶನಿ ಉಪಯುಕ್ತವಾಗಿದೆ. ಸನಾತನ ಸಂಸ್ಥೆಯಿಂದ ಆಯೋಜಿತ 'ಸನಾತನ ಧರ್ಮಶಿಕ್ಷಾ ಪ್ರದರ್ಶನಿಯ ಮಾಧ್ಯಮದಿಂದ ನಡೆಯುವ ಅಧ್ಯಾತ್ಮಪ್ರಸಾರವು ಮಹತ್ವಪೂರ್ಣ ಹಗೂ ದೊಡ್ಡ ಧರ್ಮಕಾರ್ಯವಾಗಿದೆ. ಈ ಕಾರ್ಯಕ್ಕೆ ನಮ್ಮ ಆಶೀರ್ವಾದ ನಿರಂತರವಾಗಿದೆ. 6 ವರ್ಷಗಳಿಂದ ಉಜ್ಜೈನಲ್ಲಿನ ಕುಂಭಮೇಳದಲ್ಲಿ ಸನಾತನ ಸಂಸ್ಥೆಯೊಂದಿಗೆ ನಾನು ಜೋಡಿಸಿಕೊಂಡಿದ್ದೇನೆ. ನಾನು ಸನಾತನದ ಸದಸ್ಯನೇ ಆಗಿದ್ದೇನೆ ಎಂದು ಇಂದೂರಿನ ಮಹಾನಿರ್ವಾಣಿ ಅಖಾಡಾದ ಮಹಾ ಮಂಡಲೇಶ್ವರ ಸ್ವಾಮಿ ಪ್ರಣವಾನಂದ ಸರಸ್ವತಿಯವರು ಉದ್ಗಾರ ತೆಗೆದರು. 12 ಜನವರಿಯಂದು ಪ್ರಯಾಗರಾಜದಲ್ಲಿನ ಕುಂಭಮೇಳದಲ್ಲಿನ 'ಸನಾತನ ಧರ್ಮಶಿಕ್ಷಾ ಪ್ರದರ್ಶಿನಿ' ದೀಪ ಪ್ರಜ್ವಲನೆಯೊಂದಿಗೆ ಉದ್ಘಾಟನೆಯಾದ ನಂತರ ಅವರು ಮಾರ್ಗದರ್ಶನ ಮಾಡುತ್ತಿದ್ದರು. ಸ್ವಾಮಿ ಪ್ರಣವಾನಂದ ಸರಸ್ವತಿ ಮಹಾರಾಜರು ಆದಿವಾಸಿ ಕ್ಷೇತ್ರಗಳಲ್ಲಿ ನಡೆಯುವ ಮತಾಂತರಗಳನ್ನು ತಡೆಯುವುದು ಹಾಗೂ ಆದಿವಾಸಿ ಮಕ್ಕಳಿಗೆ ಗುರುಕುಲಗಳಲ್ಲಿ ಶಿಕ್ಷಣ ನೀಡುವ ಕಾರ್ಯ ಮಾಡುತ್ತಾರೆ. ಈ ವೇಳೆ ಪ್ರಮುಖ ಅತಿಥಿಗಳಾಗಿ ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ಮಾರ್ಗದರ್ಶಕರಾದ ಸದ್ಗುರು (ಡಾ.) ಚಾರುದತ್ತ ಪಿಂಗಳೆ, ಮಹಾರಾಷ್ಟ್ರದ ಯಾವತಮಾಳನ ಭಾಜಪದ ಮಾಜಿ ಶಾಸಕರಾದ ಡಾ. ಸಂದೀಪ ಧುರ್ವೆ ಉಪಸ್ಥಿತರಿದ್ದರು. ಈ ವೇಳೆ ಸನಾತನ ಸಂಸ್ಥೆಯ ವಕ್ತಾರರಾದ ಶ್ರೀ. ಚೇತನ ರಾಜಹಂಸ ಇವರು ಪ. ಪೂ. ಮಹಾರಾಜರಿಗೆ ಸಂಪೂರ್ಣ ಪ್ರದರ್ಶಿನಿ ತೋರಿಸಿದರು. ಈ ವೇಳೆ ಸನಾತನದ ವಕ್ತಾರರಾದ ಶ್ರೀ. ಚೇತನ ರಾಜಹಂಸ ಮಾತನಾಡಿ ಕುಂಭಮೇಳಕ್ಕೆ ಬಂದಿರುವ ಮತ್ತು ಬರಲಿರುವ ಭಾವಿಕರು ಧರ್ಮಮಯ ದಿನಚರ್ಯ, ಸನಾತನ ಧರ್ಮದ ಸುಲಭ ಆಚರಣೆ, ಧಾರ್ಮಿಕ ಕೃತಿಗಳ ಶಾಸ್ತ್ರ, ಹಾಗೂ ಆನಂದಿ ಜೀವನಕ್ಕಾಗಿ ಅಧ್ಯಾತ್ಮ ಕಲಿಯಲು ಸನಾತನ ಸಂಸ್ಥೆಯು ಆಯೋಜಿಸಿದ ಸನಾತನ ಧರ್ಮಶಿಕ್ಷಾ ಪ್ರದರ್ಶಿನಿಯ ಲಾಭ ಪಡೆಯಿರಿ ಎಂದು ಕರೆ ನೀಡಿದರು.

## ಪ್ರದರ್ಶಿನಿಯಲ್ಲಿ ಅಧ್ಯಾತ್ಮದ ಕುರಿತ ಗ್ರಂಥಪ್ರದರ್ಶಿನಿ

**ಸನಾತನ ಧರ್ಮಶಿಕ್ಷಾ ಪ್ರದರ್ಶಿನಿಯು ಕುಂಭಮೇಳದ ಸೆಕ್ಟರ್ 19 ರ ಮೋರಿ ಮಾರ್ಗ-ಮುಕ್ತಿ ಮಾರ್ಗ ಚೌಕ್‌ನಲ್ಲಿ ಆಯೋಜಿಸಲಾಗಿದೆ. 12 ಜನವರಿಯಿಂದ 15 ಫೆಬ್ರವರಿ ವರೆಗೆ ಬೆಳಿಗ್ಗೆ 9 ರಿಂದ ರಾತ್ರಿ 9 ರ ತನಕ ಪ್ರದರ್ಶಿನಿ ಎಲ್ಲರಿಗಾಗಿ ತೆರೆದಿರುತ್ತದೆ. ಇಲ್ಲಿ ಅಧ್ಯಾತ್ಮ, ಆಯುರ್ವೇದ ಹಾಗೂ ಧರ್ಮಶಿಕ್ಷಣ ನೀಡುವ ಗ್ರಂಥಗಳು ಹಾಗೂ ಫಲಕಗಳ ಭವ್ಯ ಪ್ರದರ್ಶಿನಿಯನ್ನು ಆಯೋಜಿಸಲಾಗಿದೆ. 13 ಭಾಷೆಗಳಲ್ಲಿ 366 ಕ್ಕೂ ಅಧಿಕ ಗ್ರಂಥಗಳಿದ್ದು ಹಿಂದೂ ಜೀವನಪದ್ಧತಿ, ಸಂಸ್ಕೃತಿ, ಧರ್ಮ, ಅಧ್ಯಾತ್ಮ, ರಾಷ್ಟ್ರಕ್ಕೆ ಸಂಬಂಧಿಸಿದ ಅಮೂಲ್ಯ ಜ್ಞಾನವು ಭಾವಿಕರಿಗೆ ಸಿಗಲಿದೆ.**

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ
13 ಜನವರಿ 2025


# ಧರ್ಮ, ಜಾತಿ ಮೀರಿ ಒಗ್ಗೂಡಿಸುವ ಕಂಬಳ

## ವಿಧಾನ ಸಭಾಧ್ಯಕ್ಷನಾಗಿದ್ದರಿಂದಲೇ ಈ ಕ್ಷೇತ್ರಕ್ಕೆ ರೂ. 1 ಸಾವಿರ ಕೋಟಿಗೂ ಅಧಿಕ ಅನುದಾನ

• ಉದಯವಾಹಿನಿ ಉಳ್ಳಾಲ

ಕ್ರೀಡೆಗೆ ಯಾವುದೇ ಜಾತಿ, ಧರ್ಮವಿಲ್ಲ,ಎಲ್ಲಾ ಜಾತಿ, ಧರ್ಮದವರು ಸೇರಿ ಕಂಬಳವನ್ನು ಆಯೋಜಿಸಿಕೊಂಡು ಬರುತ್ತಿದ್ದಾರೆ. ಈ ಕ್ರೀಡೆಯು ಎಲ್ಲ ಧರ್ಮ, ಜಾತಿ, ಭಾಷೆ, ಸಂಸ್ಕೃತಿಯವರನ್ನು ಒಗ್ಗೂಡಿಸುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನರಿಂಗಾನ ಕಂಬಳ ಸಮಿತಿಯು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ನೇತೃತ್ವದಲ್ಲಿ ನರಿಂಗಾನದಲ್ಲಿ ಆಯೋಜಿಸಿದ್ದ ಲವ ಕುಶ ಜೋಡು ಕರೆ ಕಂಬಳವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.'ಬಹುತ್ವದ ದೇಶ ನಮ್ಮದು. ನಾವೆಲ್ಲರೂ ಪರಸ್ಪರ ಪ್ರೀತಿಸಬೇಕೇ ಹೊರತು ದ್ವೇಷ ಮಾಡಬಾರದು. ಈ ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ' ಎಂದರು.

ಎತ್ತು, ಕೋಣ, ಮೇಕೆಗಳ ಜೊತೆ ರೈತರು ಅವಿನಾಭಾವ ಸಂಬಂಧ ಹೊಂದಿರುತ್ತಾರೆ. ಅವುಗಳನ್ನು ತಮ್ಮ ಮಕ್ಕಳಿಗಿಂತಲೂ ಹೆಚ್ಚಾಗಿ ಮುತುವರ್ಜಿ ವಹಿಸಿ ಸಾಕುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪುರಾತನ ಗ್ರಾಮೀಣ ಕ್ರೀಡೆ ಕಂಬಳ. ಈ ಸಾಂಪ್ರದಾಯಿಕ ಕ್ರೀಡೆಯನ್ನು ತುಳುನಾಡಿನ ಜನ ಉಳಿಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಈ ಕ್ರೀಡೆ ಎಷ್ಟು ಜನಪ್ರಿಯ ಎಂಬುದು ಇಲ್ಲಿ ಸೇರಿದ ಜನಸ್ತೋಮದಿಂದಲೇ ಗೊತ್ತಾಗುತ್ತದೆ. ಈ ಕ್ರೀಡೆಯ ಮೇಲೆ ಸುಪ್ರೀಂ ಕೋರ್ಟ್ ನಿಷೇಧ ಹೇರಿದಾಗ ಅದನ್ನು ತೆರವುಗೊಳಿಸಿದ್ದು ನಮ್ಮ ಸರ್ಕಾರ. 24 ಕಂಬಳಗಳಿಗೆ ಸರ್ಕಾರ ತಲಾ ?5 ಲಕ್ಷ ಅನುದಾನ ನೀಡುತ್ತಿದೆ' ಎಂದರು.ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, 'ಊರಿನ ಸಂಸ್ಕೃತಿ ರಕ್ಷಣೆಯ ಹಾಗೂ ಸರ್ವ ಧರ್ಮ ಪ್ರೀತಿಸುವ ಸಂಕೇತವಾಗಿ ಮುಖ್ಯಮಂತ್ರಿ ಈ ಕಂಬಳಕ್ಕೆ ಆಗಮಿಸಿದ್ದಾರೆ' ಎಂದರು. ವಿಧಾನ ಸಭಾಧ್ಯಕ್ಷನಾಗಿದ್ದರಿಂದಲೇ ಈ ಕ್ಷೇತ್ರಕ್ಕೆ ರೂ. 1 ಸಾವಿರ ಕೋಟಿಗೂ ಅಧಿಕ ಅನುದಾನ ಸಿಕ್ಕಿದೆ. ಕೇವಲ ರಸ್ತೆ ಅಭಿವೃದ್ಧಿಗಾಗಿ ಪ್ರತಿ ಗ್ರಾಮಕ್ಕೆ ?1.5 ಕೋಟಿ ಅನುದಾನ ದೊರೆತಿದೆ' ಎಂದು ಹೇಳಿದರು.ಕಂಬಳ ಕ್ರೀಡೆಗಾಗಿ ಶ್ರಮಿಸಿರುವ ಗುಣಪಾಲ ಕಡಂಬ, ರಾಜೀವ ಶೆಟ್ಟಿ ಯಡೂರು, ಸರಪಾಡಿ ಅಪ್ಪು ಯಾನೆ ಜಾನ್ ಸಿರಿಲ್ ಡಿಸೋಜ, ಚಂದ್ರಹಾಸ ಶೆಟ್ಟಿ ಮೋರ್ಲ, ನರಿಂಗಾನ ಯುವಕ ಮಂಡಲದವರನ್ನು ಮುಖ್ಯಮಂತ್ರಿ ಸನ್ಮಾನಿಸಿದರು. ಕಂಬಳ ಸಮಿತಿ ಕಾರ್ಯಾಧ್ಯಕ್ಷ ಪ್ರಶಾಂತ್ ಕಾಜವ ಮಿತ್ತಕೋಡಿ ಸ್ವಾಗತಿಸಿದರು. ಹುಲಿವೇಷ, ಸಿಡಿಮದ್ದು ಪ್ರದರ್ಶನ, ಕೊಂಬು ಕಹಳ ವಿಶೇಷ ಆಕರ್ಷಣೆಯಾಗಿದ್ದವು. ಮಹಿಳೆಯರು ಆರತಿ ಬೆಳಗಿ ಸಿದ್ದರಾಮಯ್ಯ ಅವರನ್ನು ಬರಮಾಡಿಕೊಂಡರು. ಕಂಬಳ ಸಮಿತಿಯವರು ಮುಖ್ಯಮಂತ್ರಿಗೆ ಬೆಳ್ಳಿ ನೊಗ ಹಾಗೂ ಬೆಳ್ಳಿಯ ಕಟ್ಟು ಹೊಂದಿರುವ ಬಾರುಕೋಲು ನೀಡಿ ಗೌರವಿಸಿದರು.ಅವರನ್ನು ಕರೆದು ಈ ಹುದ್ದೆಯ ಮಹತ್ವವನ್ನು ತಿಳಿಸಿದ್ದ. ಶಿಷ್ಟಾಚಾರ ಪ್ರಕಾರ ಸಭಾಧ್ಯಕ್ಷ ಹುದ್ದೆ ಮುಖ್ಯಮಂತ್ರಿ ಹುದ್ದೆಗಿಂತಲೂ ಮೇಲಿನದು. ವಿಧಾನಸಭೆ ನಡೆಸುವುದು ದೊಡ್ಡ ಅನುಭವ. ಈ ಹುದ್ದೆಯನ್ನು ಖಾದರ್ ಚೆನ್ನಾಗಿ ನಿಭಾಯಿಸುತ್ತಿದ್ದಾರೆ. ಕನ್ನಡವನ್ನು ಚೆನ್ನಾಗಿ ಮಾತನಾಡಲೂ ಕಲಿತಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದರು.


ಉದಯವಾಹಿನಿ ಚಿತ್ರ

**ಸಂತ್ರಸ್ತ ಕುಟುಂಬಕ್ಕೆ ಚೆಕ್ ವಿತರಣೆ**

**ಸ್ಪೀಕರ್ ಹುದ್ದೆಯನ್ನು ಖಾದರ್ ಒಪ್ಪಿರಲಿಲ್ಲ' 'ವಿಧಾನ ಸಭಾಧ್ಯಕ್ಷರಾಗಿದ್ದರಿಂದ ಕ್ಷೇತ್ರದ ಅಭಿವೃದ್ಧಿಗೆ ರೂ. 1 ಸಾವಿರ ಕೋಟಿ ಅನುದಾನ ತರಲು ಸಾಧ್ಯವಾಗಿದೆ ಎಂದು ಯು.ಟಿ.ಖಾದರ್ ಹೇಳಿದ್ದಾರೆ. ಈ ಹುದ್ದೆಗೆ ಅವರೇ ಯೋಗ್ಯರು ಎಂದು ಪಕ್ಷದ ಹೈಕಮಾಂಡ್ ತೀರ್ಮಾನಿಸಿತ್ತು. ಆದರೆ ಹುದ್ದೆಯನ್ನು ವಹಿಸಿಕೊಳ್ಳಲು ಖಾದರ್ ಮೊದಲು ಒಪ್ಪಿರಲಿಲ್ಲ. ಮಾಡುವುದಾದರೆ ಸಚಿವರನ್ನಾಗಿ ಮಾಡಿ. ಇಲ್ಲವಾದರೆ ಯಾವ ಹುದ್ದೆಯೂ ಬೇಡ ಎಂದಿದ್ದರು.**

### ಸಿಲಿಂಡರ್ ಸ್ಫೋಟ

**ಸಂತ್ರಸ್ತ ಕುಟುಂಬಕ್ಕೆ ಚೆಕ್ ವಿತರಣೆ ಮಂಜನಾಡಿ ಗ್ರಾಮದಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟದಿಂದ ಮೂವರು ಮೃತಪಟ್ಟ ಸಂತ್ರಸ್ತ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಟ್ಟು ★ 15 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಒಂದೇ ಕುಟುಂಬದ ಖತೀಜತ್ತುಲ್ ಖುಬ್ರ, ಝುಲೈಕಾ ಮೆಹ ಸಲ್ಮಾ ಮಝಿಯಾ ಮೃತಪಟ್ಟಿದ್ದರು. ನರಿಂಗಾನ ಕಂಬಳ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಾಟೆಕಲ್ ನಾಗರಿಕರು ಸನ್ಮಾನಿಸಿದರು**

# ಶಾಲಾ ಮಕ್ಕಳಿಗೆ ಪರಿಸರದ ಸಮಸ್ಯೆಗಳು ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ



ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಪರಿಕಲ್ಪನೆ ಪ್ರಾರಂಭಿಸಲಾದ ರಾಷ್ಟ್ರೀಯ ಕಾರ್ಯಕ್ರಮ ಶಾಲಾಮಕ್ಕಳಿಗೆ ಪರಿಸರ ಅದರ ಸಮಸ್ಯೆಗಳು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿದೆ ಎಂದು ಐನಾಪೂರ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರುಗಳಾದ ಬಸವರಾಜ ದೊಡ್ಡಮನಿ ಹೇಳಿದರು. ತಾಲ್ಲೂಕಿನ ಐನಾಪೂರ ಸರ್ಕಾರಿ ಪ್ರೌಢಶಾಲೆಯಲ್ಲಿ ಇಕೋ ಕ್ಲಬ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,2001ರಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮದ ಉದ್ದೇಶ ಶಾಲೆಗಳಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸುವುದು,ಒಂದು ಲಕ್ಷಕ್ಕೂ ಹೆಚ್ಚು ಶಾಲೆಗಳಲ್ಲಿ ಕಾರ್ಯಕ್ರಮದಡಿಯಲ್ಲಿ ತೊಡಗಿಕೊಂಡಿವೆ. ದೇಶದಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ಶಾಲೆಗಳು ಶಿಕ್ಷಕರು ಮತ್ತು ಮಾಸ್ಟರ್ ಟ್ರೇನರಗಳಿಗೆ ವಸ್ತುಗಳ ಅಭಿವೃದ್ಧಿ ಮಾಸ್ಟರ್ ಟ್ರೇನರಗಳು ಶಿಕ್ಷಕರಿಗೆ ತರಬೇತಿ ಗಳನ್ನು ನಡೆಸುವುದು ಇಕೋ ಕ್ಲಬ್ ಚಟುವಟಿಕೆ ಸುಗಮಗೊಳಿಸುವಿಕೆ ಮೇಲ್ವಿಚಾರಣೆ ಮೌಲ್ಯ ಮಾಪನಕ್ಕಾಗಿ ರಾಜ್ಯ ನೋಡಲ್ ಏಜೆನ್ಸಿ ತಾಂತ್ರಿಕ ಸಲಹೆ ಒದಗಿಸುವಲ್ಲಿ ಸಿಇಇ ತೊಡಗಿಸಿಕೊಂಡಿದೆ ಎಂದರು. ಶಿಕ್ಷಕ ಹಣಮಂತರಾಯ ಸ್ವಾಗತಿಸಿದರು,ನಾಗರಾಜ ಮಂಟ್ಟಾಳ ನಿರೂಪಿಸಿ ವಂದಿಸಿದರು.

ಶಿಕ್ಷಕಿ ಕಾಂತಾಬಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮ ಪ್ರಯುಕ್ತ ಶಾಲಾಮಕ್ಕಳಿಗೆ ವಿವಿಧ ಸ್ಪರ್ಧೆಗಳು ಏರ್ಪಡಿಸಲಾಗಿತ್ತು ಸ್ಪರ್ಧೆಗಳಲ್ಲಿ ವಿಜೇತರಾದ ಶಾಲಾಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಎಸ್ಡಿಎಂಸಿ ಅಧ್ಯಕ್ಷ ಸಿದ್ದಪ್ಪಾ ಗಾರಂಪಳ್ಳಿ,ಗುರುದೇವ ಚಂದನಕೇರಾ,ವಿಜ್ಞಾನ ಶಿಕ್ಷಕಿ ಅಮೇನಾಬೇಗಂ,ಶಾಲಾಮಕ್ಕಳು ಸಿಬ್ಬಂದಿ ವರ್ಗದವರು ಇದ್ದರು.

# ಪೊಲೀಸರ ಮೇಲೆ ಹಲ್ಲೆಗೆ ಯತ್ನ: ಇಬ್ಬರು ಅರೆಸ್ಟ

• ಉದಯವಾಹಿನಿ ಕಾರವಾರ

ಮುಂಡಗೋಡ ಉದ್ಯಮಿ ಅಪಹರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಲು ಹೋಗಿದ್ದ ವೇಳೆ ಪೊಲೀಸರ ಮೇಲೆಯೇ ಹಲ್ಲೆ ನಡೆಸಲು ಯತ್ನಿಸಿದ ಘಟನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಿದೆ. ಪೊಲೀಸರು ಆರೋಪಿಗಳನ್ನು ಬಂಧಿಸಲು ಹೋಗಿದ್ದ ವೇಳೆ ಆರೋಪಿಗಳು ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ.

ಈ ವೇಳೆ ಪೊಲೀಸರು ಆರೋಪಿಗಳ ಕಾಲಿಗೆ ಗುಂಡು ಹಾರಿಸಿ ಇಬ್ಬರನ್ನು ಬಂಧಿಸಿದ್ದಾರೆ. ಜಮೀರ್ ಅಹ್ಮದ್ ದರ್ಗಾವಾಲೆ ಎಂಬ ಉದ್ಯಮಿಯನ್ನು ಅಪಹರಿಸಿದ ಆರೋಪಿಗಳನ್ನು ಬಂಧಿಸಲು ಹೋಗಿದ ವೇಳೆ ಈ ಘಟನೆ ನಡೆದಿದೆ. ಸದ್ಯ ಆರೋಪಿಗಳಾದ ರಹೀಮ್ ಅಲ್ಲಾವುದ್ದೀನ್ ಹಾಗೂ ಅಜಯ್ ಮಡ್ಡಿ ಬಂಧಿತ ಆರೋಪಿಗಳಾಗಿದ್ದು ಅವರ ಕಾಲಿಗೆ ಗುಂಡೇಟಿನ ಗಾಯಗಳಾಗಿರುವ ಹಿನ್ನೆಲೆಯಲ್ಲಿ ಕಾರವಾರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಗಳ ಬಂಧನ ವೇಳೆ ಮುಂಡಗೋಡ ಠಾಣೆಯ ಸಿಪಿಐ, ಪಿಎಸ್ ಐ ಹಾಗೂ ಓರ್ವ ಕಾನ್ಸ್ ಟೇಬಲ್ ಗಳಿಗೂ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.


ಉದಯವಾಹಿನಿ ಚಿತ್ರ

**ಆರೋಪಿಗಳನ್ನು ಬಂಧಿಸಲು ಹೋದ ಪೊಲೀಸರ ಮೇಲೆ ದಾಳಿಗೆ ಯತ್ನಿಸಲಾಗಿದ್ದು, ಪೊಲೀಸರು ಆರೋಪಿಗಳ ಕಾಲಿಗೆ ಗುಂಡೇಟು ಹೊಡೆದು ಬಂಧಿಸಿದ್ದಾರೆ. ಪ್ರಕರಣ ಸಂಬಂಧ ಈವರೆಗೆ ಒಟ್ಟು ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿದುಬಂದಿದೆ.**

ಉದ್ಯಮಿ ಜಮೀರ್ ರನ್ನು ಅಪಹರಿಸಿದ್ದ ದುಷ್ಕರ್ಮಿಗಳು 35 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ವಿಷಯ ತಿಳಿಯುತ್ತಿದ್ದಂತೆ ಕಾರವಾರ ಉತ್ತರ ಕನ್ನಡ ಜಿಲ್ಲಾ ಎಸ್ ಪಿ ನಾರಾಯಣ್ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚನೆ ಮಡಿದ್ದರು. ಈ ನಡುವೆ ಆರೋಪಿಗಳು ಗದಗ ಬಳಿ ಉದ್ಯಮಿಯನ್ನು ಬಿಟ್ಟು ಎಸ್ಕೇಪ್ ಆಗಿದ್ದರು.

# ಅಂಬೇಡ್ಕರ್ ವಸತಿ ಶಾಲೆಯ ಜಮೀನು ದುರ್ಬಳಕೆ ಆರೋಪ

• ಉದಯವಾಹಿನಿ ಮುಂಡರಗಿ

ತಾಲ್ಲೂಕಿನ ಬೂದಿಹಾಳ ಗ್ರಾಮದ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ಖರೀದಿಸಿದ್ದ ಜಮೀನಿನನ್ನು ಶಾಲೆಯ ಪ್ರಾಚಾರ್ಯರು ರೈತರೊಬ್ಬರಿಗೆ ಗುತ್ತಿಗೆ ನೀಡಿ ಕಟ್ಟಡ ನಿರ್ಮಾಣಕ್ಕೆ ಮೀಸಲಿರುವ ಜಮೀನನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ದಲಿತ ಚಳುವಳಿ ವೇದಿಕೆಯ ಅಧ್ಯಕ್ಷ ಲಕ್ಷ್ಮಣ ತಗಡಿನಮನಿ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಜಮೀನನ್ನು ದುರ್ಬಳಕೆ ಮಾಡಿಕೊಂಡಿರುವ ಪ್ರಾಚಾರ್ಯರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಸ್.ಸಿ., ಎಸ್.ಟಿ. ಕಾಯ್ದೆಯಡಿ ವೇದಿಕೆಯ ವತಿಯಿಂದ ಅವರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ ಎಂದು ಎಚ್ಚರಿಸಿದರು.

ಈ ಕುರಿತು ರೈತರನ್ನು ಪ್ರಶ್ನಿಸಿದರೆ ವಸತಿ ಶಾಲೆಯ ಪ್ರಾಚಾರ್ಯರು ಬಿತ್ತನೆ ಮಾಡಲು ತಿಳಿಸಿದ್ದಾರೆ ಎಂದು ಹೇಳುತ್ತಿದ್ದಾರೆ.


ಉದಯವಾಹಿನಿ ಚಿತ್ರ

ಪ್ರಾಚಾರ್ಯರನ್ನು ಕೇಳಿದರೆ ಸದರಿ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಹೇಳುತ್ತಿದ್ದಾರೆ.

ಸರ್ಕಾರವು ವಸತಿ ಶಾಲೆ ನಿರ್ಮಿಸಲು ಖರೀದಿಸಿರುವ ಜಮೀನಿನಲ್ಲಿ ವಸತಿ ಶಾಲೆಯನ್ನು ನಿರ್ಮಿಸದೆ ಅದನ್ನು ರೈತರೊಬ್ಬರಿಗೆ ನೀಡಿರುವುದು ಎಷ್ಟು ಸರಿ ಎಂದು ಅವರು ಖಾರವಾಗಿ ಪ್ರಶ್ನಿಸಿದರು. ರೈತರಿಂದ ಗುತ್ತಿಗೆ ರೂಪದಲ್ಲಿ ಪಡೆದ ಹಣ ಯಾವುದಕ್ಕೆ ಬಳಸಲಾಗುತ್ತಿದೆ ಜಿಲ್ಲಾಧಿಕಾರಿ ಅವರು ಕೂಡಲೇ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಬೇಕು. ಶಾಸಕರು ಇಂತಹ ಅಧಿಕಾರಿಗಳ ಮೇಲೆ ಕ್ರಮಕ್ಕೆ ಮುಂದಾಗಬೇಕು. ಸರ್ಕಾರ ಆದಷ್ಟು ಬೇಗ ಸದರಿ ಜಮೀನಿನಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.

**ಪ್ರಸ್ತುತ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯು ಪಟ್ಟಣದ ಇಕ್ಕಟ್ಟಾದ ಬಾಡಿಗೆ ಕಟ್ಟಡದಲ್ಲಿದೆ. ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಿಸುವುದಕ್ಕಾಗಿ 2021-22ರಲ್ಲಿ ಸರ್ಕಾರದ ವತಿಯಿಂದ ತಾಲ್ಲೂಕಿನ ಬೂದಿಹಾಳ ಗ್ರಾಮದ ಸಮೀಪದ 13 ಎಕರೆ 3 ಗುಂಟೆ ಜಮೀನು ಖರೀದಿಸಲಾದ. ಸದರಿ ಜಮೀನನ್ನು ಪ್ರಾಚಾರ್ಯರು ಗುತ್ತಿಗೆ ಆಧಾರದ ಮೇಲೆ ರೈತರೊಬ್ಬರಿಗೆ ನೀಡಿದ್ದಾರೆ ಎಂದು ದೂರಿದರು.**

# ಹೈಬ್ರಿಡ್ ಕೃಷಿಯಿಂದ ರೈತರ ಸಾಲ ದ್ವಿಗುಣ: ರಾಮಣ್ಣ ಕೆಂಚಳ್ಳರ

• ಉದಯವಾಹಿನಿ ಹಿರೇಕೆರೂರು

'50 ವರ್ಷಗಳ ಹಿಂದೆ ಕಡಿಮೆ ಖರ್ಚಿನಲ್ಲಿ ಕೃಷಿಕರ ಬದುಕು ಸಾಗುತ್ತಿತ್ತು. ಹೈಬ್ರಿಡ್ ಕೃಷಿ ಆರಂಭವಾದಾಗಿನಿಂದ ಕೃಷಿಯ ಖರ್ಚು ಹೆಚ್ಚಾಗಿ, ರೈತರ ಸಾಲ ದ್ವಿಗುಣವಾಗುತ್ತಿದೆ' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ರಾಮಣ್ಣ ಕೆಂಚಳ್ಳರ ಹೇಳಿದರು.

ಹಾವೇರಿ ಜಿಲ್ಲೆಯ 14ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ 'ಹೊನ್ನ ಬಿತ್ತೇವು ಜಗಕೆಲ್ಲ' ವಿಚಾರ ಗೋಷ್ಠಿಯಲ್ಲಿ ಅವರು, ರೈತರ ಸಮಸ್ಯೆಗಳನ್ನು ತೆರೆದಿಟ್ಟು ಪರಿಹಾರಕ್ಕಾಗಿ ಆಗ್ರಹಿಸಿದರು. 'ಕಳಪೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳಿಂದ ಕೃಷಿಯ ಖರ್ಚು ಹೆಚ್ಚಾಗಿದೆ. ದೇಶದ ರಾಜಕೀಯ ಪಕ್ಷಗಳು, ರೈತರನ್ನು ಕಡೆಗಣಿಸಿವೆ. ಉದ್ದಿಮೆದಾರರ ಸಾಲಗಳನ್ನು ಮನ್ನಾ ಮಾಡುತ್ತಿರುವ ಸರ್ಕಾರಗಳು, ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ. ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ' ಎಂದು ತಿಳಿಸಿದರು.

'ಸಮಾಜದ ಎಲ್ಲಾ ರಂಗಗಳಿಗಿಂತಲೂ ಕೃಷಿರಂಗ, ದೇಶದ ಅಸ್ತಿತ್ವವನ್ನು ನಿರ್ಧಾರ ಮಾಡುವ ರಂಗವಾಗಿದೆ. ಆದರೆ, ಇಂದು ರೈತರು ಬೆಳೆದ ಬೆಳೆಗಳು ಮಳೆಯ ಏರಿಳಿತಕ್ಕೆ ಸಿಲುಕಿ ಹಾನಿಯಾಗುತ್ತಿದೆ. ರೈತರು ಸಾಲದ ಸುಳಿಯಿಂದ ಬದುಕುವ ಆಸೆಯನ್ನೇ ಕಳೆದುಕೊಳ್ಳುವ ಹಂತಕ್ಕೆ ಬರುತ್ತಿದ್ದಾರೆ' ಎಂದು ಹೇಳಿದರು.



ಅಖಿಲ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಹನುಮಂತಪ್ಪ ದೀವಿಗಿಹಳ್ಳಿ ಮಾತನಾಡಿ, 'ಕನ್ನಡ ನಾಡು-ನುಡಿ ಉಳಿವಿಗಾಗಿ ಹೋರಾಟಗಳು ನಡೆಯುತ್ತಿದೆ. ಆದರೆ, ನಾವು ನಮ್ಮತನವನ್ನು ಬಿಟ್ಟು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದೇವೆ. ದೇಶಕ್ಕೆ ಅನ್ನ ನೀಡುವ ರೈತ ಸಹ ಸಂಕಷ್ಟಕ್ಕೆ ಸಿಲುಕಿದ್ದಾನೆ. ರೈತನ ಬದುಕಿನ ದುಸ್ಥಿತಿಗೆ ಪರಿಹಾರ ಕಂಡುಕೊಳ್ಳುವ ಕಾರ್ಯಗಳು ನಡೆಯಬೇಕಿದೆ' ಎಂದರು.

**ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಸಿದ್ದನಗೌಡ ಪಾಟೀಲ, 'ರೈತರು ಹಾಗೂ ರೈತರ ಮಕ್ಕಳಿಗೆ ಕ ಸಿಗುತ್ತಿಲ್ಲ. ಇದರಿಂದಾಗಿ ಜೀವನಪೂರ್ತಿ ಬ್ರಹ್ಮಚಾರಿಯಾಗಿ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದರು. 'ಕೃಷಿಯು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ತಾನು ಬೆಳೆದ ಬೆಳೆಗೆ ದಲ್ಲಾಳಿಗಳು ಬೆಲೆ ನಿಗದಿ ಮಾಡುವ ಪದ್ಧತಿಯಿಂದ ರೈತ ಹೈರಾಣಾಗಿ, ಆತ್ಮಹತ್ಯೆಯಂಥ ಕೆಟ್ಟ ನಿರ್ಧಾರ ತೆಗೆದುಕೊಳ್ಳುತ್ತಿದ್ದಾನೆ' ಎಂದು ಹೇಳಿದರು.**

# ಮಗಳಿಗೆ ಮಿದುಳು ರಕ್ತಸ್ರಾವ: ದಯಾಮರಣ ಕೋರಿದ ತಂದೆ

• ಉದಯವಾಹಿನಿ ಚಿತ್ರದುರ್ಗ

'ವೈದ್ಯರು ಗರ್ಭಿಣಿ ಪತ್ನಿಯನ್ನು ವೈದ್ಯಕೀಯ ಸಂಶೋಧನೆಗೆ ಬಳಸಿಕೊಂಡ ಕಾರಣ ಮಗುವಿಗೆ ಮಿದುಳು ರಕ್ತಸ್ರಾವ (ಬ್ರೇನ್ ಹೆಮರೇಜ್) ಸಮಸ್ಯೆ ಕಾಣಿಸಿಕೊಂಡಿದೆ. ಈ ಕುರಿತು ದೂರು ನೀಡಿದರೂ ಯಾವುದೇ ಕ್ರಮ ಜರುಗಿಸಿಲ್ಲ. ಹೀಗಾಗಿ ಮಗು ಹಾಗೂ ತನಗೆ ದಯಾಮರಣ ನೀಡಬೇಕು' ಎಂದು ಒತ್ತಾಯಿಸಿ ಇಲ್ಲಿನ ನೆಹರೂ ನಗರದ ನಿವಾಸಿ ಎ.ಗೋಪಾಲ್ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.ಈ ಕುರಿತು ಅವರು ವೀಡಿಯೋ ಕೂಡ ಮಾಡಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.'2023ರ ಅ.18ರಂದು ಸಾಮಾನ್ಯ ತಪಾಸಣೆಗಾಗಿ ದಾವಣಗೆರೆಯ ಸರ್ಕಾರಿ ಹೆರಿಗೆ ಆಸ್ಪತ್ರೆಗೆ ತೆರಳಿದ್ದಾಗ ವೈದ್ಯರು ಮೋಸದಿಂದ ಪತ್ನಿಯನ್ನು ಸಂಶೋಧನೆಗೆ ಬಳಸಿಕೊಂಡಿದ್ದಾರೆ. ಯಾವುದೇ ಮಾಹಿತಿ ನೀಡದೇ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ. ಪತ್ನಿಗೆ ವಿವಿಧ ಇಂಜೆಕ್ಷನ್ ನೀಡಿದ್ದ ಕಾರಣ ಅ. 19ರಂದು ಅವಧಿ ಪೂರ್ವವಾಗಿ ಹೆಣ್ಣು ಮಗುವಿಗೆ ಜನ್ಮ ನೀಡಿದರು. ಬಳಿಕ ಆಸ್ಪತ್ರೆಯ ಕಾಗದ-ಪತ್ರ ಪರಿಶೀಲಿಸಿದಾಗ ಪತ್ನಿಯನ್ನು ಸಂಶೋಧನೆಗೆ ಬಳಸಿಕೊಂಡ ವಿಚಾರ ತಿಳಿಯಿತು.. ತಕ್ಷಣವೇ ನಾನು ಆಸ್ಪತ್ರೆ ಅಧೀಕ್ಷಕರಿಗೆ ದೂರು ನೀಡಿದ್ದೇನೆ' ಎಂದು ತಿಳಿಸಿದ್ದಾರೆ.'ಡಿ. 12ರಂದು ಜಿಲ್ಲಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗೂ ದೂರು ಕೊಟ್ಟಿದ್ದೇನೆ. ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಮಗುವಿಗೆ 1.3 ವರ್ಷ ತುಂಬಿದ ನಂತರ ಬೆಳವಣಿಗೆಯಲ್ಲಿ ವ್ಯತ್ಯಾಸ ಕಾಣಿಸಿತು. ಆದ್ದರಿಂದ ಈಚೆಗೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ತೋರಿಸಿದೆವು. ಮಗುವಿಗೆ ಮಿದುಳಿನ ರಕ್ತಸ್ರಾವ ಸಮಸ್ಯೆ ಉಂಟಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. 'ವೈದ್ಯಕೀಯ ಕಾಲೇಜುಗಳಲ್ಲಿ ಗರ್ಭಿಣಿಯ ಅನುಮತಿ ಪಡೆದು ಸಂಶೋಧನೆಗೆ ಬಳಸಿಕೊಳ್ಳುವುದು ವಾಡಿಕೆ. ಗರ್ಭಿಣಿಯರ ಕ್ಲಿನಿಕಲ್ ಟ್ರಯಲ್, ಕೇಸ್ ಸ್ಟಡಿ ಮಾಡಲಾಗುತ್ತದೆ. ಇದರಿಂದ ತೊಂದರೆ ಆಗುವ ಸಾಧ್ಯತೆ ಕಡಿಮೆ. ಸಮಸ್ಯೆಯಾಗಿದ್ದರೆ ಅದರ ಬಗ್ಗೆ ಸಮಗ್ರ ಪರಿಶೀಲನೆಯಾಗಬೇಕು' ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಅಭಿನವ್ ತಿಳಿಸಿದರು. ದಾವಣಗೆರೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಪ್ರತಿಕ್ರಿಯೆಗೆ ಸಿಗಲಿಲ್ಲ.


ಉದಯವಾಹಿನಿ ಚಿತ್ರ

**ನನ್ನ ಮಗಳಿಗೆ ಈ ಸಮಸ್ಯೆ ಉಂಟಾಗಲು ಪತ್ನಿಯನ್ನು ವೈದ್ಯಕೀಯ ಸಂಶೋಧನೆಗೆ ಬಳಸಿಕೊಂಡಿದ್ದೇ ಕಾರಣ' ಎಂದು ಆರೋಪಿಸಿದ್ದಾರೆ. 'ಕಳೆದೊಂದು ವರ್ಷದಿಂದ ನನ್ನ ಹೋರಾಟಕ್ಕೆ ಯಾವುದೇ ಸ್ಪಂದನೆ ಸಿಗದಿರುವ ಕಾರಣ ಮಗಳು ಹಾಗೂ ನನಗೆ ದಯಾಮರಣ ನೀಡಬೇಕು ಎಂದು ಜ. 6ರಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ' ಎಂದು ಎ.ಗೋಪಾಲ್ ತಿಳಿಸಿದ್ದಾರೆ.**

# ಅಬ್ಬಿಕೆರೆಗೆ ಸೇರುವ ಚರಂಡಿ ನೀರು

• ಉದಯವಾಹಿನಿ ಮುಳಗುಂದ

ಪಟ್ಟಣದ ಐತಿಹಾಸಿಕ ಅಬ್ಬಿಕೆರೆ ಸೇರುತ್ತಿರುವ ಊರೊಳಗಿನ ಚರಂಡಿ ನೀರಿಗೆ ಹೊರ ಹೋಗಲು ಪರ್ಯಾಯ ವ್ಯವಸ್ಥೆ ಮಾಡದೆ ಇರುವುದರಿಂದ ಕೆರೆಯ ನೀರು ದುರ್ನಾತ ಬೀರುತ್ತಿದೆ.

ಒಂದು ಕಾಲದಲ್ಲಿ ಗ್ರಾಮದ ಜನರಿಗೆ ಕುಡಿಯುವ ಶುದ್ಧ ನೀರಾಗಿತ್ತು ಎಂದು ಇಲ್ಲಿನ ಹಿರಿಯರು ಹೇಳುತ್ತಾರೆ.

ಆದರೆ ಈಗ ಕೈ ತೊಳಿಯಲು ಸಹ ಯೋಚಿಸುವಷ್ಟು ನೀರು ? ಮಲೀನಗೊಂಡಿದೆ. ಈ ಕೆರೆ ಸರಾಸರಿ 20 ಎಕರೆ ವಿಸ್ತೀರ್ಣ ಹೊಂದಿದೆ. ಕೆರೆಯ ದಕ್ಷಿಣ, ಪಶ್ಚಿಮ ದಿಕ್ಕಿನಲ್ಲಿರುವ ಬಹುಭಾಗ ಮನೆಗಳ ತ್ಯಾಜ್ಯ ನೀರು ಈ ಕೆರೆಗೆ ಬಂದು ಸೇರುತ್ತಿದೆ. ಇದರ ಸುತ್ತಲಿರುವ ಸಾರ್ವಜನಿಕರಿಗೆ ಕೆರೆ ದಡವೆ ಬಯಲು ಬರ್ಹಿದೆಸೆ ತಾಣವಾಗಿರುವುದು ದುರ್ದೈವದ ಸಂಗತಿ. ತಿಪ್ಪೆ, ಇನ್ನಿತರ ಕಸವನ್ನು ತಂದು ದಡದಲ್ಲಿ ಸುರಿಯಲಾಗುತ್ತಿದೆ. ಇನ್ನೊಂದು ಕಡೆ ಸುಲಭ ಶೌಚಾಲಯದ ನೀರು ಪೈಪ್ ಒಡೆದು ಕೆರೆಗೆ ಸೇರುತ್ತಿದೆ.

ಸ್ವಚ್ಛತೆ ಕುರಿತು ಪಪಂ ಮೂಡಿಸುತ್ತಿಲ್ಲ ಜಾಗೃತಿ ಎಂದು ಸಾರ್ವಜನಿಕರು ಅಸಮಾದಾನ ವ್ಯಕ್ತಪಡಿಸಿದ್ದಾರೆ. ಕೆರೆಯ ಮದ್ಯ ಪ್ರಾಕೃತಿಕವಾದ ನಡುಗಡ್ಡೆಯಿದ್ದು ಪುರಾತನ ಹುಣಸೆ ಮರ, ಸಣ್ಣ ಪುಟ್ಟ ಗಿಡಗಂಟೆಗಳು ಬೆಳೆದು ವಿವಿಧ ಜಾತಿಯ ಪಕ್ಷಿಗಳ ನೆಲೆಸುವ ನೆಚ್ಚಿನ ತಾಣವಾಗಿದೆ. ಈಚೆಗೆ ಅಪರೂಪದ ವಿದೇಶಿ ಪಕ್ಷಿಗಳು ಸಹ ಇಲ್ಲಿ ಕಾಣುತ್ತಿರುವುದ ಜನರನ್ನು ಬೆರಗುಗೊಳಿಸಿವೆ. 2013 ರಲ್ಲಿ ಸ್ಥಳಿಯ ಪಂಚಾಯ್ತಿ ವತಿಯಿಂದ ಕೆರೆ ಅಭಿವೃದ್ಧಿ ಮಾಡುವ ಯೋಜನೆ ಕೈಗೊಂಡಿತ್ತಾದರೂ ಸಂಪೂರ್ಣ ಕಾಮಗಾರಿ ನಡೆದಿರಲಿಲ್ಲ.

ಈಗ ಅಂದಾಜು ? 2.75 ಕೋಟಿ ವೆಚ್ಚದಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದು ಸಂತಸ ಮೂಡಿಸಿದೆ. ಆದರೆ ಮನೆಗಳ ತ್ಯಾಜ್ಯ ನೀರು ಕೆರೆಗೆ ಸೇರುವುದನ್ನ ತಪ್ಪಿಸಲು ಯೋಜನೆ ರೂಪಿಸಲಾಗಿಲ್ಲ. ಈ ಹಿಂದೆ ಹೊಲಗಳ ಮಳೆ ನೀರು ಹರಿದು ಬರುವ ಕಾಲುವೆ ನಿರ್ಮಾಣ ಮಾಡಲಾಗಿತ್ತು.

# ಡಿ.ಕೆ.ಶಿವಕುಮಾರ್‌ಗೆ ಹೊಸ ಹೆಸರು ಕೊಟ್ಟ ಸಿ.ಟಿ.ರವಿ

## ಸಿ. ಟಿ. ರವಿ ತಮ್ಮ ಪೋಸ್ಟ್ ಅನ್ನು 'ಮಾನ್ಯ ಡಿ (ಡ್ರಾಮ) ಕೆ (ಕಿಂಗ್) ಶಿವಕುಮಾರ್ ಅವರೆ, ಎಂದು ಪ್ರಾರಂಭ

• ಉದಯವಾಹಿನಿ ಚಿಕ್ಕಮಗಳೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಎಂಎಲ್‌ಸಿ ಹಾಗೂ ಮಾಜಿ ಸಚಿವ ಸಿ. ಟಿ. ರವಿ ಅವಹೇಳನಕಾರಿ ಹೇಳಿಕೆ ನೀಡಿರುವ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರ ಮಾಡಲಾಗಿದೆ. ಈ ಪ್ರಕರಣದ ಬಗ್ಗೆ ಇನ್ನೂ ಸಹ ರಾಜ್ಯ ರಾಜಕೀಯದಲ್ಲಿ ಚರ್ಚೆಗಳು ನಡೆಯುತ್ತಿವೆ. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನದ ಕೊನೆಯ ದಿನ ಸುವರ್ಣಸೌಧದಲ್ಲಿ ನಡೆದ ಘಟನೆ ಮುಂದಿಟ್ಟುಕೊಂಡು ಮಾಜಿ ಸಚಿವ, ಬಿಜೆಪಿ ನಾಯಕ ಸಿ. ಟಿ. ರವಿ ಭಾನುವಾರ ಪೋಸ್ಟ್ ಒಂದನ್ನು ಹಾಕಿದ್ದಾರೆ. ಉಪ ಮುಖ್ಯಮಂತ್ರಿ ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ವಿರುದ್ಧ ಟೀಕೆಗಳನ್ನು ಮಾಡಿದ್ದಾರೆ.

ಡಿ.ಕೆ. ಶಿವಕುಮಾರ್ ಹೆಸರು: ಸಿ. ಟಿ. ರವಿ ತಮ್ಮ ಪೋಸ್ಟ್ ಅನ್ನು 'ಮಾನ್ಯ ಡಿ (ಡ್ರಾಮ) ಕೆ (ಕಿಂಗ್) ಶಿವಕುಮಾರ್ ಅವರೆ,' ಎಂದು ಪ್ರಾರಂಭಮಾಡಿದ್ದಾರೆ. 'ನೀವು ಉಪಮುಖ್ಯಮಂತ್ರಿಗಳು ಎನ್ನುವುದನ್ನು ಮರೆತು ಬಿಟ್ಟಿದ್ದೀರಿ. ನೀವು ನ್ಯಾಯಾಧೀಶರ ಸ್ಥಾನದಲ್ಲಿ ಇದ್ದು, ಸತ್ಯಾಸತ್ಯತೆಯನ್ನು ವಿಚಾರ ಮಾಡಬೇಕಾದವರು ದುರದೃಷ್ಟವಾಶಾತ್ ಯಾರದೊ ವಕೀಲರಾಗಿಬಿಟ್ಟಿದ್ದೀರಿ. ಯಾರು ಮೋಹ ಮದ ಮಾತ್ಸರ್ಯಗಳಿಂದ ಹೊರಗಿದ್ದು ನೋಡುತ್ತಾರೋ ಅವರಿಗೆ ಸತ್ಯಾಸತ್ಯಾತೆ ಗೊತ್ತಾಗುತ್ತದೆ. ಮೋಹಪರವಶರಾದವರಿಗೆ, ಅಧಿಕಾರದ ಮದದಿಂದ ಕೂಡಿದವರಿಗೆ, ಮಾತ್ಸರ್ಯದ ರಾಜಕಾರಣ ಮಾಡುವವರಿಗೆ ಸತ್ಯ ಅರ್ಥ ಆಗಲಿಕ್ಕೆ ಸಾಧ್ಯವಿಲ್ಲ' ಎಂದು ಸಿ. ಟಿ. ರವಿ ಹೇಳಿದ್ದಾರೆ.

ಸಭಾಪತಿಗಳ ರೂಲಿಂಗ್ ನೀಡಿದ ನಂತರ ನೀವುಗಳು, ನಿಮ್ಮ ಪಕ್ಷದ ಶಾಸಕರು ನಡೆದುಕೊಂಡ ರೀತಿ ನಿಮಗುಚಿತವೇ? ಗೂಂಡಾಗಳನ್ನೂ, ಜೊತೆಗಾರರನ್ನು ಎತ್ತಿಕಟ್ಟಿ, ಶಾಸಕಾಂಗದ ದೇಗುಲವಾದ ಸುವರ್ಣ ಸೌಧದಲ್ಲಿ ನನ್ನ ಮೇಲೆ ನಡೆದ ಹಲ್ಲೆಯನ್ನು ಯಾವ ದೃಷ್ಟಿಯಿಂದ ನೋಡುತ್ತೀರಿ ಇದನ್ನು ಗಾಂಧಿಗಿರಿ ಎನ್ನಬೇಕೇ ಅಥವಾ ಗೂಂಡಾಗಿರಿ ಎನ್ನಬೇಕೇ?' ಎಂದು ಸಿ. ಟಿ. ರವಿ ಪ್ರಶ್ನೆ ಮಾಡಿದ್ದಾರೆ.

'ನಿಮ್ಮ ಸರ್ಕಾರದ ಪೊಲೀಸರು ಮಾಡಿದ ಅಸಂವಿಧಾನಿಕ, ಅನೈತಿಕ ಬಂಧನವನ್ನು ಏನೆಂದು ಭಾವಿಸುತ್ತೀರಿ ಪೊಲೀಸರು ರಾತ್ರಿ ಇಡೀ ನಡೆಸಿದ ದೌರ್ಜನ್ಯದ ಹಿಂದೆ ಯಾರ ಕುಮ್ಮಕ್ಕಿದೆ. ಯಾರ ಕಾಣದ ಕೈಗಳ ಪಾತ್ರವಿದೆ ಇದನ್ನು ಮೋಹ ಮದ ಮಾತ್ಸರ್ಯಗಳಿಂದ ಹೊರಗಿದ್ದು ನೋಡಿ, ಸತ್ಯದರಿವು ನಿಮಗಾಗುತ್ತದೆ. ಕಪಟ ನಾಟಕ ಯಾರು ಮಾಡುತ್ತಿದ್ದಾರೆ ಎನ್ನುವುದೂ ಗೊತ್ತಾಗುತ್ತದೆ' ಎಂದು ಸಲಹೆ ನೀಡಿದ್ದಾರೆ.



**ಸಾರ್ವಜನಿಕ ಬದುಕಿನಲ್ಲಿ ಸಿಟಿ ರವಿಯನ್ನು ಹೋರಾಟಗಾರ ಎಂದು ಗುರುತಿಸಿದ್ದಾರೆ, ರವಿಯನ್ನು ಕೆಲಸಗಾರ ಎಂದು ಗುರುತಿಸಿದ್ದಾರೆ, ರವಿಯನ್ನ ಪಕ್ಷನಿಷ್ಠ, ಸಿದ್ಧಾಂತ ಬದ್ಧ ಎಂದು ಗುರುತಿಸುತ್ತಾರೆ ಎಂಬುದು ನನ್ನ ಕರ್ನಾಟಕದ ಜನತೆ ತಿಳಿದಿದೆ' ಎಂದು ಹೇಳಿದ್ದಾರೆ.**

**'ಯದ್ಭಾವಂ ತದ್ಭವತಿ ಎಂಬ ಮಾತಿನಂತೆ ಯಾರು ಹೇಗಿದ್ದಾರೋ ಇತರರೂ ಹಾಗೆ ಎಂದು ಭಾವಿಸುತ್ತಾರೆ ಸನ್ಮಾನ್ಯ ಉಪಮುಖ್ಯಮಂತ್ರಿ' ಯವರೆ. ಅಂದಹಾಗೆ ಕಾಂಗ್ರೆಸ್ಸಿನ ಕೆಲ ನಾಯಕರು ನಮ್ಮ ಡ್ರಾಮ(ಆ) ಕಿಂಗ್ (ಏ) ಶಿವಕುಮಾರ್ ಅವರು ಇಷ್ಟೆಲ್ಲಾ ಡ್ರಾಮಾ ಮಾಡುತ್ತಿರುವುದು ಮುಖ್ಯಮಂತ್ರಿ ಗಾದಿಯನ್ನು ಏರುವ ಹಪಹಪಿಗಾಗಿ ಎಂದು ರಾಜಕೀಯದ ಮೊಗಸಾಲೆಗಳಲ್ಲಿ ಹೇಳಿಕೊಂಡು ಸುತ್ತುತ್ತಿರುವುದು ನಿಜವೇ' ಎಂದು ಸಿ. ಟಿ. ರವಿ ಪ್ರಶ್ನೆ ಮಾಡಿದ್ದಾರೆ.**

# ಮಿನಿ ನ್ಯೂಸ್

## ಪ್ರವಾಸಿ ಮಂದಿರ ಸುತ್ತಮುತ್ತ ಗಿಡಗಂಟೆ ಬೆಳೆದು ಕಾದಿಟ್ಟ ಅರಣ್ಯವಾಗಿದೆ

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ಹೊರವಲಯದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಒಳಪಡುವ ಪ್ರವಾಸಿ ಮಂದಿರವಿದ್ದು ಜನಪ್ರತಿನಿಧಿಗಳು,ತಾಲ್ಲೂಕಾ ಮಟ್ಟದ ಉನ್ನತ ಅಧಿಕಾರಿಗಳು,ಸಂಘ ಸಂಸ್ಥೆಗಳು,ವಿವಿಧ ಸಭೆಗಳು ನಡೆಸಲು ಮತ್ತು ತುರ್ತು ಸಂದರ್ಭದಲ್ಲಿ ತಂಗಲು ಪ್ರವಾಸಿ ಮಂದಿರ ನಿರ್ಮಿಸಿದ್ದು ಆದರೆ ಪ್ರವಾಸಿ ಮಂದಿರದ ಸುತ್ತಮುತ್ತಲಿನ ಪ್ರದೇಶ ಸಂಪೂರ್ಣವಾಗಿ ಗಿಡಗಂಟ್ಟೆಗಳು ಬೆಳೆದು ಕಾದಿಟ್ಟ ಅರಣ್ಯ ಪ್ರದೇಶವಾಗಿದೆ,ಅಲ್ಲಿಗೆ ಹೋಗಲು ಸಂಘ ಸಂಸ್ಥೆಯ ಪ್ರತಿನಿಧಿಗಳಿಗೆ ಸಾರ್ವಜನಿಕರು ಭಯದಲ್ಲಿ ಹೋಗಿ ಬರುತ್ತಾರೆ ಹಾವುಚೇಳು ಹುಳುಹೊತ್ತು ಭಯವಾಗುತ್ತದೆ,ಇದಕ್ಕೆ ಯಾವುದೇ ನಿರ್ವಹಣೆ ಮಾಡದೆ ಅಧಿಕಾರಿಗಳು ಮಾತ್ರ ಮೌನಕ್ಕೆ ಜಾರಿದ್ದಾರೆ ಎಂದು ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿ ಶೀಘ್ರದಲ್ಲೇ ಸ್ವಚ್ಚತೆಗೊಳಿಸಿ ಅನುಕೂಲ ಕಲ್ಪಿಸಿಕೊಡಬೇಕು ಎಂದು ಸಮಾಜ ಚಿಂತಕ ಮಾರುತಿ ಗಂಜಗಿರಿ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

## ಶರಣಾಗತಿಗೆ ನಿರಾಕರಿಸಿದ್ದನೇ ವಿಕ್ರಂ ಗೌಡ?: ಹರಿದಾಡುತ್ತಿರುವ ಆಡಿಯೋ

• ಉದಯವಾಹಿನಿ ಉಡುಪಿ

ಎನ್‌ಕೌಂಟರ್‌ಲ್ಲಿ ಹತ್ಯೆಯಾಗಿರುವ ನಕ್ಸಲ್ ನಾಯಕ ವಿಕ್ರಂ ಗೌಡನದ್ದೆಂದು ಹೇಳಲಾದ ಆಡಿಯೋವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಕಳೆದ ನವೆಂಬರ್ 19ರಂದು ಹೆಬ್ರಿಯ ಪೀತುಬೈಲ್‌ನಲ್ಲಿ ನಡೆದ ಎನ್ ಕೌಂಟರ್‌ನಲ್ಲಿ ವಿಕ್ರಂ ಗೌಡನ ಹತ್ಯೆಯಾಗಿದ್ದು, ಈ ಆಡಿಯೋ ಅದಕ್ಕೂ ಕೆಲ ತಿಂಗಳ ಹಿಂದಿನದ್ದು ಎನ್ನ ಲಾಗುತ್ತಿದೆ. 'ನಾವು ಯಾವುದೇ ರಾಜಿಗೆ ಹೋಗಲ್ಲ. ಹೋಗ್ತಿವಿ ಅಂದ್ರೆ ದ್ರೋಹ ಮಾಡ್ತೀವಿ ಅಂತ ಅರ್ಥ. ನಮ್ಮನ್ನು ಮಾತುಕತೆಗೆ ಬನ್ನಿ ಅಂತಾ ಯಾಕೆ ಕರೀತಿದ್ದಾರೆ. ಲಕ್ಷಗಟ್ಟಲೆ, ಕೋಟಿಗಟ್ಟಲೆ ಕೊಡ್ತೀವಿ ಅಂತ ಹೇಳಿದ್ದಾರೆ. ಆದ್ರೆ ನಾವು ಒಪ್ಪುವುದಿಲ್ಲ' ಎಂಬ ಮಾತು ಆಡಿಯೋದಲ್ಲಿದೆ. 'ಆಡಿಯೋದ ಅಧಿಕೃತತೆಯ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ'ಎಂದು ನಕ್ಸಲ್ ನಿಗ್ರಹ ಪಡೆಯ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ದಯಾಮ್ ತಿಳಿಸಿದರು.

## ಕೃಷ್ಣಮೂರ್ತಿಯವರಿಗೆ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಅವರಿಂದ ಬೆಳ್ಳಿ ಪದಕ


ಉದಯವಾಹಿನಿ ಚಿತ್ರ

• ಉದಯವಾಹಿನಿ ಅರಸೀಕೆರೆ

ತಾಲ್ಲೂಕಿನ ನೌಕರರ ಸಂಘದ ಮಾಜಿ ಅಧ್ಯಕ್ಷರು. ಅರಸೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ. ಸೇವೆ ಸಲ್ಲಿಸುತ್ತಿರುವ. ಎಂ ಆರ್ ಕೃಷ್ಣಮೂರ್ತಿಯವರಿಗೆ. ಕರ್ನಾಟಕ ಸರ್ಕಾರದ ಸಾರಿಗೆ ಸಚಿವರಾದ. ರಾಮಲಿಂಗ ರೆಡ್ಡಿಯವರು. ಸಾರಥಿ ನಂಬರ್ ಒನ್. ಬೆಳ್ಳಿ ಪದಕ ಪ್ರಶಸ್ತಿ ನೀಡಿ. ಗೌರವಿಸಿದರು. ಇತ್ತೀಚಿಗೆ ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಆಡಿಟೋರಿಯಂ ಹಾಲ್ ನಲ್ಲಿ ನಡೆದ ಇಂಡಿಯನ್ ವೆಹಿಕಲ್ ಡ್ರೈವರ್ ಟ್ರೇಡ್ ಯೂನಿಯನ್ ಮತ್ತು ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ನಿಂದ ಅಪಘಾತ ರಹಿತ ಚಾಲನೆ ಮಾಡಿ ಅನನ್ಯ ಸೇವೆ ಸಲ್ಲಿಸಿದ ಚಾಲಕರಲ್ಲಿ ಎಂಆರ್ ಕೃಷ್ಣಮೂರ್ತಿ ರವರನ್ನು ಸಾರಥಿ ನಂಬರ್ ಒನ್ ಬೆಳ್ಳಿ ಪದಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕರ್ನಾಟಕ ಸರ್ಕಾರದ ಸಾರಿಗೆ ಸಚಿವರಾದ ರಾಮಲಿಂಗ ರೆಡ್ಡಿ ಅವರು ಪ್ರಶಸ್ತಿ ಪ್ರಧಾನ ಮಾಡಿದರು. ಸಮಾರಂಭದಲ್ಲಿ ನಟ ನಿರ್ಮಾಪಕ ಸಂಗೀತ ನಿರ್ದೇಶಕ ವಿ ಮನೋಹರ್ ಗಂಡಸಿ ಸದಾನಂದ ಸ್ವಾಮಿ ಮತ್ತು ಫಿಕ್ಸ್ ಮಾರ್ಕ್ಸ್ ಸಂಸ್ಥೆಯ ಮುಖ್ಯಸ್ಥ ದಯಾನಂದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು ಫಿಟ್ನೆಸ್ ವಾಕಿಂಗ್ ಬ್ಯಾಚ್ ಅಧ್ಯಕ್ಷರಾದ ಶ್ರೀನಿವಾಸ್. ಆಹಾರ ಇಲಾಖೆ ಅಧಿಕಾರಿಗಳಾದ ಬಾಲಚಂದ್ರು ಸ್ನೇಹಿತರು ಹಲವಾರು ಸಂಘ ಸಂಸ್ಥೆಯ ಮುಖಂಡರುಗಳು ಕೃಷ್ಣಮೂರ್ತಿಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ

## ರಾಷ್ಟ್ರದ ಹಿತ ಚಿಂತನೆಗೆ ಸಾಹಿತ್ಯ ಉತ್ಸವ ಪ್ರೇರಣೆಯಾಗಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ಮಂಗಳೂರು

ಭಾರತ್ ಫೌಂಡೇಷನ್ ಆಶ್ರಯದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಮಂಗಳೂರು ಸಾಹಿತ್ಯ ಉತ್ಸವದ ಏಳನೇ ಆವೃತ್ತಿಯನ್ನು ಸಾಹಿತಿ ಎಸ್.ಎಲ್.ಭೈರಪ್ಪ ಇಲ್ಲಿ ಶನಿವಾರ ಉದ್ಘಾಟಿಸಿದರು. 'ಹೊಸ ತಿಳಿವುಗಳನ್ನು ನೀಡುವ ಈ ಉತ್ಸವ ಯುವ ಮನಸುಗಳನ್ನು ರಾಷ್ಟ್ರದ ಹಿತ ಚಿಂತನೆಗೆ ಒರೆ ಹಚ್ಚಲು ಈ ಉತ್ಸವ ಪರೇಣೆಯಾಗಲಿ' ಎಂದು ಅವರು ಹಾರೈಸಿದರು.

ಮಂಗಳೂರು ಸಾಹಿತ್ಯ ಉತ್ಸವದಲ್ಲಿ 2017ರಲ್ಲಿ ಭಾಗವಹಿಸಿದ್ದ. ಮಂಗಳೂರಿನವರು ಏನನ್ನು ಮಾಡಿದರೂ ಅಚ್ಚುಕಟ್ಟು ಹಾಗೂ ದೂರದೃಷ್ಟಿ ಇದ್ದೇ ಇರುತ್ತದೆ. ಹೋಟೆಲ್ ಉದ್ಯಮದಲ್ಲಿ, ಶೈಕ್ಷಣಿಕ ಸಂಸ್ಥೆ ಕಟ್ಟಿ ಬೆಳೆಸುವುದರಲ್ಲಿ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಇಲ್ಲಿನವರು ದೇಶಕ್ಕೆ ಮಾದರಿ, ನಾಡಿಗೆ ಅನೇಕ ವೈದ್ಯರು, ಶಿಕ್ಷಕರ ಜೊತೆ ಶಿವರಾಮ ಕಾರಂತ, ಪಂಜೆ ಮಂಗೇಶರಾಯರು, ಗೋವಿಂದ ಪೈ, ವ್ಯಾಸರಾಯ ಬಲ್ಲಾಳ, ಸೇಡಿಯಾಪು ಕೃಷ್ಣ ಭಟ್, ಯಶವಂತ ಚಿತ್ತಾಲರಂತಹ ಖ್ಯಾತ ಸಾಹಿತಿಗಳನ್ನೂ ನಾಡಿಗೆ ನೀಡಿದ ನೆಲವಿದು. ಶಿವರಾಮ ಕಾರಂತರಂತೂ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನೇ ಹಿಂತಿರುಗಿಸಿದ್ದನ್ನು ಮರೆಯಲಾದೀತೇ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದ ಕಾರಂತರು ರಾಷ್ಟ್ರದ ಹಿತ ಮತ್ತು ಐಕ್ಯತೆಗೆ ಪ್ರಾಧಾನ್ಯತೆ ನೀಡಿದ್ದರು' ಎಂದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಇಂದು ನೀವು ಹೆಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಕೂಡ ಮಕ್ಕಳ ಸಂಗದಲ್ಲಿ ನಿಮ್ಮ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು. ಆಕಾಶ ಪ್ರಕಾಶಮಾನವಾಗಿ ಕಾಣುತ್ತದೆ.

**ವೃಷಭ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು.

**ಮಿಥುನ** ಕಿಕ್ಕಿರಿದ ಬಸ್‌ನಲ್ಲಿ ಪ್ರಯಾಣಿಸುವಾಗ ರಕ್ತದೊತ್ತಡವಿರುವ ರೋಗಿಗಳು ಅವರ ಆರೋಗ್ಯದ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಕರ್ಕಾಟಕ** ಮಕ್ಕಳ ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಮಂಕು ಕವಿದ ಮತ್ತು ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಃಶ್ಚೇತನಗೊಳಿಸುತ್ತದೆ.

**ಸಿಂಹ** ಇವತ್ತು ನಿಮಗೆ ಹೇಗೆನಿಸುತ್ತಿದೆಯೆಂದು ಇತರರಿಗೆ ತಿಳಿಸುವ ಉತ್ಸಾಹವನ್ನು ನಿಯಂತ್ರಿಸಿ. ನಿಮ್ಮ ವೈವಾಹಿಕ ಸಂತೋಷಗಳಿಗೆ ನೀವು ಒಂದು ಅದ್ಭುತವಾದ ಅಚ್ಚರಿಯನ್ನು ಪಡೆಯುತ್ತೀರಿ.

**ಕನ್ಯಾ** ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ನಿಮಗೆ ಕೆಟ್ಟ ಹವ್ಯಾಸಗಳ ಪ್ರಭಾವ ಬೀರಬಹುದಾದ ಕೆಟ್ಟ ಜನರಿಂದ ದೂರವಿರಿ.

**ತುಲಾ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು.

**ವೃಶ್ಚಿಕ** ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು.

**ಧನಸ್ಸು** ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ.

**ಮಕರ** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ.

**ಕುಂಭ** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು – ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

**ಮೀನ** ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ. ಪ್ರೀತಿಪಾತ್ರರೊಡನೆ ಸಹಿತಿಂಡಿ ಮತ್ತು ಮಿಠಾಯಿ ಹಂಚಿಕೊಳ್ಳುವ ಸಾಧ್ಯತೆಯಿದೆ. ಬಾಸ್‌ನ ಒಳ್ಳೆಯ ಮೂಡ್ ಇಡೀ ಕೆಲಸದ ಪರಿಸರವನ್ನು ಒಳ್ಳೆಯದಾಗಿಸಬಹುದು.


ಉದಯವಾಹಿನಿ ಚಿತ್ರ

ಚಿಂಚೋಳಿ: ಪಟ್ಟಣದ ಪೋಲಿಸ್ ಠಾಣೆಯ ಪಿಎಸ್‌ಐ ಗಂಗಮ್ಮ ಜಿನಿಕೇರಿ ಅವರು ಉದಯವಾಹಿನಿ ಕನ್ನಡ ದಿನಪತ್ರಿಕೆ ಹೊರತಂದಿರುವ 2025ರ ನೂತನ ದಿನದರ್ಶಿಕೆ (ಕ್ಯಾಲೆಂಡರ್) ಅನ್ನು ಬಿಡುಗಡೆಗೊಳಿಸಿದರು.


ಉದಯವಾಹಿನಿ ಚಿತ್ರ

ವಡಗೇರಾ ಪಟ್ಟಣದ ಪುಟ್ಟ ಬಾಲಕಿ ಇಬ್ಬನಿ. ಎಸ್ ಇಟಗಿ ಸ್ವಾಮಿ ವಿವೇಕಾನಂದರ ಜಯಂತೋತ್ಸವ ನಿಮಿತ್ಯ ಸ್ವಾಮಿ ವಿವೇಕಾನಂದರ ವೇಷದಲ್ಲಿ ಕಂಡು ಬಂದ ಮನಮೋಹಕ ದೃಶ್ಯವಿದು

# ಚಕ್ಕುಬಂದಿಯಲ್ಲಿನ ವ್ಯತ್ಯಾಸ: ಇ-ಸ್ವತ್ತು ದಾಖಲಿಸಲು ಸಮಸ್ಯೆ

## ಗ್ರಾಮಠಾಣಾ ಹೊರಭಾಗದ ಪ್ರದೇಶ ಹಕ್ಕು ಪತ್ರದಲ್ಲಿನ ಚಕ್ಕುಬಂದಿ ವ್ಯತ್ಯಾಸ ತಿದ್ದುಪಡಿ ಮಾಡುವ ಅಧಿಕಾರವಿಲ್ಲ

• **ಉದಯವಾಹಿನಿ, ನರಸಿಂಹರಾಜಪುರ**

ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರ ಹಲವು ಮನೆಗಳ ಚಕ್ಕುಬಂದಿಯಲ್ಲಿ ವ್ಯತ್ಯಾಸ ಕಂಡು ಬಂದಿರುವುದರಿಂದ ಇ-ಸ್ವತ್ತು ದಾಖಲಿಸಿಕೊಳ್ಳಲು ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ ನಿವೇಶನ ಅಥವಾ ಕಟ್ಟಡದ ಇ-ಸ್ವತ್ತು ದಾಖಲಿಸಲು ಮನೆಯ ಹಕ್ಕು ಪತ್ರ, ಸರ್ವೆ ನಕಾಶೆ, ವಿತರಣಾವಹಿ, ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ, ಮನೆಯ ಫಟ, ಕಂದಾಯ ಪಾವತಿ ರಶೀದಿ, ಋಣಭಾರ ರಹಿತ ಪ್ರಮಾಣ ಪತ್ರ (ಇಸಿ) ಕೊಡಬೇಕಾಗುತ್ತದೆ.

ಎಲ್ಲಾ ದಾಖಲೆಗಳನ್ನು ನೀಡಿದ ನಂತರವೂ ಕೆಲ ಹಕ್ಕು ಪತ್ರಗಳಲ್ಲಿನ ಚಕ್ಕುಬಂದಿ ಸರಿಯಿಲ್ಲದ ಕಾರಣ ಇ-ಸ್ವತ್ತು ದಾಖಲಿಸಲು ಸಾಧ್ಯವಾಗುತ್ತಿಲ್ಲ. ಇಂಥ ಪ್ರಕರಣಗಳು ತಾಲ್ಲೂಕು ವ್ಯಾಪ್ತಿಯ 14 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 300ರಿಂದ 400 ಮನೆಗಳ ಚಕ್ಕುಬಂದಿಯಲ್ಲಿರುವ ವ್ಯತ್ಯಾಸದಿಂದ ಇ-ಸ್ವತ್ತು ಪಡೆದುಕೊಳ್ಳಲು ಸಾಧ್ಯವಾಗಿಲ್ಲ.

ಸಾಮಾನ್ಯವಾಗಿ ಮನೆಗಳಿಗೆ ಹಕ್ಕುಪತ್ರ ನೀಡುವ ಅಧಿಕಾರ ಕಂದಾಯ ಇಲಾಖೆಗೆ ಇದೆ. ಇ-ಸ್ವತ್ತು ಇಲ್ಲದೆ ಯಾವ ಬ್ಯಾಂಕ್‌ಗಳೂ ಮನೆ ನಿರ್ಮಾಣಕ್ಕೆ ಸಾಲ ನೀಡುವುದಿಲ್ಲ. ಚಕ್ಕು ಬಂಧಿಯಲ್ಲಿರುವ ವ್ಯತ್ಯಾಸ ಸರಿಪಡಿಸಿ ಕೊಡುವ ಅಧಿಕಾರ ಯಾರಿಗೆ ಸೇರಿದ್ದು ಎಂಬ ಬಗ್ಗೆ ಸರ್ಕಾರದಿಂದ ಅಧಿಕೃತ ಆದೇಶ ಇಲ್ಲ.

> ಗ್ರಾಮಠಾಣಾ ವ್ಯಾಪ್ತಿಯ ಪ್ರದೇಶದ ಹಕ್ಕು ಪತ್ರದಲ್ಲಿನ ಚಕ್ಕುಬಂದಿಯಲ್ಲಿ ವ್ಯತ್ಯಾಸ ಕಂಡು ಬಂದರೆ ಮಾತ್ರ ಅದನ್ನು ತಿದ್ದುಪಡಿ ಮಾಡುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರವಿದೆ. ಗ್ರಾಮಠಾಣಾ ಹೊರಭಾಗದ ಪ್ರದೇಶ ಹಕ್ಕುಪತ್ರದಲ್ಲಿನ ಚಕ್ಕುಬಂದಿ ವ್ಯತ್ಯಾಸ ತಿದ್ದುಪಡಿ ಮಾಡುವ ಅಧಿಕಾರವಿಲ್ಲ. ಹಕ್ಕು ಪತ್ರ ಕೊಟ್ಟವರೇ ಅದನ್ನು ತಿದ್ದುಪಡಿ ಮಾಡಬೇಕು ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಎಚ್.ಡಿ.ನವೀನ್ ಕುಮಾರ್ ತಿಳಿಸಿದರು.

ಕಂದಾಯ ಇಲಾಖೆಯ ಅಧಿಕಾರಿಗಳ ಪ್ರಕಾರ ಹಕ್ಕು ಪತ್ರ ಕೊಡುವುದು ಮಾತ್ರ ಕಂದಾಯ ಇಲಾಖೆಗೆ ಸೇರಿದ್ದು ಮನೆ ಕಂದಾಯವನ್ನು ಗ್ರಾಮಪಂಚಾಯಿತಿಗೆ ಪಾವತಿಸುವುದರಿಂದ ಚಕ್ಕು ಬಂದಿಯಲ್ಲಿನ ವ್ಯತ್ಯಾಸ ತಿದ್ದುಪಡಿ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಸೇರಿದ್ದು ಎಂದು ತಿಳಿಸುತ್ತಾರೆ. ಚಕ್ಕುಬಂದಿಯಲ್ಲಿನ ವ್ಯತ್ಯಾಸ ಸರಿಪಡಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಇಲಾಖೆಯು 2023ರ ಆಗಸ್ಟ್ 19ರಂದು ಜಂಟಿ ಸುತ್ತೋಲೆ ಹೊರಡಿಸಿದ್ದು, ಅದರ ಮಾರ್ಗ ಸೂಚಿಯಲ್ಲಿರುವಂತೆ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿಯಲ್ಲಿ ವ್ಯತ್ಯಾಸ ಬಂದಲ್ಲಿ ದಿಶಾಂಕ್ ಆಯಪ್ ಮೂಲಕ ವರದಿಯನ್ನು ಸೃಜಿಸಬೇಕು.

ಬಳಿಕ ಅರ್ಜಿದಾರರ ಅವಗಾಹನೆ ಸಲ್ಲಿಸಿ ಅರ್ಜಿದಾರರು, ಒಪ್ಪಿದರೆ ಗ್ರಾಮ ಠಾಣದ ಒಳಗೆ ಅಥವಾ ಹೊರಗೆ ಬರುವುದು ಎಂಬ ಮಾಹಿತಿಯನ್ನು ದಿಶಾಂಕ್ ಆಯಪ್‌ನಲ್ಲಿ ಸೆರೆಹಿಡಿದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸರಿಪಡಿಸಬಹುದು ಎಂದಿದೆ. 'ಹಕ್ಕುಪತ್ರದಲ್ಲಿ ಚಕ್ಕು ಬಂದಿಯಲ್ಲಾದ ವ್ಯತ್ಯಾಸ ತಿದ್ದುಪಡಿ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಸೇರಿದೆ. ಕಂದಾಯ ಇಲಾಖೆಯಿಂದ ಚಕ್ಕುಬಂದಿ ತಿದ್ದುಪಡಿ ಮಾಡಬೇಕಾದರೆ ಅರಣ್ಯ ಇಲಾಖೆಯ ಒಪ್ಪಿಗೆ ಅವಶ್ಯಕ. ಇದರಿಂದ ಸಾಕಷ್ಟು ವಿಳಂಬವಾಗಲಿದೆ' ಎಂದು ತಹಶೀಲ್ದಾರ್ ತನುಜಾ ಟಿ.ಸವದತಿ ತಿಳಿಸಿದರು.

**ಅರಣ್ಯ ಇಲಾಖೆಯ ಒಪ್ಪಿಗೆ ಅವಶ್ಯಕ**

ಆದರೆ, ಜಿಲ್ಲಾಧಿಕಾರಿ ಆದೇಶವನ್ನು ಆಧಾರವಾಗಿಟ್ಟುಕೊಂಡು ಕಂದಾಯ ಇಲಾಖೆಯವರು 94ಸಿ ಅಡಿ ಚಕ್ಕು ಬಂದಿಯಲ್ಲಿ ಆಗಿರುವ ವ್ಯತ್ಯಾಸ ತಿದ್ದುಪಡಿ ಮಾಡಿಕೊಡಲಾಗಿದೆ ಎಂದು ಗ್ರಾಮ ಪಂಚಾಯಿತಿ ಅಧಿಕಾರಿಯೊಬ್ಬರು ದಾಖಲೆ ತೋರಿಸಿದರು. ಜಿಲ್ಲಾಧಿಕಾರಿ ಆದೇಶವನ್ನು ಆಧಾರವಾಗಿಟ್ಟುಕೊಟ್ಟು, ಬಿ.ಕಣಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆಯ ಚಕ್ಕುಬಂದಿ ವ್ಯತ್ಯಾಸ ಸರಿಪಡಿಸಿದ ದಾಖಲೆಯನ್ನು ಗ್ರಾಮ ಪಂಚಾಯಿತಿ ಅಧಿಕಾರಿಯೊಬ್ಬರು ತೋರಿಸಿದರು. ಚಕ್ಕುಬಂದಿಯಲ್ಲಿನ ವ್ಯತ್ಯಾಸ ತಿದ್ದುಪಡಿ ಮಾಡುವುದು ಕಂದಾಯ ಇಲಾಖೆಯೋ, ಗ್ರಾಮಪಂಚಾಯಿತಿಯೋ ಎಂಬ ಗೊಂದಲ ಮುಂದುವರಿದಿದೆ.



ಉದಯವಾಹಿನಿ ಚಿತ್ರ

### ಸಮೀಕ್ಷೆ ಮಾಡದೆ ಹಕ್ಕು ಪತ್ರ

ಹಿಂದೆ ಕಂದಾಯ ಇಲಾಖೆಯಿಂದ ಮನೆಗಳಿಗೆ ನಿವೇಶ ಹಕ್ಕು ಪತ್ರ ನೀಡುವಾಗ ಕೆಲವು ಅಧಿಕಾರಿಗಳು ಯಾವುದೇ ಕಡತ, ನಕಾಶೆ, ವಿತರಣಾವಹಿ ನಿರ್ವಹಿಸದೆ ಮನೆಗಳಿಗೆ ಹಕ್ಕುಪತ್ರ ನೀಡಿದ್ದಾರೆ. ಅಲ್ಲದೆ, 94 ಸಿ ಅಡಿ ಹಕ್ಕು ಪತ್ರ ನೀಡುವ ಸ್ಥಳ ಪರಿಶೀಲನೆ ಮಾಡದೆ, ಸಮೀಕ್ಷೆ ಮಾಡದೆ ಹಕ್ಕು ಪತ್ರ ನೀಡಲಾಗಿದೆ ಎಂಬ ದೂರುಗಳೂ ಇವೆ. ಹಾಗಾಗಿ ಚಕ್ಕು ಬಂದಿಯಲ್ಲಿ ವ್ಯತ್ಯಾಸ ಕಂಡು ಬಂದಿದ್ದು ಇ-ಸ್ವತ್ತು ಮಾಡಿಸಲು ಸಮಸ್ಯೆಯಾಗಿದೆ.

# ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ಮಾಹಾರಥೋತ್ಸವ

• **ಉದಯವಾಹಿನಿ, ವಡಗೇರಾ**




ಉದಯವಾಹಿನಿ ಚಿತ್ರ

ತಾಲ್ಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಜ 13 ಸೋಮವಾರದಂದು ಬೆಳಿಗ್ಗೆ 10 ಗಂಟೆಗೆ ಶಿವಪೂರದಿಂದ ಕಳಸ ಮೆರವಣಿಗೆಯು ಪುರವಂತರ ಸೇವೆ ಭಾಜ ಭಜಂತ್ರಿ ವಿವಿಧ ಕಲಾ ತಂಡಗಳೊಂದಿಗೆ ಅಗ್ನಿ ಹಾಳ ಗ್ರಾಮ ತಲುಪಿ ಅಲ್ಲಿಂದ ಸಂಗಮೇಶ್ವರ ಪಲ್ಲಕ್ಕಿ ಉತ್ಸವವು ಗುಂಡ್ಲೂರು ಮಾರ್ಗವಾಗಿ ಸಂಗಮೇಶ್ವರ ದೇವಸ್ಥಾನ ತಲುಪುವುದು ನಂತರ 501 ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಧರ್ಮಸಭೆ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಐದು ಜನ ಸಾಧಕರಿಗೆ ಸಂಗಮ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸಾಯಂಕಾಲ 6:00 ಗಂಟೆಗೆ ಮಹಿಳೆಯರಿಂದ ಉಚ್ಚಾಯಿ ಕಾರ್ಯಕ್ರಮ ಜರಗುವುದು ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಮಾತು ಭಜನಾ ಕಾರ್ಯಕ್ರಮ ಜರಗುವುದು.

ಜ 14ರಂದು ಬೆಳಿಗ್ಗೆ ಸಂಗಮೇಶ್ವರ ಮತ್ತು ಕಾಳಿಕಾ ಮಾತೆಯ ಕರ್ತೃಗದ್ದುಗೆಗೆ ವಿಶೇಷ ರುದ್ರಾಭಿಷಕ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಮಕರ ಸಂಕ್ರಮಣದ ನಿಮಿತ್ಯ ರಾಜ್ಯ ಹೊರ ರಾಜ್ಯ ಜಿಲ್ಲೆ ಹಾಗೂ ಇನ್ನಿತರ ಗ್ರಾಮಗಳಿಂದ ಕೃಷ್ಣ ಭೀಮಾ ಸಂಗಮದ ನದಿಯಲ್ಲಿ ಪುಣ್ಯ ಸ್ನಾನಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವರು ಅಂದೆ ಸಾಯಂಕಾಲ 6:00 ಗಂಟೆಗೆ ಸಂಗಮೇಶ್ವರರ ಮಾಹಾರಥೋತ್ಸವ ಜರಗಲಿದೆ .

ಈ ಜಾತ್ರಾ ಮಹೋತ್ಸವಕ್ಕೆ ವಿವಿಧ ಮಠಾಧೀಶರು ರಾಜಕೀಯ ಮುಖಂಡರು ಜನಪ್ರತಿನಿಧಿಗಳು ಸಾಹಿತಿಗಳು ವಿವಿಧ ಸಂಘಟನೆಯ ಮುಖಂಡರು ಆಗಮಿಸಲಿದ್ದಾರೆ ಈ ಎಲ್ಲಾ ಕಾರ್ಯಕ್ರಮಗಳು ಪರಮಪೂಜ್ಯ ಶ್ರೀ ಕರಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಜರುಗಲಿವೆ ಎಂದು ಶ್ರೀ ಸಂಗಮೇಶ್ವರ ಜಾತಮೋತ್ಸವ ಸಮಿತಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರೀಡೆ ಸ್ವಾಸ್ಥ್ಯ ಸಮಾಜಕ್ಕೆ ಪ್ರೇರಣೆಯಾಗಲಿ: ಸತ್ಯಜಿತ್

• **ಉದಯವಾಹಿನಿ, ಮುದ್ದೇಬಿಹಾಳ**



ಉದಯವಾಹಿನಿ ಚಿತ್ರ

ವಿಜ್ಞಾನ ತಂತ್ರಜ್ಞಾನ ಮೊಬೈಲ್ ಯುಗದಲ್ಲಿ ದೈಹಿಕವಾಗಿ ಸದೃಢವಾಗಿರಲು ಕ್ರೀಡೆ ಅತಿಮುಖ್ಯ ಸ್ವಾಸ್ಥ್ಯ ಸಮಾಜಕ್ಕೆ ಕ್ರೀಡಾಪಟುಗಳ ಮಾನಸಿಕ ಸ್ವಾಸ್ಥ್ಯ ಪ್ರೇರಣೆಯಾಗಬೇಕೆಂದು ಯುವ ಉದ್ಯಮಿ ಸಮಾಜ ಸೇವಕ ಸಚಿವ ಶಿವಾನಂದ ಪಾಟೀಲ್ ಸುಪುತ್ರ ಸತ್ಯಜಿತ್ ಪಾಟೀಲ್ ಹೇಳಿದರು ಶನಿವಾರ ಪಟ್ಟಣದಲ್ಲಿ ನಡೆಯುತ್ತಿರುವ ಎಂಪಿಎಲ್ ಸಿಜನ್7 ನ ಜಾಹೀದಾ ವಾರಿಯರ್ಸ್ ಹಾಗೂ ನಮಿರಾ ಜಿಕೆ ತಂಡಗಳ ಪಂದ್ಯಾವಳಿಗೆ ಚಾಲನೆಯನ್ನು ನೀಡಿ ಅವರು ಮಾತನಾಡಿದರು

ಕ್ರೀಡೆಯಿಂದ ದೇಶ ಹಾಗೂ ರಾಜ್ಯಗಳ ನಡುವೆ ಬಾಂಧವ್ಯ ಬೆಳೆಯುತ್ತದೆ. ಕ್ರೀಡೆಯಲ್ಲಿ ಸೋಲು ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂದು ಕ್ರಿಕೆಟ್ ಪಟುಗಳಿಗೆ ಕಿವಿ ಮಾತನ್ನು ಹೇಳಿದರು

ಎಂಪಿಎಲ್ ಕ್ರಿಕೆಟ್ ಸಲಹಾ ಸಮಿತಿಯ ಸದಸ್ಯ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಮಾತನಾಡಿ ಕಳೆದ 7 ಸಿಜನ್ ಕ್ರಿಕೆಟ್ ಪಂದ್ಯಾವಳಿಗಳು ದಾನಿಗಳ ಕೊಡುಗೆ ಮತ್ತು ಪ್ರೋತ್ಸಾಹದಿಂದ ನಡೆಯುತ್ತಿದೆ. ಈ ಬಾರಿಯ ಪಂದ್ಯಾವಳಿಯ ಪ್ರಥಮ 2 ಲಕ್ಷ ರೂ ಬಹುಮಾನ ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ ಬಿ ಅಸ್ಕಿ ಹಾಗೂ ಸಚಿವ ಶಿವಾನಂದ ಪಾಟೀಲ್ ರ ಪುತ್ರ, ಸತ್ಯಜಿತ್ ಪಾಟೀಲ್ ನೀಡಿದ್ದಾರೆ ದ್ವಿತಿಯ ಬಹುಮಾನ 1 ಲಕ್ಷ ರೂ ಬಹುಮಾನ ಯಾಸೀನ್ ಸೂತೆ ನೀಡಿದ್ದಾರೆ ಎಂದರು

ಈ ವೇಳೆ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಮುದ್ದೇಬಿಹಾಳ ಪ್ರಿಯಯರ್ ಕ್ರಿಕೆಟ್ ಲೀಗ್ ಸಲಹಾ ಸಮಿತಿಯ ಹುಸೇನ್ ಮುಲ್ಲಾ, ಸಂಗಣ್ಣ ಮೇಲಿನಮನಿ, ಸದುಮಠ, ಮಹ್ಮದ ರಫಿಕ್ ಶಿರೋಳ,ಪಿಡಿಒ ಮುತ್ತು ಗಣಾಚಾರಿ ಸೇರಿದಂತೆ ಕ್ರಿಕೆಟ್ ಅಭಿಮಾನಿಗಳು ಭಾಗವಹಿಸಿದ್ದರು

ಸತ್ಯಜಿತ್ ಪಾಟೀಲ್ ಅವರು ಟಾಸ್ ಮಾಡಿ ಕ್ರಿಕೆಟ್‌ಗೆ ಚಾಲನೆಯನ್ನು ನೀಡಿ ಅವರು ಸಹ ಬ್ಯಾಟಿಂಗ್ ಮಾಡಿ ಕ್ರಿಕೆಟ್ ಪಟುಗಳಿಗೆ ಪ್ರೋತ್ಸಾಹ ನೀಡಿದರು

# ಡಿಕೆ ಶಿವಕುಮಾರ್ 'ಸಿಎಂ' ಆಗೇ ಆಗುತ್ತಾರೆ : ಶಾಸಕ

• **ಉದಯವಾಹಿನಿ, ದಾವಣಗೆರೆ**


ಉದಯವಾಹಿನಿ ಚಿತ್ರ

ಒಂದು ಕಡೆ ಡಿಸಿಎಂ ಡಿಕೆ ಶಿವಕುಮಾರ್ ಅವರು ನನಗೆ ಯಾರ ಬೆಂಬಲವೂ ಬೇಡ ಯಾವ ಘೋಷಣೆಗಳು ಬೇಡ, ನನಗೆ ಪಕ್ಷ ಮುಖ್ಯ ಎಂದು ಹೇಳುತ್ತಿದ್ದರೆ, ಇನ್ನೊಂದು ಕಡೆ ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರು ಮುಂದಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಎಂದು ಹೇಳಿಕೆ ನೀಡುತ್ತಿದ್ದಾರೆ ಇದೀಗ ದಾವಣಗೆರೆ ಜಿಲ್ಲೆಯ ಚೆನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಕೂಡ ಡಿಕೆ ಶಿವಕುಮಾರ್ ಅವರ ಪರವಾಗಿ ಬ್ಯಾಟಿಂಗ್ ಬೀಸಿದ್ದಾರೆ. ಈ ಕುರಿತು ದಾವಣಗೆರೆಯಲ್ಲಿ ಮಾತನಾಡಿದ ಅವರು, ಡಿಕೆ ಶಿವಕುಮಾರ್ ಸಿಎಂ ಆಗೇ ಆಗುತ್ತಾರೆ. ಈ ಹಿಂದೆಯೂ ಹೇಳಿದೆ ಈಗಲೂ ಹೇಳುತ್ತಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಒಳ್ಳೆಯ ಆಡಳಿತ ನೀಡುತ್ತಿದ್ದಾರೆ.

ಡಿಕೆ ಶಿವಕುಮಾರ್ ಅವರು ಐದು ವರ್ಷ ಸಿಎಂ ಆಗಬೇಕಿತ್ತು ಆದರೆ ಕೆಲ ಬೆಳವಣಿಗೆಯಿಂದ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ ಕುರ್ಚಿ ಖಾಲಿಯಾದ ತಕ್ಷಣ ಕ್ಲೈಮ್ ಮಾಡುತ್ತೇನೆ ಎಂದರು ಡಿಕೆ ಶಿವಕುಮಾರ್ ಪಕ್ಷ ಸಂಘಟನೆ ಮಾಡಿ ಎಲ್ಲರನ್ನೂ ಒಗ್ಗೂಡಿಸಿದ್ದಾರೆ. ಉಳಿದವರಿಗೆ ಯಾರನ್ನು ಕರೆಯುತ್ತಿರಲು ಸಾಧ್ಯವಾಗುವುದಿಲ್ಲ.ಈ ರೀತಿ ಆಪರೇಷನ್ ಮಾಡಿ ಕರೆ ತರಲಿ ನೋಡೋಣ ಕೆಲವರಿಗೆ ಅಧಿಕಾರ ಬೇಕು ಮಾಡಿಟ್ಟ ಊಟಕ್ಕೆ ಬರುತ್ತಾರೆ ಎಂದು ಶಾಸಕ ಬಸವರಾಜ್ ಶಿವಗಂಗಾ ಅವರು ತಿಳಿಸಿದರು.

> ಡಿಕೆ ಶಿವಕುಮಾರ್ ಶಾಸಕರನ್ನು ಆರ್ಡರ್ ಮಾಡಿ ಕೇಳಬೇಕು. ನಾವೆಲ್ಲ ಒಗ್ಗಟ್ಟಾಗಿ ಇದ್ದೇವೆ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ. ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕಾದರೆ ಹೈಕಮಾಂಡ್ ಇದೆ. ಅಧಿಕಾರ ಹಂಚಿಕೆ ಯಾವುದು ಇಲ್ಲ ಹೈಕಮಾಂಡ್ ನಿರ್ಧಾರವೇ ಅಂತಿಮ. ಡಿಸಿಎಂ ಡಿಕೆ ಶಿವಕುಮಾರ್ ಅವರು ಹೇಳಿರುವುದು ಸರಿ ಇದೆ ಅವರ ಪರವಾಗಿ ನಾವಿದ್ದೇವೆ ಸಚಿವ ಕೆ ಎನ್ ರಾಜಣ್ಣ ಹೇಳಿರುವುದು ಸರಿ ಇದೆ ಎಂದರು.

ಶಾಸಕರು ಕಾರ್ಯಕರ್ತರ ಬೆಂಬಲ ಬೇಡ ಎಂದು ಡಿಕೆ ಶಿವಕುಮಾರ್ ಹೇಳಿಕೆ ವಿಚಾರವಾಗಿ ಡಿಸಿಎಂ ಡಿಕೆ ಶಿವಕುಮಾರ್ ಅವರು ಒಳ್ಳೆಯ ಅರ್ಥದಲ್ಲಿ ಹೇಳಿದ್ದಾರೆ.

# ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿಣಿ ಸಭೆ

• **ಉದಯವಾಹಿನಿ, ದಾವಣಗೆರೆ**


ಉದಯವಾಹಿನಿ ಚಿತ್ರ

ಒಪಿಎಸ್ ಮರು ಜಾರಿಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು ವಿವಿಧ ಹಂತಗಳಲ್ಲಿ ಹೋರಾಟ ಸೇರಿದಂತೆ ಇನ್ನಿತರೆ ನಿರ್ಣಯಗಳಿಗೆ ಬೆಂಬಲ ಸೂಚಿಸಲು ಇಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸಭೆ ನಿರ್ಧರಿಸಿತು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ನೇತೃತ್ವದಲ್ಲಿ 2024 – 29ನೇ ಅವಧಿಯ ರಾಜ್ಯ ಕಾರ್ಯಕಾರಿಣಿಯ ಮೊದಲ ಸಭೆ ನಡೆಯಿತು. ನಗದು ರಹಿತ ಚಿಕಿತ್ಸೆ ಯೋಜನೆಯ ತ್ವರಿತ ಜಾರಿಗೆ ಒತ್ತಾಯಿಸುವುದು 2026ಕ್ಕೆ ಕೇಂದ್ರ ಸರ್ಕಾರದ ಮಾದರಿ ವೇತನಕ್ಕಾಗಿ ಹೋರಾಟ ರೂಪಿಸುವುದು, ಪ್ರಾಥಮಿಕ ಶಾಲಾ ಶಿಕ್ಷಕರ ಸಿ ಆಯಂಡ್ ಆರ್ ನಿಯಮಕ್ಕೆ ತಿದ್ದುಪಡಿ ತರುವಂತೆ ಆಗ್ರಹಿಸಿ ನಡೆಸಲಾಗುವ ಹೋರಾಟವನ್ನು ಬೆಂಬಲಿಸುವುದು, ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್‌ಗಳಿಗೆ ಶೀಘ್ರವೇ ಹಣ ಬಿಡುಗಡೆ ಮಾಡಿಸಲು ಕ್ರಮ ವಹಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಶೀಘ್ರವೇ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಲು ಹಾಗೂ 2024–25ನೇ ಸಾಲಿಗೆ ಆಯ್ಕೆಯಾದ ರಾಜ್ಯದ ಎಲ್ಲಾ ನಿರ್ದೇಶಕರು, ಪದಾಧಿಕಾರಿಗಳಿಗೆ ಸಮ್ಮಿಲನ ಸಮಾವೇಶ ನಡೆಸಲು ಸಭೆ ಅನುಮೋದನೆ ನೀಡಿತು. ಸಭೆಯಲ್ಲಿ ಎಲ್ಲಾ ಜಿಲ್ಲೆಗಳ ಯೋಜನಾ ಶಾಖೆಗಳ ಅಧ್ಯಕ್ಷರು, ಖಜಾಂಚಿ, ರಾಜ್ಯ ಪರಿಷತ್ ಸದಸ್ಯರು, ಕಾರ್ಯದರ್ಶಿಗಳು ಸೇರಿ ಹಲವರು ಭಾಗವಹಿಸಿದ್ದರು.

**ಒಪಿಎಸ್ ಮರುಜಾರಿಗೆ ಹೋರಾಟ**

### 3 ಕೋಟಿ ಅನುದಾನ

ಹಬ್ಬದ ಮುಂಗಡ ಮೊತ್ತವನ್ನು 25,000 ದಿಂದ 50,000ಕ್ಕೆ ಹೆಚ್ಚಿಸಲು ಹಾಗೂ ನಿವೃತ್ತಿ ಸಮಯದ ಗಳಿಕೆ ರಜೆಗಳನ್ನು 300 ರಿಂದ 340ಕ್ಕೆ ಏರಿಸಲು ಕ್ರಮ ವಹಿಸುವುದು, ಕೇಂದ್ರ ಮತ್ತು ಜಿಲ್ಲಾ ಸಂಘಕ್ಕೆ ವಂತಿಗೆ ರೂಪದಲ್ಲಿ ಸಲ್ಲಿಸುವ ಹಣವನ್ನು ಕಡಿತಗೊಳಿಸಿ ತಾಲ್ಲೂಕು ಮಟ್ಟದಲ್ಲಿ ಉಳಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು.2024–25ನೇ ಸಾಲಿನ ಸರ್ಕಾರಿ ನೌಕರರ ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 3 ಕೋಟಿ ಅನುದಾನ ನೀಡಲು ಒಪ್ಪಿದ್ದಾರೆ.

# ಅಂಗನವಾಡಿ ಶಿಕ್ಷಕಿ ಮೇಲೆ ಅತ್ಯಾಚಾರಕ್ಕೆ ಯತ್ನ

• **ಉದಯವಾಹಿನಿ, ಬೆಳಗಾವಿ**

ಇತ್ತೀಚಿಗೆ ದೇಶದಲ್ಲಿ ಕಾಮುಕರ ಅಟ್ಟಹಾಸ ಮೀರುತ್ತಿದ್ದು, ಇದೀಗ ರಾಜ್ಯದಲ್ಲಿ ಮತ್ತೊಂದು ಬೆಚ್ಚಿ ಬೆಳಿಸುವಂತಹ ಘಟನೆ ನಡೆದಿದ್ದು, ಅಂಗನವಾಡಿಗೆ ನುಗ್ಗಿ ಶಿಕ್ಷಕೀಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಅಂಗನವಾಡಿ ಕೇಂದ್ರದಲ್ಲಿ ನಡೆದಿದೆ. ಹೌದು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿಯಲ್ಲಿ ಅಡುಗೆ ಮಾಡುವ ಮಹಿಳಾ ಸಹಾಯಕಿಯ ಗಂಡನೊಬ್ಬ ಶಿಕ್ಷಕಿಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಅಂಗನವಾಡಿ ಕೇಂದ್ರದಲ್ಲಿರುವ ಅಡುಗೆ ಸಿಬ್ಬಂದಿಗೆ ಶೌಚಾಲಯ ಸ್ವಚ್ಛ ಮಾಡುವಂತೆ ಅಡುಗೆ ಮಾಡುವ ಮಹಿಳೆಗೆ ಶಿಕ್ಷಕಿ ಹೇಳಿದ್ದಾರೆ.

ಈ ವಿಚಾರವನ್ನ ತನ್ನ ಗಂಡನಿಗೆ ಅಡುಗೆ ಸಿಬ್ಬಂದಿ ಸಾವಿತ್ರಿ ಕರ್ಲಟ್ಟಿ ಹೋಗಿ ಹೇಳಿದ್ದಾರೆ.ಇದರಿಂದ ಕೋಪಗೊಂಡು ಅಂಗನವಾಡಿಗೆ ಆಗಮಿಸಿದ್ದ ಆರೋಪಿ ಸಿದ್ರಾಯಿ ಕರ್ಲಟ್ಟಿ, ತನ್ನ ಹೆಂಡತಿಗೆ ಶೌಚಾಲಯ ಕ್ಲೀನ್ ಮಾಡಲು ಹಚ್ಚುತ್ತಿಯಾ ಅಂತಾ ಅವಾಚ್ಯವಾಗಿ ನಿಂದಿಸಿದ್ದಾರೆ. ಇದೇ ವೇಳೆ ಶಿಕ್ಷಕಿ ಸೀರೆ ಎಳೆದು ಮಾನಭಂಗ ಪಡಿಸಲು ಯತ್ನಿಸಿರುವುದಾಗಿ ಆರೋಪಿಸಲಾಗಿದೆ. ಇನ್ನು ಶಿಕ್ಷಕಿ ಟ್ರೈನ್ ಟ್ಯೂಮರ್‌ದಿಂದ ಬಳಲುತ್ತಿದ್ದು, ಮಾನಸಿಕ ಕಿರುಕುಳ ತಾಳಲಾರದೇ ಆತ್ಮಹತ್ಯೆಗೂ ಯತ್ನಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಡಾ. ನಾ.ಡಿಸೋಜ ನುಡಿನಮನ ಕಾರ್ಯಕ್ರಮ

## ಡಾ.ನಾ.ಡಿಸೋಜ ಅವರ ಕೃತಿಗಳು ಓದುಗರನ್ನು ಸಮಾಜದ ಬಗೆಗಿನ ಆಳವಾದ ಚಿಂತನೆಗೆ ಪ್ರೇರೇಪಿಸುತ್ತವೆ

• **ಉದಯವಾಹಿನಿ, ಚಿತ್ರದುರ್ಗ**



ಉದಯವಾಹಿನಿ ಚಿತ್ರ

ಕನ್ನಡ ಸಾಹಿತ್ಯ ಲೋಕದಲ್ಲಿ ಅಜರಾಮರ ಸ್ಥಾನ ಪಡೆದಿರುವ ಡಾ. ನಾ. ಡಿಸೋಜ್ ಅವರು ತಮ್ಮ ಸರಳತೆ, ಮಾನವೀಯ ಮೌಲ್ಯಗಳು ಮತ್ತು ಪ್ರಕೃತಿ ಪ್ರೇಮದ ಮೂಲಕ ಸಾಹಿತ್ಯ ಪ್ರಿಯರ ಹೃದಯ ಗೆದ್ದಿದ್ದಾರೆ. ಅವರ ಕೃತಿಗಳು ಕೇವಲ ಓದುಗರನ್ನು ಮನೋರಂಜಿಸುವುದರ ಜೊತೆಗೆ ಸಮಾಜದ ಬಗೆಗಿನ ಆಳವಾದ ಚಿಂತನೆಗೆ ಸದಾಕಾಲವೂ ಪ್ರೇರೇಪಿಸುತ್ತವೆ ಎಂದು ಕನ್ನಡ ಉಪನ್ಯಾಸಕಿ ಹಾಗೂ ಸಾಹಿತಿ ಶ್ರೀಮತಿ ಸರೀನಾ ಅಭಿಪ್ರಾಯ ಪಟ್ಟಿದ್ದಾರೆ.

ಇತ್ತೀಚೆಗೆ ಅಗಲಿದ ಖ್ಯಾತ ಸಾಹಿತಿ ಹಾಗೂ ಕಾದಂಬರಿಕಾರ ಡಾ.ನಾ.ಡಿಸೋಜ ಕುರಿತು ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಹಾಗೂ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಚಿತ್ರದುರ್ಗ ಇವರು ಸಂಯುಕ್ತವಾಗಿ ನಗರದ ಕೋಟೆ ಮುಂಭಾಗದ ಮಹಾರಾಣಿ ಕಾಲೇಜಿನ ಸಭಾ ಭವನದಲ್ಲಿ ಆಯೋಜಿಸಿದ್ದ ನುಡಿನಮನ ಹಾಗೂ ಕಾವ್ಯವಾಚನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಡಾ.ನಾ.ಡಿಸೋಜ ಅವರ ಸಾಹಿತ್ಯ ಮತ್ತು ವ್ಯಕ್ತಿತ್ವ ಕುರಿತು ಮಾತನಾಡುತ್ತಾ ಡಾ. ಡಿಸೋಜ್ ಅವರು ಪ್ರಕೃತಿಯನ್ನು ಅತ್ಯಂತ ಆಳವಾಗಿ ಪ್ರೀತಿಸುತ್ತಿದ್ದರು ಎಂಬುದು ಅವರ ಅನೇಕ ಕೃತಿಗಳಲ್ಲಿ ಪ್ರಕೃತಿಯ ಸೌಂದರ್ಯ ಮತ್ತು ಮಹತ್ವವನ್ನು ವರ್ಣಿಸಿರುವುದು ಕಾಣಬಹುದಾಗಿದೆ. ಹಾಗೆಯೇ ಅವರು ಮಕ್ಕಳಿಗಾಗಿ ಅನೇಕ ಕಥೆಗಳನ್ನು ಬರೆದಿದ್ದು, ಆ ಮೂಲಕ ಮಕ್ಕಳಲ್ಲಿ ಓದುವ ಅಭ್ಯಾಸವನ್ನು ಬೆಳೆಸಲು ಸಹಾಯಕವಾಗಿವೆ ಎಂದು ತಿಳಿಸಿದರು.

**ನುಡಿನಮನ ಹಾಗೂ ಕಾವ್ಯವಾಚನ**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ಹಾಗೂ ಬರಹಗಾರ್ತಿ ಶ್ರೀಮತಿ ದಯಾವತಿ ಪುತ್ತೂರ್ಕರ್ ಮಾತನಾಡಿ ಡಾ. ಡಿಸೋಜ್ ಅವರು ತಮ್ಮ ಸಾಧನೆಗಳ ಹೊರತಾಗಿಯೂ ಅತ್ಯಂತ ಸರಳ ಜೀವನ ನಡೆಸುತ್ತಿದ್ದರು.

ಅವರ ಸರಳತೆ ಅವರ ಬರಹಗಳಲ್ಲಿಯೂ ಪ್ರತಿಫಲಿಸುತ್ತದೆ. ಅವರ ಕಥೆಗಳು ಮತ್ತು ಕಾದಂಬರಿಗಳು ಜನಸಾಮಾನ್ಯರ ಜೀವನವನ್ನು ಹತ್ತಿರದಿಂದ ಬಿಂಬಿಸುತ್ತವೆ ಎಂದು ಹೇಳಿದರು.

ಇದೇ ಸಂಧರ್ಭದಲ್ಲಿ ಕವಿಗಳಾದ ಶಿವರುದ್ರಪ್ಪ ಪಂಡ್ರಳ್ಳಿ,ಉಷಾರಾಣಿ, ಕು.ಸೌಮ್ಯ ನವೀನ್ ಮಸ್ಕಲ್,ನವೀನ್ ಸಜ್ಜನ್, ಪ್ರವೀಣ್ ಬೆಳಗೆರೆ, ರವೀಶ್,ಸತೀಶ್ ಕುಮಾರ್ ಡಾ.ನಾ.ಡಿಸೋಜ ಅವರನ್ನು ಕುರಿತು ತಮ್ಮ ಕವನಗಳನ್ನು ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಕೋಟೆ ವಾಯುವಿಹಾರಿಗಳ ಸಂಘದ ಅಧ್ಯಕ್ಷ ಆರ್.ಸತ್ಯಣ್, ಉಪನ್ಯಾಸಕ ಕೆಂಚವೀರಪ್ಪ, ನಿವೃತ್ತ ಶಿಕ್ಷಣಾಧಿಕಾರಿ ನಾಗರಾಜ್, ಪರಿಸರ ಪ್ರೇಮಿ ಮಲ್ಲಿಕಾರ್ಜುನಪ್ಪ, ನಿ.ಪೋಲಿಸ್ ಅಧಿಕಾರಿ ಮಲ್ಲಿಕಾರ್ಜುನಚಾರ್ ಯೋಗ ಶಿಕ್ಷಕಿಯರಾದ ಮಂಜುಳಾ, ವಸಂತಲಕ್ಷ್ಮಿ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಡಾ. ನಾ. ಡಿಸೋಜ ಅವರಂತಹ ಸಾಹಿತ್ಯ ದಿಗ್ಗಜರನ್ನು ನೆನಪಿಸಿಕೊಳ್ಳುವುದು ಮತ್ತು ಅವರ ಕೃತಿಗಳ ಬಗ್ಗೆ ಅರಿಯುವುದು ನಿಜಕ್ಕೂ ಪುಣ್ಯದ ಕೆಲಸ ಡಿಸೋಜರವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮತ್ತು ಅವರು ಪ್ರತಿಪಾದಿಸಿದ ಪರಿಸರ ಸಂರಕ್ಷಣೆ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದರೆ ನಮ್ಮ ಕಾರ್ಯಕ್ರಮ ಸಾರ್ಥಕಗೊಳ್ಳುತ್ತದೆ
>
> -ರವಿ ಕೆ.ಅಂಬೇಕರ್
> ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಅಧ್ಯಕ್ಷ

# ಇಷ್ಟಲಿಂಗ ಧಾರಣೆ ಮಾಡಲಿ: ಸಾಣೆಹಳ್ಳಿ ಶ್ರೀ

• **ಉದಯವಾಹಿನಿ, ಹುಲಸೂರ**


ಉದಯವಾಹಿನಿ ಚಿತ್ರ

'ದೇವರನ್ನು ಗುಡಿ, ಬೆಟ್ಟ-ಗುಡ್ಡ, ನದಿಗಳಲ್ಲಿ ಹುಡುಕಿಕೊಂಡು ಪಾದಯಾತ್ರೆಯ ಮಾಡುವ ದೇಗುಲ ಸಂಸ್ಕೃತಿಯನ್ನು ಲಿಂಗಾಯತರು ಬಿಡಬೇಕು. ಇಷ್ಟಲಿಂಗ ಧಾರಣೆ ಮಾಡಿಕೊಂಡು ದೇಹವೇ ದೇವಾಲಯವೆಂದು ಭಾವಿಸಬೇಕು' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಪಟ್ಟಣದ ಶ್ರೀ ಗುರು ಬಸವೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವ ಹಾಗೂ ಬಸವಕುಮಾರ ಶಿವಯೋಗಿಗಳ 49ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ವೇದಿಕೆ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ದೇವಾಲಯಗಳಲ್ಲಿ ಇಂದು ಕಾಲ್ತುಳಿತ, ಹಣದ ಅವ್ಯವಹಾರದಂತ ದುರಂತಗಳು ಸಂಭವಿಸಿದಾಗ ದೇವರು ರಕ್ಷಣೆಗೆ ಬಾರದೆ ಇರುವುದನ್ನು ಕಂಡರೆ ದೇವರು ನಾಲ್ಕು ಗೋಡೆಗಳ ಮದ್ಯ ಇಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ದೇವರು ಸರ್ವವ್ಯಾಪಿ, ದೇವಾಲಯದಲ್ಲಿ ಕೊಡುವ ಪ್ರಸಾದ ತೀರ್ಥಕ್ಕಿಂತ ಮನೆಯಲ್ಲಿನ ಶುದ್ಧ ನೀರು, ತಾಯಿ ಮಾಡುವ ಅನ್ನ ಮಹಾಪ್ರಸಾದ ಎಂದು ತಿಳಿದುಕೊಳ್ಳಬೇಕು.

ಲಿಂಗಾಯತರು ಶರಣರ ವಚನಗಳ, ಅವರ ಸಿದ್ಧಾಂತಗಳ ವಿರುದ್ಧವಾಗಿ ಮನೆಯಲ್ಲಿ ಹೋಮ-ಹವನ, ಯಜ್ಞ-ಯಾಗ ಮಾಡುವ ಮೂಲಕ ಲಿಂಗಾಯತ ಸಂಸ್ಕೃತಿಯನ್ನು ನಾಶಮಾಡುತ್ತಿರುವುದು ದುರಂತ' ಎಂದು ವಿಷಾಧ ವ್ಯಕ್ತಪಡಿಸಿದರು. 'ಪ್ರತಿ ವಸ್ತುವೂ ಕಲುಷಿತಗೊಂಡು ದೇಹ ಸೇರಿ ಅನಾರೋಗ್ಯ ಕಾಡುವ ಸ್ಥಿತಿ ನಿರ್ಮಾಣವಾಗಿದೆ. ರಸಾಯನಿಕ ಗೊಬ್ಬರ, ಔಷಧಿ ಸಿಂಪರಣೆ ಮಾಡುವುದರಿಂದ ನಾವು ತಿನ್ನುವ ಆಹಾರ ಪದಾರ್ಥಗಳು ವಿಷಯುಕ್ತವಾಗಿದೆ. ನೈಸರ್ಗಿಕ ಕೃಷಿ ಅಗತ್ಯ ಇದೆ. ಧರ್ಮ ಇಂದು ಹಣದ ಹಿಂದೆ ಬಿದ್ದು ಕಲುಷಿತಗೊಂಡು ಬಂಡವಾಳ ಇಲ್ಲದೆ ರಾಜಕಾರಣ ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗಿದೆ' ಎಂದರು. ಸಮಾರಂಭ ಉದ್ಘಾಟಿಸಿ ಮಾತನಾಡಿದ ವಿಜಾಪುರದ ಸಾಹಿತಿ ಜಿ.ಎಸ್.ಪಾಟೀಲ, '12ನೇ ಶತಮಾನದಲ್ಲಿ ಶರಣರು ಏಕದೇವೋಪಾಸನೆಯಲ್ಲಿ ಇದ್ದರು.

ಆದರೆ ಬರಬರುತ್ತಾ ಲಿಂಗಾಯತರು ಬಹುದೇವತಾ ಆರಾಧನೆ ಮಾಡುವ ಮೂಲಕ ಮಂದಿರ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ, ಇದು ಸರಿಯಾದ ಮಾರ್ಗ ಅಲ್ಲ.ದೇವಾಲಯಗಳು ಸುಲಿಗೆಯ ಕೇಂದ್ರವಾಗಿರುವುದನ್ನು ಅರಿತ ಶರಣರು ಲಿಂಗವನ್ನು ನಮ್ಮ ಅಂಗೈಯಲ್ಲಿ ಇಡುವ ಮೂಲಕ ವೈಧಿಕರಿಂದ ನಡೆಯುವ ಶೋಷಣೆಯಿಂದ ರಕ್ಷಣೆ ಮಾರ್ಗ ತಿಳಿಸಿಕೊಟ್ಟರು.

> ಲಿಂಗಾಯತರ ಶಿಕ್ಷಣ ಸಂಸ್ಥೆ, ಮಠಗಳು, ಪ್ರಸಾದ ನಿಲಯಗಳು, ವಚನಗಳನ್ನು ನಾಶಮಾಡುವ ಮೂಲಕ ಲಿಂಗಾಯತ ಸಂಸ್ಕೃತಿ ನಾಶ ಮಾಡುವ ಹೂನ್ನಾರ ನಡೆಯುತ್ತಿದೆ, ಇದನ್ನು ಅರಿತು ಎಚ್ಚರ ವಹಿಸುವುದು ನಮ್ಮೆಲ್ಲರ ಜವಾಬ್ದಾರಿ' ಎಂದು ತಿಳಿಸಿದರು.

# ವ್ಯಾಪಾರಿಗಳು ಕ್ಯೂಆರ್ ಕೋಡ್ ಬಳಸಲು ಹಿಂದೇಟು

## ಅಂಗಡಿ ಮಾಲೀಕರೇ ಎಚ್ಚರ: ಹಣ ದೋಚಲು ನಿಮ್ಮ ಅಂಗಡಿ ಮುಂದಿರುವ ಕ್ಯೂ ಆರ್ ಕೋಡ್‌ಬದಲಿಸುತ್ತಿದ್ದಾರೆ ವಂಚಕರು




**ಆರೋಪಿಗಳ ಪತ್ತೆಗೆ ಬಲೆ**

**ಮಧ್ಯಪ್ರದೇಶ:** ದಿನದಿಂದ ದಿನಕ್ಕೆ ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚುತ್ತಿವೆ. ಯಾರೂ ಊಹಿಸದ ರೀತಿ ಆನ್‌ಲೈನ್ ವಂಚಕರು ಮೋಸ ಮಾಡುತ್ತಿದ್ದಾರೆ. ಇದೀಗ ಮಧ್ಯಪ್ರದೇಶದಲ್ಲಿ ಆನ್‌ಲೈನ್ ವಂಚನೆಯ ಹೊಸ ವಿಧಾನವೊಂದು ಬೆಳಕಿಗೆ ಬಂದಿದೆ. ರಸ್ತೆ ಬದಿಯ ಸಣ್ಣ ಅಂಗಡಿಯಿಂದ ಹಿಡಿದು, ಪ್ರತಿಯೊಂದು ಕಡೆಗಳಲ್ಲೂ ಯುಪಿಐ ಮೂಲಕ ವ್ಯವಹಾರ ನಡೆಯುತ್ತಿದೆ. ಗ್ರಾಹಕರು ಕ್ಯೂಆರ್ ಕೋಡ್ ಬಳಸಿಕೊಂಡು ಹಣ ಪಾವತಿಸುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡ ವಂಚಕರು, ಅಂಗಡಿಗಳಲ್ಲಿ ಅಳವಡಿಸಿರುವ ಕ್ಯೂಆರ್ ಕೋಡ್‌ಗಳನ್ನೇ ಅದಲು ಬದಲು ಮಾಡುತ್ತಿದ್ದಾರೆ. ಪರಿಣಾಮ ವ್ಯಾಪಾರಿಗಳು ಕ್ಯೂಆರ್ ಕೋಡ್ ಬಳಸಲು ಹಿಂದೇಟು ಹಾಕುವಂತಾಗಿದೆ.

ವಂಚಕರು ರಾತ್ರಿಯ ಸಮಯದಲ್ಲಿ ವಿವಿಧ ಅಂಗಡಿಗಳು, ಪೆಟ್ರೋಲ್ ಬಂಕ್‌ಗಳ ಹೊರಗೆ ಅಂಟಿಸಲಾದ ಕ್ಯೂಆರ್ ಕೋಡ್‌ಗಳನ್ನು ಬದಲಿಸಿದ್ದಾರೆ. ಇದರಿಂದ ಗ್ರಾಹಕರು ಪಾವತಿಸಿದ ಹಣ ವಂಚಕರ ಖಾತೆಗೆ ವರ್ಗಾವಣೆ ಆಗಿದೆ. ಈ ರೀತಿಯ ವಂಚನೆ ಪ್ರಕರಣ ಮಧ್ಯಪ್ರದೇಶದ ಖಜುರಾಹೊದಲ್ಲಿ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆದಿದೆ. ವಂಚಕರ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ. ವಂಚಕರು ಮೆಡಿಕಲ್ ಸ್ಟೋರ್ ಒಂದರ ಹೊರಗೆ ಅಂಟಿಸಿದ್ದ ಕ್ಯೂಆರ್ ಕೋಡ್‌ನ್ನು ಬದಲಾಯಿಸಿದ್ದಾರೆ.

### ಕ್ಯೂ ಆರ್ ಕೋಡ್‌ಗಳನ್ನೇ ಅದಲು ಬದಲು

**ದಿನದಿಂದ ದಿನಕ್ಕೆ ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚುತ್ತಿವೆ. ಯಾರೂ ಊಹಿಸದ ರೀತಿ ಆನ್‌ಲೈನ್ ವಂಚಕರು ಮೋಸ ಮಾಡುತ್ತಿದ್ದಾರೆ. ಇದೀಗ ಮಧ್ಯಪ್ರದೇಶದಲ್ಲಿ ಆನ್‌ಲೈನ್ ವಂಚನೆಯ ಹೊಸ ವಿಧಾನವೊಂದು ಬೆಳಕಿಗೆ ಬಂದಿದೆ. ರಸ್ತೆ ಬದಿಯ ಸಣ್ಣ ಅಂಗಡಿಯಿಂದ ಹಿಡಿದು, ಪ್ರತಿಯೊಂದು ಕಡೆಗಳಲ್ಲೂ ಇಂದು ಯುಪಿಐ ಮೂಲಕ ವ್ಯವಹಾರ ನಡೆಯುತ್ತಿದೆ. ಗ್ರಾಹಕರು ಕ್ಯೂಆರ್ ಕೋಡ್ ಬಳಸಿಕೊಂಡು ಹಣ ಪಾವತಿಸುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡ ವಂಚಕರು, ಅಂಗಡಿಗಳಲ್ಲಿ ಅಳವಡಿಸಿರುವ ಕ್ಯೂಆರ್ ಕೋಡ್‌ಗಳನ್ನೇ ಅದಲು ಬದಲು ಮಾಡುತ್ತಿದ್ದಾರೆ. ಪರಿಣಾಮ ವ್ಯಾಪಾರಿಗಳು ಕ್ಯೂಆರ್ ಕೋಡ್ ಬಳಸಲು ಹಿಂದೇಟು ಹಾಕುವಂತಾಗಿದೆ.**

ಗ್ರಾಹಕರೊಬ್ಬರು ಹಣ ಪಾವತಿಸಲು ಮುಂದಾದಾಗ, 'ಛೋಟು ತಿವಾರಿ' ಎಂಬ ಹೆಸರು ಮೊಬೈಲ್‌ನಲ್ಲಿ ಡಿಸ್‌ಪ್ಲೇ ಆಗಿದೆ. ಆಗ ಅನುಮಾನಗೊಂಡು ಮಾಲೀಕ ಓಂವತಿ ಗುಪ್ತಾ ಪರಿಶೀಲಿಸಿದ್ದಾರೆ. ಸಿಸಿಟಿವಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಮುಖವಾಡ ಧರಿಸಿದ್ದ ಮೂವರು ವ್ಯಕ್ತಿಗಳು ಕ್ಯೂಆರ್ ಕೋಡ್ ಬದಲಾಯಿಸುತ್ತಿರುವುದು ಕಂಡು ಬಂದಿದೆ. ಕೂಡಲೇ ಪೊಲೀಸರಿಗೆ ಹಾಗೂ ಇತರೆ ಅಂಗಡಿ ಮಾಲೀಕರಿಗೆ ಮಾಹಿತಿ ಮುಟ್ಟಿಸಿದ್ದಾರೆ. ಇದರಿಂದ ದೊಡ್ಡ ಮೊತ್ತದ ವಂಚನೆ ತಪ್ಪಿದೆ. ಇದೇ ಮಾದರಿಯ ಘಟನೆ ಹತ್ತಿರದ ಪೆಟ್ರೋಲ್ ಬಂಕ್‌ನಲ್ಲೂ ಸಂಭವಿಸಿದೆ. ಹಳೆ ಕೋಡ್ ಮೇಲೆ, ಹೊಸ ಕ್ಯೂಆರ್ ಕೋಡ್‌ನ್ನು ಅಂಟಿಸಿರುವುದು ಬಂಕ್ ಸಿಬ್ಬಂದಿ ಗಮನಕ್ಕೆ ಬಂದಿದೆ.

ಛತ್ತರ್‌ಪುರ ಜಿಲ್ಲೆಯ ಖಜುರಾಹೊ ಪ್ರದೇಶದಲ್ಲಿ ಖದೀಮರು ಪೆಟ್ರೋಲ್ ಬಂಕ್‌ಗಳು ಸೇರಿ 6 ಅಂಗಡಿಗಳ ಕ್ಯೂಆರ್ ಕೋಡ್‌ಗಳನ್ನು ರಾತ್ರೋರಾತ್ರಿ ಬದಲಾಯಿಸಿದ್ದಾರೆ. ಗ್ರಾಹಕರು ಹಣ ಪಾವತಿಸಿದ್ದಾಗ, ವಂಚಕರ ಖಾತೆಗಳಿಗೆ ಜಮೆ ಆಗಿದೆ. ಹಣ ಪಾವತಿಯಾದ ಯಾವುದೇ ಮೆಸೇಜ್ ಬಾರದಿರುವುದು ಗಮನಿಸಿದ ಅಂಗಡಿ ಮಾಲೀಕರು ಅನುಮಾನಗೊಂಡು ಪರಿಶೀಲಿಸಿದ್ದಾರೆ.

ಆಗ ಕ್ಯೂಆರ್ ಕೋಡ್ ಬದಲಾಗಿರುವುದು ಬೆಳಕಿಗೆ ಬಂದಿದೆ ಪೊಲೀಸರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಮೂಲಕ ಹಣ ಹಾಕಿದ ಬಳಿಕ ಧ್ವನಿ ಸಂದೇಶ ಇಲ್ಲದ ವ್ಯಾಪಾರಿಗಳು ಮೋಸ ಹೋಗಿದ್ದಾರೆ.

# ನಿಲ್ಲದ ಲಾಸ್‌ಏಂಜಲೀಸ್ ಕಾಡ್ಗಿಚ್ಚು, 16 ಸಾವು, 1.66ಲಕ್ಷ ಮಂದಿ ಸ್ಥಳಾಂತರ



**ವಾಷಿಂಗ್ಟನ್:** ಅಮೆರಿಕದ ಲಾಸ್ ಏಂಜಲೀಸ್ನಲ್ಲಿ ಹಬ್ಬಿರುವ ಕಾಡ್ಗಿಚ್ಚು ದಿನೇ ದಿನೇ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ. ಈವರೆಗೆ 16 ಜೀವಗಳು ಬಲಿ ಯಾಗಿದ್ದು, 12,000 ಕಟ್ಟಡಗಳು ಸುಟ್ಟು ಕರಕಲಾಗಿವೆ. ಅಗ್ನಿ ನರ್ತನ ಮುಂದುವರಿದಿರುವ ಕಾರಣ ಇನ್ನೂ 57,000 ಕಟ್ಟಡಗಳು ಸುಟ್ಟು ಭಸವಾಗುವ, 1.66 ಲಕ್ಷ ಮಂದಿ ಸ್ಥಳಾಂತರವಾಗುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿ ಸಲು ಸತತ ಪ್ರಯತ್ನದಲ್ಲಿ ತೊಡಗಿದೆ. ಆದ್ರೆ ಮತ್ತೊಂದೆಡೆ 100 ಕಿಮೀ ವೇಗದಲ್ಲಿ ಬೀಸುತ್ತಿರುವ ಸಾಂಟಾ ಅನಾ ಚಂಡಮಾರುತ ಗಾಳಿಯು ಬೆಂಕಿ ಕೆನ್ನಾಲಿಗೆಯನ್ನು ಮತ್ತಷ್ಟು ಚಾಚಿಸುತ್ತಲೇ ಇದೆ. ಹೀಗಾಗಿ ಇನ್ನೂ ಸಾವಿರಾರು ಮನೆಗಳು ಹಾನಿಗೀಡಾಗುವ ಸಾಧ್ಯತೆಗಳಿವೆ.

ಜೊತೆಗೆ ಇನ್ನೂ ಒಂದೂವರೆ ಲಕ್ಷಕ್ಕೂ ಅಧಿಕ ಮಂದಿಯನ್ನು ಸ್ಥಳಾಂತರಿಸಬೇಕಾದ ಅನಿವಾರ್ಯತೆ ಎದುರಾಗಿದೆ.ಕ್ಯಾಲಿಫೋರ್ನಿಯಾದ ಪಾಲಿಸೇಡ್ಸ್ ಪ್ರದೇಶವೊಂದರಲ್ಲೇ 22,000ಕ್ಕೂ ಅಧಿಕ ಎಕರೆ ಭೂಪ್ರದೇಶ ಸುಟ್ಟು ಭಸವಾಗಿದೆ. 426 ಮನೆಗಳೂ ಸೇರಿದಂತೆ 5,000ಕ್ಕೂ ಹೆಚ್ಚು ಕಟ್ಟಡಗಳು ನಾಶವಾಗಿದೆ. ಸಾವಿನ ಸಂಖ್ಯೆ 16ಕ್ಕೆ ಏರಿಕೆಯಾಗಿದ್ದು, ಶ್ವಾನದಳದ ಮೂಲಕ ಶವಗಳ ಹುಟುಕಾಟ ಕಾರ್ಯನಡೆದಿದೆ.

ಜ.7ರಂದು ಹೊತ್ತಿಕೊಂಡ ಕಾಡ್ಗಿಚ್ಚಿನಿಂದ ಈವರೆಗೆ 39,000 ಎಕರೆ ಭೂಪ್ರದೇಶ ಹಾನಿಯಾಗಿದೆ. ಅಂದಾಜು 150 ಶತಕೋಟಿ ಡಾಲರ್‌ನಷ್ಟು ಆರ್ಥಿಕ ನಷ್ಟ ಉಂಡಾಗಿದೆ. ಬಿಸಿ ಗಾಳಿ, ಫೈರ್ನಾಡೋ (ಅಗ್ನಿ ಜ್ವಾಲೆ)ಗಳು ಮುಗಿಲೆತ್ತರಕ್ಕೆ ಚಿಮುತ್ತಿದ್ದು, ವ್ಯಾಪ್ತಿಯನ್ನು ವಿಸ್ತರಿಸುತ್ತಲೇ ಇದೆ. ಅಮೆರಿಕದ ಇತಿಹಾಸದಲ್ಲೇ ಇದು ಕಂಡೂ ಕೇಳರಿಯದ ಕಾಡ್ಗಿಚ್ಚು ಎಂದು ಅಧಿಕಾರಿಗಳು ಬಣ್ಣಿಸಿದ್ದಾರೆ.

ಈಗಾಗಲೇ 1.53 ಲಕ್ಷ ಮಂದಿಯನ್ನು ಸ್ಥಳಾಂತರಿಸಲು ಆದೇಶ ನೀಡಲಾಗಿದೆ. ಅಲ್ಲದೇ ಇನ್ನೂ 57,000 ಕಟ್ಟಡಗಳು ಅಪಾಯದಲ್ಲಿವೆ. 1.66 ಲಕ್ಷ ಮಂದಿ ಸ್ಥಳಾಂತರಿಸುವ ಸಾಧ್ಯತೆಗಳು ಹೆಚ್ಚಾಗಿವೆ ಎಂದು ತಿಳಿದುಬಂದಿದೆ. ಈ ಮಧ್ಯೆ ಕೆನಡಾ ಹಾಗೂ ಮೆಕ್ಸಿಕೋ ದೇಶಗಳು ಕ್ಯಾಲಿಫೋರ್ನಿಯಾದಲ್ಲಿ ಕಾಡ್ಗಿಚ್ಚು ನಂದಿಸಲು ನೆರವು ಚಾಚಿವೆ.

# ಶಬರಿಮಲೆ ಅಭಿವೃದ್ಧಿಗೆ 1,033 ಕೋಟಿ ರೂ. ಮಾಸ್ಟರ್ ಪ್ಲ್ಯಾನ್



**ಶಬರಿಮಲೆ:** ಶ್ರೀಕ್ಷೇತ್ರ ಶಬರಿಮಲೆ ಮಾಸ್ಟರ್ ಪ್ಲ್ಯಾನ್ ಯೋಜನೆಯಂತೆ ಸನ್ನಿಧಾನ ಮತ್ತು ಪಂಪಾದ ಸಮಗ್ರ ಅಭಿವೃದ್ಧಿಗೆ ಸಿದ್ಧಪಡಿಸಲಾದ 1033.62 ಕೋಟಿ ರೂ.ಗಳ ಎರಡು ಪ್ರತ್ಯೇಕ ಲೇಔಟ್ ಯೋಜನೆಗಳಿಗೆ ಕೇರಳ ಸಚಿವ ಸಂಪುಟ ಅನುಮೋದನೆ ನೀಡಿದೆ. ಸನ್ನಿಧಾನಕ್ಕೆ ಆಧುನಿಕ ಸಾರಿಗೆ ವ್ಯವಸ್ಥೆ, ಯಾತ್ರಾರ್ಥಿಗಳಿಗೆ ವಿಶ್ರಾಂತಿ ಪಡೆಯಲು ಆಧುನಿಕ ಸೌಲಭ್ಯಗಳು ಅಭಿವೃದ್ಧಿಯ ಗುರಿಯೊಂದಿಗೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಮಾರ್ಗಸೂಚಿಯಂತೆ ಭೂಸ್ವಾಧೀನ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

14 ವರ್ಷಗಳಲ್ಲಿ ಪೂರ್ಣಗೊಳ್ಳುವ ಲೇಔಟ್ ಯೋಜನೆಯಂತೆ ಸನ್ನಿಧಾನ ಪ್ರದೇಶವನ್ನು 8 ವಲಯಗಳಾಗಿ ವಿಂಗಡಿಸಲಾಗಿದೆ. ಸನ್ನಿಧಾನ ಮಾರ್ಗಕ್ಕೆ ಸಮಾನಾಂತರವಾಗಿ ತುರ್ತು ಸಂದರ್ಭಗಳಲ್ಲಿ ಬಳಸಬಹುದಾದ ಸಮಾನಾಂತರ ರಸ್ತೆ ನಿರ್ಮಾಣ, ಮಕರ ಜ್ಯೋತಿ ವೀಕ್ಷಣೆಗೆ ಭಕ್ತರ ಸುರಕ್ಷತೆ ಪರಿಗಣಿಸಿ ಎರಡು ತೆರೆದ ಪ್ಲಾಜಾಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಸನ್ನಿಧಾನದ ಸಮಗ್ರ ಅಭಿವೃದ್ಧಿಯ 2028-33ರ ಕಾಲಾವಧಿಯ ಮೊದಲ ಹಂತದ ಕಾಮಗಾರಿಗೆ 600.47 ಕೋಟಿ ರೂ., 2034-39ರವರೆಗಿನ ಎರಡನೇ ಹಂತದ ಯೋಜನೆಗೆ 100.02 ಕೋಟಿ ಮತ್ತು ಮೂರನೇ ಹಂತಕ್ಕೆ 77.68 ಕೋಟಿ ಸಹಿತ ಒಟ್ಟು 778.17 ಕೋಟಿ ರೂ. ಅನುಮತಿಸಲಾಗಿದೆ.

> **ಪಂಪಾ ಮತ್ತು ಸನ್ನಿಧಾನದ ಸಮಗ್ರ ಅಭಿವೃದ್ಧಿಯ ಲೇಔಟ್ ಯೋಜನೆಗೆ ಅಂಗೀಕಾರ ಲಭಿಸಿದ ಹಿನ್ನೆಲೆಯಲ್ಲಿಶೀಘ್ರವೇ ಅಭಿವೃದ್ಧಿ ಕಾಮಗಾರಿ ಆರಂಭಿಸಲಾ ಗುವುದು. ಹೆಚ್ಚುವರಿ ಹಣ ಅಗತ್ಯವಿದ್ದರೆ ಕೇಂದ್ರ ಸರಕಾರದ ಮೊರೆ ಹೋಗಲಾಗುವುದು.**
>
> **-ಎಸ್. ಪ್ರಶಾಂತ್, ಟಿಡಿಬಿ ಅಧ್ಯಕ್ಷ**

**ನಿಲಕ್ಕಲ್ ಬೇಸ್ ಕ್ಯಾಂಪ್:** ನಿಲಕ್ಕಲ್ ಪ್ರದೇಶವನ್ನು ಪರಿಪೂರ್ಣ ಬೇಸ್ ಕ್ಯಾಂಪ್ ಆಗಿ ಪರಿಗಣಿಸಿ ವಸತಿ, ಪಾರ್ಕಿಂಗ್ ಮತ್ತು ಸಂಬಂಧಿತ ಸೌಲಭ್ಯಗಳನ್ನು ಒದಗಿಸಲಾಗುವುದು. ಸನ್ನಿಧಾನದಲ್ಲಿ ತಂತ್ರಿಗಳು ಸೇರಿದಂತೆ ಅಗತ್ಯ ವ್ಯಕ್ತಿಗಳ ಉಪಸ್ಥಿತಿಗೆ ಮಾತ್ರ ಅವಕಾಶ ನೀಡಲಾಗುವುದು. ಪರಿಸರ ಸಂರಕ್ಷಣೆ ಗುರಿಯಲ್ಲಿ ಚಾರಣ ಮಾರ್ಗದ ಎರಡೂ ಬದಿ ಬಫರ್ ಝೋನ್ ನಿರ್ಮಿಸಲಾಗುವುದು.

**ಟಿಡಿಬಿಯ ಸ್ವಂತ ಜಾಗ:** ಪಂಪಾ ಮತ್ತು ಸನ್ನಿಧಾನ ತಿರುವಿದಾಂಕೂರ್ ದೇವಸ್ವಂ ಮಂಡಳಿಯ (ಟಿಡಿಬಿ) ಒಡೆತನದಲ್ಲಿರುವುದರಿಂದ ಇಲ್ಲಿ ಸ್ವತಂತ್ರ ಅಭಿವೃದ್ಧಿ ಕಾರ್ಯಸಾಧ್ಯವಾಗಲಿದೆ. ಟಿಡಿಬಿ ನಿಲಕ್ಕಲ್‌ನಲ್ಲಿ212 ಎಕರೆ ಮತ್ತು ಸನ್ನಿಧಾನದಲ್ಲಿ 90 ಎಕರೆ ಜಾಗ ಹೊಂದಿದೆ. ಪಂಪಾದಲ್ಲೂ ಜಾಗವಿದೆ.

### ಪಂಪಾ, ಚಾರಣ ಮಾರ್ಗ, ಟ್ರಕ್ ರೂಟ್ ಅಭಿವೃದ್ಧಿ

**ಪಂಪಾದ ಸಮಗ್ರ ಅಭಿವೃದ್ಧಿ, ಪಂಪಾ ಚಾರಣ ಮಾರ್ಗ ಮತ್ತು ಟ್ರಕ್ ರೂಟ್ ಅಭಿವೃದ್ಧಿ ಯೋಜನೆಗೆ 255.45 ಕೋಟಿ ರೂ. ಅನುಮತಿ ನೀಡಲಾಗಿದೆ. ಮೊದಲ ಹಂತದ ಅಭಿವೃದ್ಧಿಗೆ 184.75 ಕೋಟಿ ಹಾಗೂ ಎರಡನೇ ಹಂತಕ್ಕೆ 22.73 ಕೋಟಿ ರೂ. ಅನುಮತಿಸಲಾಗಿದೆ. ಟ್ರಕ್ ರೂಟ್ ಅಭಿವೃದ್ಧಿಗೆ ಮೊದಲ ಹಂತದಲ್ಲಿ 32.88 ಕೋಟಿ ಹಾಗೂ ಎರಡನೇ ಹಂತದಲ್ಲಿ15.50 ಕೋಟಿ ಖರ್ಚು ಮಾಡಲಾಗುವುದು.**

# ಪತಿಯಿಂದ ದೂರವಿರಲು ಸಕಾರಣಗಳಿದ್ದರೆ ಜೀವನಾಂಶ ಪಡೆಯಲು ಅರ್ಹಳು

**ನವದೆಹಲಿ:** ಮಹಿಳೆ ತನ್ನ ಪತಿಯೊಂದಿಗೆ ವಾಸಿಸಲು ನಿರಾಕರಿಸಲು ಸರಿಯಾದ ಕಾರಣಗಳಿದ್ದರೆ, ಪತಿಯಿಂದ ಜೀವನಾಂಶ ಪಡೆಯಲು ಅರ್ಹಳು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ. ಸುಪ್ರೀಂಕೋರ್ಟ್ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ಕುಮಾರ್ ಅವರ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಂಗಾತಿಯೊಂದಿಗೆ ಸಹಬಾಳ್ವೆ ಮಾಡಬೇಕೆಂಬ ತೀರ್ಪನ್ನು ಪಾಲಿಸದ ನಂತರವೂ ಸಹ ಮಹಿಳೆಗೆ ತನ್ನ ಪತಿಯಿಂದ ಜೀವನಾಂಶದ ಹಕ್ಕನ್ನು ನೀಡಬಹುದು ಎಂದು ತೀರ್ಪು ನೀಡಿದೆ. ಜಾರ್ಖಂಡ್ ವಿಚ್ಛೇದಿತ ದಂಪತಿಗಳು 2014ರ ಮೇ 1ರಂದು ವಿವಾಹವಾಗಿದ್ದರು. ಆದರೆ ಆಗಸ್ಟ್ 2015ರಲ್ಲಿ ಬೇರ್ಪಟ್ಟ ಪ್ರಕರಣದಲ್ಲಿ ಪೀಠವು ಅಧಿಕೃತ ತೀರ್ಪು ನೀಡಿತು. ವೈವಾಹಿಕ ಹಕ್ಕುಗಳ ಮರುಸ್ಥಾಪನೆಗಾಗಿ ಪತಿ ರಾಂಚಿಯ ಕೌಟುಂಬಿಕ ನ್ಯಾಯಾಲಯದ ಮೊರೆ ಹೋದರು ಮತ್ತು 2015ರ ಆಗಸ್ಟ್ನಲ್ಲಿ ಆಕೆ ಗಂಡನ ಮನೆಯನ್ನು ತೊರೆದಿದ್ದಳು. ಅವಳನ್ನು ಮರಳಿ ಕರೆತರಲು ಪುನರಾವರ್ತಿತ ಪ್ರಯತ್ನಗಳ ಹೊರತಾಗಿಯೂ ನಂತರ ಹಿಂತಿರುಗಲಿಲ್ಲ ಎಂದು ಪತಿ ಹೇಳಿದ್ದ. ಕಾರು ಖರೀದಿಸಲು 5 ಲಕ್ಷ ರೂ. ಹಣ ಕೊಡಬೇಕು ಎಂದು ಪತಿ ಪೀಡಿಸಿ ಚಿತ್ರಹಿಂಸೆ ನೀಡುತ್ತಿದ್ದ ಎಂದು ಪತ್ನಿ ಹೇಳಿದ್ದಾಳೆ. ಆತನಿಗೆ ವಿವಾಹೇತರ ಸಂಬಂಧವಿದ್ದು, 2015ರ ಜನವರಿ 1ರಂದು ತನಗೆ ಗರ್ಭಪಾತವಾಗಿತ್ತು. ಆದರೆ ಪತಿ ತನ್ನನ್ನು ನೋಡಲು ಬರಲಿಲ್ಲ ಎಂದು ಹೇಳಿದ್ದಾಳೆ.ಕುಟುಂಬ ನ್ಯಾಯಾಲಯವು ತಿಂಗಳಿಗೆ 10,000 ರೂ ಜೀವನಾಂಶವನ್ನು ಪತ್ನಿಗೆ ಆಕೆಯ ಪತಿಯಿಂದ ಪಾವತಿಸಲು ಆದೇ ಶಿಸಿದೆ. ಆದರೆ ಜೀವನಾಂಶ ಕೊಡಬೇಕು. ಆಕೆ ಮನೆಗೆ ಬರಬೇಕೆಂದು ಕೋರ್ಟ್ ತೀರ್ಪು ನೀಡಿದ್ದರೂ ಆಕೆ ಮನೆಗೆ ಬಂದಿಲ್ಲ ಎಂದು ಪತಿ ಹೈಕೋರ್ಟ್ ಮೆಟ್ಟಿಲೇರಿದ್ದ.

ಪತ್ನಿ ಜೀವನಾಂಶ ಪಡೆಯಲು ಅರ್ಹಳಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿತ್ತು. ಆದೇಶದಿಂದ ನೊಂದ ಪತ್ನಿ ಸುಪ್ರೀಂಕೋರ್ಟ್ನಲ್ಲಿ ಈ ಆದೇಶವನ್ನು ಪ್ರಶ್ನಿಸಿದ್ದು, ಪತ್ನಿ ದೂರವಿದ್ದರೂ ಜೀವನಾಂಶ ಪಾವತಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

### ಜೀವನಾಂಶಕ್ಕಾಗಿ ಅರ್ಜಿ



**ಈ ಮೊದಲು ನನಗೆ ವಾಷ್ರೂಂ ಬಳಸಲು ಕೂಡ ಅನುಮತಿ ಇರಲಿಲ್ಲ, ಹಾಗೆಯೇ ಮನೆಯ ಗ್ಯಾಸ್ ಬಳಸಲು ಅನುಮತಿ ನೀಡಿದರೆ ಮನೆಗೆ ಬರುತ್ತೇನೆ ಎಂದು ಹೇಳಿದ್ದಳು. ಕೌಟುಂಬಿಕ ನ್ಯಾಯಾಲಯವು 2022ರಲ್ಲಿ ಪತಿಯೊಂದಿಗೆ ವಾಸಿಸುವಂತೆ ಆದೇಶ ನೀಡಿತ್ತು. ಆಕೆ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದಳು.**

# ಹಸೀನಾ ಇಚ್ಛೆಪಟ್ಟಷ್ಟುದಿನ ಭಾರತದಲ್ಲಿರಲು ಅವಕಾಶ ಕೊಡಿ

**ಕೋಲ್ಕತ್ತಾ:** ಪದಚ್ಯುತ ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಎಲ್ಲಿಯವರೆಗೆ ಭಾರತದಲ್ಲಿ ಇರಲು ಇಚ್ಛಿಸುತ್ತಾರೂ ಬೇಕಾ ದರೂ ಅಲ್ಲಿಯವರೆಗೆ ಅವಕಾಶನೀಡಬೇಕು ಎಂದು ಮಾಜಿ ರಾಜತಾಂತ್ರಿಕ, ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ಹೇಳಿದ್ದಾರೆ. ಇಲ್ಲಿ ನಡೆಯುತ್ತಿರುವ 16ನೇ ಅಪೀಜಯ್ ಕೋಲ್ಕತ್ತಾ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಮಾತನಾಡಿದ ಅವರು ಭಾರತೀಯ ವಿದೇಶಾಂಗ ಕಾರ್ಯ ದರ್ಶಿ ವಿಕ್ರಮ್ ಮಿಸ್ರಿ ಕಳೆದ ತಿಂಗಳು ಢಾಕಾಗೆ ತೆರಳಿ ಅಲ್ಲಿನ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಕ್ಕೆ ಸಂತಸ ವ್ಯಕ್ತಪಡಿಸಿ, ಮಾತುಕತೆ ನಿರಂತರವಾಗಿ ನಡೆಯಬೇಕು ಮತ್ತು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಜೊತೆ ಸಂಪರ್ಕ ಸ್ಥಾಪಿಸುವ ಅಗತ್ಯವಿದೆ ಎಂದರು.

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿಯಾಗುತ್ತಿರುವುದು ನಿಜ, ಆದರೆ ಹೆಚ್ಚಾಗಿ ಅವರು ಹಸೀನಾ ಬೆಂಬಲಿಗರು ಎಂದು ಕಾಂಗ್ರೆಸ್ ನಾಯಕ ಹೇಳಿದರು.

ಅನೇಕ ಸಂಘರ್ಷಗಳು ರಾಜಕೀಯ ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕೆ ಸಂಬಂಧಿಸಿದೆ ಎಂದು ಹೇಳಿದರು.

ಇದಕ್ಕೂ ಮೊದಲು ಪ್ರಶ್ನೋತ್ತರ ಅವಧಿಯಲ್ಲಿ ಅಯ್ಯರ್ ಅವರು, ಪಾಕಿಸ್ತಾನಿಗಳು ಭಾರತೀಯರಂತೆಯೇ ಇದ್ದಾರೆ, ಆದರೆ ವಿಭಜನೆಯ ಅಪಘಾತ ಮಾತ್ರ ಅವರನ್ನು ಬೇರೆ ದೇಶವನ್ನಾಗಿ ಮಾಡಿತು ಎಂದು ಅಭಿಪ್ರಾಯಪಟ್ಟರು. ಪಾಕಿಸ್ತಾನವು ಭಯೋತ್ಪಾದನೆಯನ್ನು ಹರಡುವ ದೇಶವಾಗಿದೆ ಆದರೆ ಅದು ಭಯೋತ್ಪಾದನೆಗೆ ಬಲಿಯಾಗಿದೆ ಎಂದು ಅಯ್ಯರ್ ಹೇಳಿದರು. ಪಾಕಿಸ್ತಾನ ಹಿಂದೆ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅನ್ನು ಅಧಿಕಾರಕ್ಕೆ ತರಬಹುದೆಂದು ಭಾವಿಸಿದ್ದರು, ಆದರೆ ಇಂದು ಅವರ ಏಕೈಕ ದೊಡ್ಡ ಬೆದರಿಕೆ ಅಫ್ಘಾನಿಸ್ತಾನದಲ್ಲಿ ತಾಲಿಬಾಆಗಿದೆ ಎಂದು ಅವರು ಹೇಳಿದರು.



> **ಶೇಖ್ ಹಸೀನಾ ನಮಗೆ ಸಾಕಷ್ಟು ಒಳ್ಳೆಯದನ್ನು ಮಾಡಿದ್ದಾರೆ ಎಂದು ನಾವು ಎಂದಿಗೂ ಒಪ್ಪುವುದಿಲ್ಲ ಆದರೆ ಆಕೆಗೆ ಆಶ್ರಯ ನೀಡಿರುವುದು ನನಗೆ ಖುಷಿ ತಂದಿದೆ. ಅಕೆ ಬಯಸಿದಷ್ಟು ಕಾಲ ನಾವುಆತಿಥ್ಯ ವಹಿಸಬೇಕು ಎಂದು ನಾನು ಭಾವಿಸುತ್ತೇನೆ. ಅದು ಅವಳ ಜೀವನದುದ್ದಕ್ಕೂ ಆಗಿದ್ದರೂ ಸಹ ಪರವಾಗಿಲ್ಲ ಎಂದು ಹೇಳಿದರು.**

# ಸಂಸದೀಯ ಕ್ಷೇತ್ರದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಸ್ಥಾಪನೆ

**ಗುಣಾ:** ದೇಶದ ಎಲ್ಲಾ 543 ಲೋಕಸಭಾ ಕ್ಷೇತ್ರಗಳಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ತೆರೆಯಲಾಗುವುದು ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ಅವರು ತಾವು ಪ್ರತಿನಿಧಿಸುವ ಸಂಸದೀಯ ಕ್ಷೇತ್ರವಾದ ಗುನಾದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಈ ವರ್ಷ ಮಧ್ಯಪ್ರದೇಶದಲ್ಲಿ ಆರು ಹೊಸ ಪಾಸ್‌ಪೋರ್ಟ್ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಹೇಳಿದರು. ಸೇವೆಗಳನ್ನು ವಿಸ್ತರಿಸುವ ಉದ್ದೇಶದಿಂದ ಪ್ರತಿ ಸಂಸ ದೀಯ ಕ್ಷೇತ್ರದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಸ್ಥಾಪಿಸಲು ಪ್ರಧಾನಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. ಅಂಚೆ ಇಲಾಖೆಯು ವಿದೇಶಾಂಗ ವ್ಯವ ಹಾರಗಳ ಸಚಿವಾಲಯದ ಸಹಯೋಗದೊಂದಿಗೆ ಈ ನಿರ್ಣಯವನ್ನು ಸಾಕಾರಗೊಳಿಸಲು ಬದ್ಧವಾಗಿದ್ದೇವೆ ಎಂದು ಅವರು ಹೇಳಿದರು. ದೇಶಾದ್ಯಂತ 6,000 ಅಂಚೆ ಕಚೇರಿಗಳನ್ನು ತೆರೆಯಲಾಗಿದೆ.ನಾವು ದೇಶದಲ್ಲಿ ಕೈಯಿಂದ ಪತ್ರಗಳನ್ನು ಬರೆಯುವ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಬೇಕು ಏಕೆಂದರೆ ಅದು ಹೃದಯದ ನಿಜವಾದ ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ಅಂಚೆ ಕಚೇರಿ ಸೇವೆಗಳಲ್ಲಿ ಹಲವಾರು ತಾಂತ್ರಿಕ ಬದಲಾವಣೆಗಳು ನಡೆದಿವೆ ಎಂದು ಸಿಂಧಿಯಾ ತಿಳಿಸಿದರು. ಗುನಾದ ಜನರು ತಮ ಪಾಸ್‌ಪೋರ್ಟ್ ಮಾಡಲು ಭೋಪಾಲ್ ಮತ್ತು ಗ್ವಾಲಿಯರ್‌ಗೆ ಹೋಗಬೇಕಾಗಿತ್ತು, ಆದರೆ ಪಾಸ್‌ಪೋರ್ಟ್ ಸೇವಾ ಕೇಂದ್ರವು ಅವರ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂದು ಅವರು ಹೇಳಿದರು.



# ರೈಲ್ವೆ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆಗಾಗಿ ವಿಧಿಸಿದ್ದ ಕರ್ಫ್ಯೂ ವಾಪಸ್



**ಬಾಲಸೋರ್:** ಬಾಲಸೋರ್‌ನಲ್ಲಿ ರೈಲ್ವೆ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆಯ ಸಂದರ್ಭದಲ್ಲಿ ಯಾವುದೇ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ತಪ್ಪಿಸಲು ಮೊದಲು ವಿಧಿಸಲಾದ ಕರ್ಫ್ಯೂ ಹಿಂಪಡೆಯಲಾಗಿದೆ. ಶನಿವಾರ ಮತ್ತು ಭಾನುವಾರ ಎರಡು ದಿನಗಳ ಕಾಲ ಕರ್ಫ್ಯೂ ವಿಧಿಸಲಾಗಿತ್ತು. ಪರಿಸ್ಥಿತಿ ಅವಲೋಕಿಸಿ ಇಂದು ಬೆಳಿಗ್ಗೆ ಹೊಸ ಆದೇಶ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಪಶ್ಚಿಮ್ ಮೆದಿನಿಪುರ್ ಜಿಲ್ಲೆಯ ನಾರಾಯಣಗಢ್‌ನಿಂದ ಬಾಲಸೋರ್ ಮೂಲಕ ಭದ್ರಕ್‌ಗೆ ಮೂರನೇ ಮಾರ್ಗದ ನಿರ್ಮಾಣಕ್ಕೆ ಕೆಲವರು ಅಡ್ಡಿಪಡಿಸಿ ರೈಲ್ವೆ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡುದ್ದರಿಂದ ತೆರವು ಕಾರ್ಯಾಚರಣೆ ಅಗತ್ಯವಾಗಿತ್ತು.

ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸಂಪರ್ಕವನ್ನು ಹೆಚ್ಚಿಸಲು ಹೊಸ ರೈಲು ಮಾರ್ಗ ನಿರ್ಮಾಣ ಕಾರ್ಯ ಪ್ರಗತಿ ಹಂತದಲ್ಲಿದೆ ಎಂದು ಅಧಿಕಾರಿ ಹೇಳಿದರು. ಜಿಲ್ಲಾಡಳಿತವು ಹಿಂದಿನ ಆದೇಶದಲ್ಲಿ,ಅರದ್‌ಬಜಾರ್‌ನಿಂದ ತರಕಾರಿ ಮಾರುಕಟ್ಟೆ, ಹರಿಪುರದಿಂದ ದರ್ಜಿ ಪೋಖಾರಿ ಚಾಕ್, ಕಾಸಿಮಿಲಾ ಸೇತುವೆಯಿಂದ ಫುಲಾಡಿ ಚಾಕ್, ನುಬಜಾರ್ ರೈಲ್ವೆ ಗೇಟ್, ಗೊಲಪೋಳ ಮತ್ತು ನುಬಜಾರ್ ತರಕಾರಿ ಮಾರುಕಟ್ಟೆಯ ಎರಡೂ ಬದಿಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ.

> **ಜನವರಿ 11 ರಂದು ಬೆಳಿಗ್ಗೆ 4 ರಿಂದ ರಾತ್ರಿ 10 ರವರೆಗೆ ಮತ್ತು ಜನವರಿ 12 ರಂದು ಬೆಳಿಗ್ಗೆ 4 ರಿಂದ ರಾತ್ರಿ 10ರವರೆಗೆ ಇದು ಜಾರಿಯಲ್ಲಿತ್ತು. ನಾವು ಗೊತ್ತುಪಡಿಸಿದ ತೆರವು ಪ್ರದೇಶವನ್ನು ಸುತ್ತುವರೆದಿದ್ದೇವೆ ಜನರು ಸ್ವಯಂಪ್ರೇರಣೆಯಿಂದ ತಮ ಸ್ಥಳಗಳನ್ನು ಖಾಲಿ ಮಾಡುತ್ತಿದ್ದಾರೆ. ಯಾವುದೇ ಕಡೆಯಿಂದ ಯಾವುದೇ ಪ್ರತಿರೋಧವಿಲ್ಲ. ಸುಮಾರು 238 ಮನೆಗಳನ್ನು ಕೆಡವಬೇಕಿತ್ತು. ಸುಮಾರು 2,000 ಜನರು ಅಲ್ಲಿ ತಂಗಿದ್ದರು ಎಂದು ಅವರು ಹೇಳಿದರು**

# 64 ಮಂದಿಯಿಂದ ದಲಿತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

## ಕೇರಳದ ಪತ್ತನಂತಿಟ್ಟದಲ್ಲಿ ದಲಿತ ಬಾಲಕಿ ಮೇಲೆ 64 ಮಂದಿಯಿಂದ ಲೈಂಗಿಕ ದೌರ್ಜನ್ಯ, 14 ಮಂದಿ ಬಂಧನ



**ಪತ್ತನಂತಿಟ್ಟ:** ಪತ್ತನಂತಿಟ್ಟದಲ್ಲಿ ದಲಿತ ಬಾಲಕಿ ಮೇಲೆ ಕಳೆದ ಐದು ವರ್ಷಗಳಲ್ಲಿ ಕ್ರೀಡಾಪಟುಗಳು, ತರಬೇತುದಾರರು ಸಹಿತ 64 ಮಂದಿ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣ ಬೆಳಕಿಗೆ ಬಂದಿದೆ.

ಈ ಸಂಬಂಧ ಪ್ಲಸ್ ಟು ವಿದ್ಯಾರ್ಥಿ ಸ್ನೇಹಿತ, ಮೀನು ವ್ಯಾಪಾರಿಗಳಾದ ಇಬ್ಬರು ಸಹೋದರರ ಸಹಿತ 14 ಮಂದಿಯನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಹಿಳಾ ಆಯೋಗ ವರದಿ ಕೇಳಿದೆ. ಬಾಲಕಿಗೆ ಕೌನ್ಸೆಲಿಂಗ್ ನೀಡಿದಾಗ ದೌರ್ಜನ್ಯ ನಡೆಸಿರುವ ಮಾಹಿತಿ ಬಹಿರಂಗವಾಗಿದೆ. ಸದ್ಯ ಬಾಲಕಿ ಸಿಡಬ್ಲ್ಯೂಸಿ ರಕ್ಷಣೆಯಲ್ಲಿದ್ದಾರೆ. ಬಾಲಕಿ ಮೇಲೆ ಕಳೆದ 5 ವರ್ಷಗಳಲ್ಲಿ64 ಮಂದಿ ಲೈಂಗಿಕ ದೌರ್ಜನ್ಯ ನಡೆಸಿದ್ದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಪ್ರಕರಣದಲ್ಲಿ ಹೊರ ಜಿಲ್ಲೆಯವರೂ ಆರೋಪಿಗಳಾಗಿರುವ ಸಾಧ್ಯತೆ ಇದೆ.

ಬಾಲಕಿ 34 ಮಂದಿಯ ಹೆಸರನ್ನು ತನ್ನ ಡೈರಿಯಲ್ಲಿ ಬರೆದಿದ್ದಾಳೆ. ಬಾಲಕಿ ತಂದೆಯ ಮೊಬೈಲ್ ಫೋನ್ ಬಳಸಿದ್ದು, ಉಳಿದ ಆರೋಪಿಗಳನ್ನು ಆಕೆಯ ತಂದೆಯ ಮೊಬೈಲ್ ಫೋನ್ ಕಾಂಟ್ಯಾಕ್ಟ್ ಲಿಸ್ಟ್ ಮೂಲಕ ಪತ್ತೆ ಹಚ್ಚಲಾಗಿದೆ.

ಹೆಚ್ಚಿನ ಆರೋಪಿಗಳು 20 ರಿಂದ 30 ವರ್ಷದವರಾಗಿದ್ದು, ಒಬ್ಬ ಪೋಕ್ಸೊ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದಾನೆ.

2019 ರಲ್ಲಿ ಬಾಲಕಿಯ ಸ್ನೇಹಿತ ಮೊದಲು ದೌರ್ಜನ್ಯ ನಡೆಸಿದ್ದಾನೆ. ಬಾಲಕಿಯ ತಂದೆಯ ಫೋನ್ ಮೂಲಕ ಸಂಪರ್ಕಿಸಿದ್ದ ಆರೋಪಿ ಆಕೆಯನ್ನು ಹಲವೆಡೆ ಕರೆದೊಯ್ದು ದೌರ್ಜನ್ಯ ಎಸಗಿದ್ದಾನೆ. ಈತ ಬಾಲಕಿಯ ನಗ್ನ ಚಿತ್ರ ಮತ್ತು ವಿಡಿಯೋ ತೆಗೆದು ತನ್ನ ಸ್ನೇಹಿತರಿಗೆ ಕಳಿಸಿದ್ದಾನೆ. ಐವರು ಆರೋಪಿಗಳನ್ನು ಬಂಧಿ ಸಲಾಗಿದೆ. ಇವರಲ್ಲಿ ನಾಲ್ವರು ಸಾಮೂ ಹಿಕ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ. ಇವರ ವಿರು ದ್ಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ಯಡಿ ಪ್ರಕರಣ ದಾಖಲಾಗಿದೆ.

ಪತ್ತನಂತಿಟ್ಟದ ಚುಟ್ಟಿಪ್ಪಾರದಲ್ಲೂ ಬಾಲಕಿಯ ಸ್ನೇಹಿತರು, ಕ್ರೀಡಾಪಟು ಗಳು ತರ ಬೇತುದಾರರು ಮತ್ತು ಸ್ಥಳೀಯರು ದೌರ್ಜನ್ಯ ನಡೆಸಿದ್ದಾರೆ ಎಂದು ಸಿಡಬ್ಲ್ಯೂಸಿ ಅಧ್ಯಕ್ಷ ಎನ್.ರಾಜೀವ್ ತಿಳಿಸಿದ್ದಾರೆ.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕೇ ರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ. ಕೇರಳದಲ್ಲಿ ನಡೆಯಬಾರದ ಘಟನೆ ನಡೆದಿದೆ ಎಂದು ಸಚಿವೆ ಜೆ.ಚಿಂಜುರಾಣಿ ಪ್ರತಿಕ್ರಿಯಿಸಿದ್ದಾರೆ.



**ಪೋಕ್ಸೊ ಕೇಸ್ ವಕೀಲರಿಗೆ ಮಾನವೀಯತೆ ಇರಲಿ; ಸುಪ್ರೀಂ:** ಪ್ರತ್ಯೇಕ ಪ್ರಕರಣವೊಂದರಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳ ಪರ ವಕೀಲರು ಸ್ವಲ್ಪವಾದರೂ ಮಾನವೀಯತೆ ಯಿಂದ ವರ್ತಿಸಬೇಕು. ನೊಂದವರನ್ನು ವಿಚಾರಣೆಗೆ ಒಳಪಡಿಸುವಾಗ ಮಾನವೀಯತೆ ರೂಢಿಸಿಕೊಳ್ಳ ಬೇಕು, ಎಂದು ಸುಪ್ರೀಂ ಕೋರ್ಟ್ ನ್ಯಾ.ಎ.ಎಸ್.ಓಕಾ ಹಾಗೂ ನ್ಯಾ.ಆಗಸ್ಟಿನ್ ಜಾರ್ಜ್ ಮಸಿಹ್ ಅವರು ವಕೀಲ ಸಮುದಾಯಕ್ಕೆ ಕಿವಿಮಾತು ಹೇಳಿದ್ದಾರೆ.

ನಾಲ್ಕು ವರ್ಷದ ಬಾಲಕಿ ಮೇಲೆ ನಡೆದಿದ್ದ ದೌರ್ಜನ್ಯ ಪ್ರಕರಣದಲ್ಲಿಜೀವಾವಧಿ ಶಿಕ್ಷೆ ನೀಡಿದ್ದ ಅಧೀನ ನ್ಯಾಯಾಲಯಗಳು ನೀಡಿದ್ದ ತೀರ್ಪು ಪ್ರಶ್ನಿಸಿ ದೋಷಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ವಕೀಲರಿಗೆ ಮಾನವೀಯತೆ ಪಾಠ ಮಾಡಿದ ನ್ಯಾಯಪೀಠ, ವಿಚಾರಣೆ ಹೆಸರಲ್ಲಿ ಪುಟ್ಟ ಬಾಲಕಿಗೆ ಅನಗತ್ಯವಾಗಿ 150 ಪ್ರಶ್ನೆ ಕೇಳಿರುವುದು ಅಸಮಂಜಸ ಕ್ರಮವಾಗಿದೆ. ಶೇ.90 ರಷ್ಟು ಅಪ್ರಸ್ತುತ ಪ್ರಶ್ನೆ ಕೇಳಲಾಗಿದೆ. ಅರ್ಹತೆ ಮೇಲೆ ಇದು ನಿಮಗೆ ಉತ್ತಮ ಪ್ರಕರಣವಾಗಿರಬಹುದು. ಆದರೆ, ಮುಗ್ಧ ಬಾಲೆ ವಿಚಾರಣೆ ವೇಳೆ ಸ್ವಲ್ಪವಾದರೂ ಮಾನವೀಯತೆ ತೋರಿಸಬೇಕಲ್ಲವೇ, ಎಂದು ಆರೋಪಿ ಪರ ವಕೀಲರಿಗೆ ಪ್ರಶ್ನೆ ಮಾಡಿದರು.

**ಕೇರಳದಲ್ಲಿ ಅಮಾನವೀಯ ಘಟನೆ**

> **ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಇವರಲ್ಲಿ ನಾಲ್ವರು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ. ಇವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆಯಡಿ ಪ್ರಕರಣ ದಾಖಲಾಗಿದೆ. ಪತ್ತನಂತಿಟ್ಟದ ಚುಟ್ಟಿಪ್ಪಾರದಲ್ಲೂ ಬಾಲಕಿಯ ಸ್ನೇಹಿತರು, ಕ್ರೀಡಾಪಟುಗಳು ತರಬೇತುದಾರರು ಮತ್ತು ಸ್ಥಳೀಯರು ದೌರ್ಜನ್ಯ ನಡೆಸಿದ್ದಾರೆ.**

## ಮಿನಿ ನ್ಯೂಸ್

### ಟ್ರಂಪ್ ಪ್ರಮಾಣವಚನ ಸಮಾರಂಭದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ: ಜೈಶಂಕರ್

**ವಾಷಿಂಗ್ಟನ್:** ಇದೇ ಜ.20 ರಂದು ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿರುವ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಮಾಣ ವಚನ ಸಮಾರಂಭದಲ್ಲಿ ವಿದೇಶಾಂಗ ಸಚಿವ (ಇಎಎಂ) ಡಾ ಎಸ್.ಜೈಶಂಕರ್ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಜೈಶಂಕರ್ ಅವರ ಹಾಜರಾತಿಗಾಗಿ ಟ್ರಂಪ್-ವಾನ್ಸ್ ಉದ್ಘಾಟನಾ ಸಮಿತಿಯಿಂದ ಆಹ್ವಾನವನ್ನು ನೀಡಲಾಯಿತು.

ಈ ಭೇಟಿಯು ಎರಡು ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧಗಳನ್ನು ಮತ್ತಷ್ಟು ಭದ್ರಪಡಿಸುವ ನಿರೀಕ್ಷೆಯಿದೆ ಒಳ ಬರುವ ಯುಎಸ್ ಆಡಳಿತವು ತನ್ನ ಅಧಿಕಾರಾವಧಿಯನ್ನು ಪ್ರಾರಂಭಿಸುತ್ತದೆ. ಸಮಾರಂಭದಲ್ಲಿ ಪಾಲ್ಗೊಳ್ಳುವುದರ ಹೊರತಾಗಿ, ವಿದೇಶಾಂಗ ವ್ಯವಹಾರಗಳ ಸಚಿವರು ಹೊಸ ಯುಎಸ್ ಆಡಳಿತದ ಪ್ರತಿ ನಿಧಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಹೆಚ್ಚುವರಿಯಾಗಿ, ವಿದೇಶಾಂಗ ವ್ಯವಹಾರಗಳ ಸಚಿವರು ಇತರ ಅಂತರರಾಷ್ಟ್ರೀಯ ಗಣ್ಯರೊಂದಿಗೆ ತೊಡಗಿಸಿಕೊಳ್ಳುತ್ತಾರೆ, ಅವರು ಈ ಸಂದರ್ಭಕ್ಕಾಗಿ ವಾಷಿಂಗ್ಟನ್ ಡಿಸಿಯಲ್ಲಿ ಉಪಸ್ಥಿತರಿರುತ್ತಾರೆ.

### ಸ್ವಾಮಿ ವಿವೇಕಾನಂದರ ಜನ್ಮದಿನ ರಾಷ್ಟ್ರಪತಿ ಮುರ್ಮು ನಮನ

**ನವದೆಹಲಿ:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಧ್ಯಾತ್ಮಿಕ ನಾಯಕ ಮತ್ತು ಸಮಾಜ ಸುಧಾರಕ ಸ್ವಾಮಿ ವಿವೇಕಾನಂದರ ಜನದಿನದಂದು ಅವರಿಗೆ ಗೌರವ ಸಲ್ಲಿಸಿದರು, ವಿವೇಕಾನಂದರು ರಾಷ್ಟ್ರ ನಿರ್ಮಾಣಕ್ಕಾಗಿ ಕೆಲಸ ಮಾಡಲು ಮತ್ತು ಮಾನವೀಯತೆಯ ಸೇವೆ ಮಾಡಲು ಯುವಕರನ್ನು ಪ್ರೇರೇಪಿಸಿದರು ಎಂದು ಅವರು ಎಕ್ಸ್ ಮಾಡಿದ್ದಾರೆ. 1863ರ ಜನವರಿ 12 ರಂದು ಜನಿಸಿದ ವಿವೇಕಾನಂದರ ಪರಂಪರೆಯು ಪ್ರಪಂಚದಾದ್ಯಂತದ ಅಸಂಖ್ಯಾತ ಜನರನ್ನು ಪ್ರೇರೇಪಿಸುತ್ತದೆ ಎಂದು ಮುರ್ಮು ಪೋಸ್ಟ್ ಮಾಡಿದ್ದಾರೆ.ಸ್ವಾಮಿ ವಿವೇಕಾನಂದರ ಜನದಿನದಂದು ನಾನು ಅವರಿಗೆ ನನ್ನ ನಮ್ರ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತೇನೆ. ಸ್ವಾಮೀಜಿ ಭಾರತದ ಶ್ರೇಷ್ಠ ಆಧ್ಯಾತ್ಮಿಕ ಸಂದೇಶವನ್ನು ಪಾಶ್ಚಿಮಾತ್ಯ ಜಗತ್ತಿಗೆ ಕೊಂಡೊಯ್ದರು. ಅವರು ಭಾರತದ ಜನರಲ್ಲಿ ಹೊಸ ಆತ ವಿಶ್ವಾಸವನ್ನು ತುಂಬಿದರು ಎಂದು ರಾಷ್ಟ್ರಪತಿ ಹೇಳಿದರು.

ಅವರು ಯುವಕರನ್ನು ತಮ ಸಾಮರ್ಥ್ಯವನ್ನು ಅನಾವರಣಗೊಳಿಸಲು, ರಾಷ್ಟ್ರ ನಿರ್ಮಾಣಕ್ಕಾಗಿ ಕೆಲಸ ಮಾಡಲು ಮತ್ತು ಮಾನವೀಯತೆಯ ಸೇವೆ ಮಾಡಲು ಪ್ರೇರೇಪಿಸಿದರು ಎಂದು ಅವರು ತಿಳಿಸಿದ್ದಾರೆ.

### ಭಾರತದ 8 ಮೀನುಗಾರರನ್ನು ಬಂಧಿಸಿದ ಶ್ರೀಲಂಕಾ ಜಲಸೇನೆ

**ಕೊಲಂಬೊ:** ತನ್ನ ಜಲಪ್ರದೇಶದಲ್ಲಿ ಮೀನುಗಾರಿಕೆ ಮಾಡುತ್ತಿದ್ದ ಎಂಟು ಭಾರತೀಯ ಮೀನುಗಾರರನ್ನು ಬಂಧಿಸಿದ್ದಾಗಿ ಶ್ರೀಲಂಕಾ ಜಲಸೇನೆ ಭಾನುವಾರ ಹೇಳಿದೆ. ಅಲ್ಲದೆ ಅವರಿಂದ ಎರಡು ದೋಣಿಗಳನ್ನು ಜಪ್ತಿ ಮಾಡಿದ್ದಾಗಿ ಮಾಹಿತಿ ನೀಡಿದೆ. ಮನ್ನಾರ್‌ನ ಉತ್ತರ ಭಾಗದಲ್ಲಿ ಶನಿವಾರ ನಡೆಸಿದ ವಿಶೇಷ ಕಾರ್ಯಾಚರಣೆ ವೇಳೆ ಬಂಧಿಸಲಾಗಿದೆ ಎಂದು ಜಲಸೇನೆಯ ಪತ್ರಿಕಾ ಪ್ರಕಟಣೆಯಲ್ಲಿ ಹೇಳಲಾಗಿದೆ. ಇದರೊಂದಿಗೆ ಒಟ್ಟು 18 ಭಾರತೀಯ ಮೀನುಗಾರರನ್ನು ಬಂಧಿಸಿದಂತಾಗಿದೆ. ಜಪ್ತಿ ಮಾಡಿದ ದೋಣಿಗಳ ಸಂಖ್ಯೆ 3ಕ್ಕೆ ಏರಿಕೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಶ್ರೀಲಂಕಾದ ಜಲ ಪ್ರದೇಶದಲ್ಲಿ ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದ ಭಾರತದ ಮೀನುಗಾರಿಕಾ ದೋಣಿಗಳನ್ನು ಪತ್ತೆ ಮಾಡಲಾಯಿತು. ಕಾರ್ಯಾಚರಣೆಯಲ್ಲಿ 2 ಭಾರತೀಯ ಮೀನುಗಾರಿಕಾ ಬೋಟ್‌ಗಳನ್ನು ಜಪ್ತಿ ಮಾಡಿ 8 ಭಾರತೀಯ ಮೀನುಗಾರರನ್ನು ಬಂಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿವಿದೆ. ಬಂಧಿತ ಮೀನುಗಾರರು, ಅವರ ದೋಣಿಗಳನ್ನು ಇರಾನ್‌ವಟಿವು ದ್ವೀಪಕ್ಕೆ ಕರೆತರಲಾಗಿದ್ದು, ಮುಂದಿನ ಕಾನೂನು ಪ್ರಕ್ರಿಯೆಗಳಿಗೆ ಅವರನ್ನು ಕಿಲಿನೊಚ್ಚಿಯ ಸಹಾಯಕ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಹಸ್ತಾಂತರಿಸಲಾಗುವುದು ಎಂದು ಅದು ಹೇಳಿದೆ.

### ಟ್ರಂಪ್ ಪದಗ್ರಹಣ ಸಮಾರಂಭದಲ್ಲಿ ಪಾಲ್ಗೊಳ್ಳುವೆ: ಜಪಾನ್ ಸಚಿವ

**ಟೋಕಿಯೊ:** ಡೊನಾಲ್ಡ್ ಟ್ರಂಪ್ ಅವರು ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ಜಪಾನ್ ವಿದೇಶಾಂಗ ಸಚಿವ ತಕೆಶಿ ಇವಾಯ ಭಾನುವಾರ ಹೇಳಿದ್ದಾರೆ. ಟ್ರಂಪ್ ಅವರ ಪದಗ್ರಹಣ ಸಮಾರಂಭ ಜ. 20ರಂದು ನಡೆಯಲಿದೆ. ಸುದ್ದಿ ಸಂಸ್ಥೆ ಎನ್‌ಎಚ್‌ಕೆ ಜೊತೆ ಮಾತನಾಡಿರುವ ಇವಾಯ, ಟ್ರಂಪ್ ಆಡಳಿತದೊಂದಿಗೆ ವಿಶ್ವಾಸಯುತ ಸಂಬಂಧವನ್ನು ಕಾಪಾಡಿಕೊಳ್ಳುವ ಉದ್ದೇಶ ಹೊಂದಿದ್ದೇವೆ. ಅಮೆರಿಕದ ಸಂಭಾವ್ಯ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಅವರೊಂದಿಗೆ ಸಭೆಗಳನ್ನು ಮುಂದುವರಿಸಲು ಬಯಸುತ್ತೇನೆ ಎಂದಿದ್ದಾರೆ. ಈ ಬಾರಿ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ಇತರ ಕೆಲವು ದೇಶಗಳ ಮುಖ್ಯಸ್ಥರಿಗೆ ಆಹ್ವಾನ ನೀಡಲಾಗಿದೆ. ಆದರೆ, ಇದುವರೆಗೆ ಅಮೆರಿಕದ ಅಧ್ಯಕ್ಷರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಇತರ ದೇಶಗಳ ನಾಯಕರು ಭಾಗವಹಿಸಿದ ಉದಾಹರಣೆ ಇಲ್ಲ. ಹೀಗಾಗಿ, ಟ್ರಂಪ್ ಅವರ ಎರಡನೇ ಅವಧಿಯ ಆಡಳಿತವು ಭಿನ್ನವಾಗಿರುವ ಸಾಧ್ಯತೆಯ ಬಗ್ಗೆ ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

### ಸ್ವಾಮಿನಾರಾಯಣ ದೇವಸ್ಥಾನಕ್ಕೆ ಲೋಕಸಭಾ ಸ್ಪೀಕರ್ ಭೇಟಿ

**ಲಂಡನ್:** ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಬ್ರಿಟನ್‌ಗೆ ಭೇಟಿ ನೀಡಿದ್ದು, ವಾಯವ್ಯ ಲಂಡನ್‌ನಲ್ಲಿ ಬಿಎಪಿಎಸ್ ಸ್ವಾಮಿನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಬಿರ್ಲಾ ಅವರು ಸ್ವಾಮಿನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿ ಕುರಿತು ದೇವಾಲಯದ ಅಧಿಕಾರಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಭಾರತದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಸ್ವಾಗತಿಸಲು ಸಂತೋಷವಾಯಿತು. ಬಿರ್ಲಾ ಅವರು ಸ್ವಾಮಿನಾರಾಯಣ ಮೂರ್ತಿಗಳ ದರ್ಶನದ ಸಮಯದಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ಅಭಿಷೇಕವನ್ನು ಮಾಡಿಸಿದ್ದಾರೆ. ಬ್ರಿಟನ್, ಯುರೋಪ್, ಪ್ಯಾರಿಸ್, ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಬಿಎಪಿಎಸ್ ಸ್ವಾಮಿನಾರಾಯಣ ಮಂದಿರದ ಪ್ರಗತಿ ಬಗ್ಗೆ ಮಾಹಿತಿ ಪಡೆದ್ದಾರೆ' ಎಂದು ದೇವಾಲಯದ ಅಧಿಕಾರಿಗಳು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಓಂ ಬಿರ್ಲಾ ಭೇಟಿಯಿಂದಾಗಿ ಭಾರತ ಮತ್ತು ಬ್ರಿಟನ್ ನಡುವಿನ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಇದಕ್ಕೂ ಮುನ್ನ ಓಂ ಬಿರ್ಲಾ ಅವರು ಶನಿವಾರ ಲಂಡನ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾರತೀಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದರು. ಓಂ ಬಿರ್ಲಾ ಅವರು ಬ್ರಿಟನ್, ಸ್ಕಾಟ್ಲೆಂಡ್‌ಗೆ ಐದು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಸ್ಕಾಟೆಂಡ್ ಭೇಟಿ ವೇಳೆ ಅಧ್ಯಕ್ಷೆ ಅಲಿಸನ್ ಜಾನ್‌ಸ್ಟೋನ್, ಸ್ಕಾಟ್ಲೆಂಡ್‌ನ ಮೊದಲ ಪ್ರಧಾನಿ ಜಾನ್ ಸ್ವಿನ್ನಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಸ್ನಾನದ ಫೋಟೋ ಶೇರ್ ಮಾಡಿದ ಸೌತ್ ನಟಿ



**ಬಾಗಿಲೇ ಇಲ್ಲದ ಬಾತ್ ರೂಂನಲ್ಲಿ ಶವರ್!**

ಬಾಗಿಲೇ ಇಲ್ಲದ ಬಾತ್‌ರೂಂನಲ್ಲಿ ಓಪನ್ ಶವರ್ ಸ್ಪೇಸ್‌ನಲ್ಲಿ ಸ್ನಾನ ಮಾಡಿದ್ದಾರೆ ಸೌತ್ ನಟಿ. ಸ್ನಾನದ ಫೋಟೋಸ್ ಕೂಡಾ ಶೇರ್ ಮಾಡಿದ್ದಾರೆ. ಕೆಲವು ಹೀರೋಯಿನ್‌ಗಳು ಫೋಟೋ ಶೂಟ್ ಮಾಡುವುದರಲ್ಲಿ ವಿಶೇಷ ಅನಿಸುತ್ತಾರೆ. ಅದೇ ಹಾದಿಯಲ್ಲಿ ಹಾಟ್ ಬ್ಯೂಟಿ ಇತ್ತೀಚೆಗಷ್ಟೇ ಒಂದಷ್ಟು ಸ್ಟಿಲ್ ಗಳನ್ನು ಬಿಟ್ಟು ಸೋಷಿಯಲ್ ಮೀಡಿಯಾವನ್ನು ಬೆಚ್ಚಿಬೀಳಿಸಿದ್ದಾರೆ. ಅವರ ಫೋಟೋಗಳು ಸದ್ಯ ವೈರಲ್ ಆಗಿವೆ. ಬೆಳ್ಳಿತೆರೆಯಲ್ಲಾಗಲಿ, ಕ್ಯಾಮರಾ ಮುಂದೆಯಾಗಲಿ ಶ್ರದ್ಧಾ ದಾಸ್ ಸ್ಟೈಲ್ ಚೇಂಜ್ ಇದೆ. ಗ್ಲಾಮರ್ ಬಾಗಿಲು ತೆರೆಯುವುದರೊಂದಿಗೆ, ಈ ಸೌಂದರ್ಯವನ್ನು ರಿವೀಲ್ ಮಾಡೋ ಫೋಟೋಶೂಟ್ ಮಾಡಿಸುತ್ತಿರುತ್ತಾರೆ. ಈ ಕ್ರಮದಲ್ಲಿ ಮತ್ತೊಮ್ಮೆ ಲೇಟೆಸ್ಟ್ ಗ್ಲಾಮರ್ ಟ್ರೀಟ್ ನೀಡಿದ್ದಾರೆ ಈ ಚೆಲುವೆ. ಶ್ರದ್ಧಾ ದಾಸ್ ಸ್ನಾನ ಮಾಡುತ್ತಾ ಯುವಕರ ದಿಲ್ ಕದ್ದು ಬಿಟ್ಟಿದ್ದಾರೆ. ತನ್ನ ಗ್ಲಾಮರಸ್ ಗ್ಲಾಮರ್ ಅನ್ನು ಎತ್ತಿ ತೋರಿಸುವ ಫೋಟೋ ಶೂಟ್ ಮಾಡಿದ್ದಾರೆ. ಈ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಈ ಫೋಟೋಗಳಿಂದ ನೆಟ್ಟಿಗರು ಮಂತ್ರಮುಗ್ಧರಾಗಿದ್ದಾರೆ.

ತನ್ನ ಸೌಂದರ್ಯವನ್ನು ತೋರಿಸುತ್ತಾ ಕ್ಯಾಮರಾ ಮುಂದೆ ರೊಮ್ಯಾಂಟಿಕ್ ಆಗಿ ಪೋಸ್ ಕೊಡುವುದು ನಟಿಯ ಹವ್ಯಾಸ. ಇತ್ತೀಚೆಗೆ ಪೋಸ್ಟ್ ಮಾಡಿದ ಫೋಟೋಗಳಲ್ಲಿ, ಶ್ರದ್ಧಾ ಬಾತ್ ರೂಂನಲ್ಲಿಯೇ ಪೋಸ್ ಕೊಡೋದನ್ನು ಕಾಣಬಹುದು. ಇದರೊಂದಿಗೆ ಈ ಫೋಟೋಸ್ ಭಾರೀ ಶೇರ್ ಆಗುತ್ತಿವೆ. ನನ್ನ ದೇಹ ನನ್ನ ಆಯ್ಕೆ ಎಂಬಂತೆ ಬೋಲ್ಡ್ ಅವತಾರದಲ್ಲಿ ನಟಿ ಕಾಣಿಸಿಕೊಂಡಿದ್ದಾರೆ. ಸೌಂದರ್ಯ ಲೋಕದಲ್ಲಿ ತನಗಿಂತ ಮಿಗಿಲಾದವರು ಯಾರೂ ಇಲ್ಲ ಎಂಬಂತೆ ಪೋಸ್ ಕೊಟ್ಟು ತನ್ನ ಚೇಷ್ಟೆಯ ನೋಟದಿಂದ ಹುಡುಗರ ಗಮನವನ್ನು ಸೆಳೆದುಕೊಳ್ಳುತ್ತಿದ್ದಾರೆ ಈ ನಟಿ.



# ಬೆಡ್ ರೂಮ್‌ನಲ್ಲಿ ನಿವೇದಿತಾ ಗೌಡ ಹಾಟ್ ಫೋಟೋ ಶೂಟ್!

**ಅಮ್ಮ ಕೊಟ್ರು ಲೈಕ್, ನೆಟ್ಟಿಗರ ಬ್ಯಾಡ್ ಕಮೆಂಟ್!**

ಬಿಗ್ ಬಾಸ್ ಮಾಜಿ ಸ್ಪರ್ಧಿ ನಿವೇದಿತಾ ಗೌಡ ಸೋಶಿಯಲ್ ಮೀಡಿಯಾ ಮೂಲಕವೇ ಸೆನ್ಸೇಷನ್ ಕ್ರಿಯೇಟ್ ಮಾಡಿದ್ರು. ಬೆಡ್ ರೂಮ್ ನಲ್ಲಿ ನಿವಿ ಗೊಂಬೆ ಇದೀಗ ಹಾಟ್ ಫೋಟೋಶೂಟ್ ಮಾಡಿಸಿದ್ದು, ನಟಿಯ ಬೋಲ್ಡ್ ಫೋಟೋಗೆ ಬ್ಯಾಡ್ ಕಮೆಂಟ್‌ಗಳ ಸುರಿಮಳೆ ಆಗಿದೆ.

ರಿಯಾಲಿಟಿ ಶೋ ಮೂಲಕ ಜನಪ್ರಿಯರಾದ ನಿವೇದಿತಾ ಗೌಡ ಸದ್ಯ ಸೋಶಿಯಲ್ ಮೀಡಿಯಾದಲ್ಲಿ ಸಖತ್ ಆಯಕ್ಟಿವ್ ಆಗಿದ್ದಾರೆ. ಆಗಾಗ ರೀಲ್ಸ್ ಹಾಗೂ ಫೋಟೋಗಳ ಮೂಲಕವೇ ನಿವಿ ಸಖತ್ ಸದ್ದು ಮಾಡ್ತಿದ್ದಾರೆ.

ಇದೀಗ ನಿವೇದಿತಾ ಗೌಡ ಬೆಡ್ ರೂಮ್ ನಲ್ಲಿ ಬೋಲ್ಡ್ ಬೋಲ್ಡ್ ಫೋಟೋಶೂಟ್ ಮಾಡಿಸಿದ್ದಾರೆ. ವೈಟ್ ಕಲರ್ ಸ್ಟೈಲಿಶ್ ಡ್ರೆಸ್ ಧರಿಸಿದ ನಿವೇದಿತಾ ಗೌಡ ಬೆಡ್ ರೂಮ್ ನಲ್ಲಿ ಕುಳಿತು ಫೋಟೋಗಳಿಗೆ ಪೋಸ್ ಕೊಟ್ಟಿದ್ದಾರೆ. ಹೊಸ ವರ್ಷದ ಆರಂಭದಿಂದಲೂ ನಿವಿ ಗೊಂಬೆಯ ಸ್ಟೈಲ್ ಫುಲ್ ಬೋಲ್ಡ್ ಆಗಿದೆ. ಇತ್ತೀಚಿಗಷ್ಟೇ ಬಿಕಿನಿ ತೊಟ್ಟು ಡ್ಯಾನ್ಸ್ ಮಾಡಿದ್ದ ನಿವೇದಿತಾ ಈಗ ಬೆಡ್ ರೂಮ್ ಫೋಟೋಶೂಟ್‌ನಲ್ಲಿ ಮಿಂಚಿದ್ದಾರೆ. ನಟಿಯ ಫೋಟೋಗಳಿಗೆ ಲೈಕ್ ಗಳ ಸುರಿಮಳೆ ಆಗಿದ್ದು, ಇತ್ತ ಕಮೆಂಟ್ ಗಳು ಕೂಡ ಹರಿದು ಬರ್ತಿದೆ.

ನಿವೇದಿತಾ ಗೌಡ ಬೋಲ್ಡ್ ಫೋಟೋಗಳಿಗೆ ಅವರ ಅಮ್ಮ ಹೇಮಾ ರಮೇಶ್ ಕೂಡ ಲೈಕ್ ಜೊತೆಗೆ ಕಮೆಂಟ್ ಬಾಕ್ಸ್ನಲ್ಲಿ ಕಿಸ್ ಇಮೋಜಿಗಳನ್ನು ಹಾಕಿದ್ದಾರೆ. ಮಗಳ ಈ ಅವತಾರಕ್ಕೆ ಲೈಕ್ ಕೊಟ್ಟ ಅಮ್ಮನನ್ನು ಕೂಡ ನೆಟ್ಟಿಗರು ಕ್ಲಾಸ್ ತೆಗೆದುಕೊಂಡಿದ್ದಾರೆ. ನಿವೇದಿತಾ ಫೋಟೋಗಳಿಗೆ ಬ್ಯಾಡ್ ಕಮೆಂಟ್ ಗಳ ಸುರಿಮಳೆ ಆಗ್ತಿದೆ.

# ನಿರ್ದೇಶಕರ ಬಳಿ ಕ್ಷಮೆ ಕೋರಿದ ರಶ್ಮಿಕಾ ಮಂದಣ್ಣ





ನಟಿ ರಶ್ಮಿಕಾ ಮಂದಣ್ಣ ಜಿಮ್‌ನಲ್ಲಿ ವರ್ಕೌಟ್ ಮಾಡುವಾಗ ಕಾಲಿಗೆ ಗಾಯ ಮಾಡಿಕೊಂಡಿದ್ದು, ಪುಷ್ಪಾದ ಶ್ರೀವಲ್ಲಿ ಈಗ ಬೆಡ್ ರೆಸ್ಟ್ ಮಾಡುತ್ತಿದ್ದಾರೆ.ಈ ಸಂಬಂಧ ಇನ್‌ಸ್ಟಾದಲ್ಲಿ ಗಾಯಗೊಂಡಿರುವ ಕಾಲಿನ ಭಾಗದ ಫೋಟೋ ಅಪ್ಲೋಡ್ ಮಾಡಿ ಚಿತ್ರದ ನಿರ್ದೇಶಕರ ಬಳಿ ಕ್ಷಮೆ ಕೇಳಿದ್ದಾರೆ. ಜಿಮ್‌ನಲ್ಲಿ ನಾನು ಗಾಯಗೊಂಡಿದ್ದೇನೆ. ಮುಂದಿನ ಕೆಲ ವಾರ ಅಥವಾ ತಿಂಗಳ ಕಾಲ ನಾನು ವಿಶ್ರಾಂತಿಯಲ್ಲಿರುತ್ತೇನೆ. ಚೇತರಿಕೆಯಾಗಲು ಎಷ್ಟು ಸಮಯ ಬೇಕಾಗಬಹುದು ಎನ್ನುವುದು ದೇವರಿಗೆ ಮಾತ್ರ ತಿಳಿದಿದೆ. ನನ್ನ ಕಾಲಿನ ನೋವು ಗುಣವಾದ ಬಳಿಕ ನಾನು ಥಾಮ, ಸಿಕಂದರ್ ಮತ್ತು ಕುಬೇರ ಸೆಟ್‌ಗೆ ಮರಳುತ್ತೇನೆ. ಈ ವಿಳಂಬಕ್ಕೆ ಕ್ಷಮೆಕೋರುತ್ತೇನೆ ಎಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ರಶ್ಮಿಕಾ ಮುಂದಿನ ಚಿತ್ರದಲ್ಲಿ ಸಲ್ಮಾನ್ ಖಾನ್ ಜೊತೆ ಎ.ಆರ್. ಮುರುಗದಾಸ್ ನಿರ್ದೇಶನದ ಮತ್ತು ಸಾಜಿದ್ ನಾಡಿಯಾಡ್ವಾಲಾ ನಿರ್ಮಾಣದ ಸಿಕಂದರ್ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಈ ಚಿತ್ರದಲ್ಲಿ ಸಲ್ಮಾನ್ ಖಾನ್ ದ್ವಿಪಾತ್ರದಲ್ಲಿ ನಟಿಸುತ್ತಿದ್ದಾರೆ. ಕಾಜಲ್ ಅಗರ್ವಾಲ್, ರಶ್ಮಿಕಾ, ಸತ್ಯರಾಜ್, ಶರ್ಮಾನ್ ಜೋಶಿ ಮತ್ತು ಪ್ರತೀಕ್ ಬಬ್ಬರ್ ನಟಿಸುತ್ತಿದ್ದು 2025 ರ ಈದ್ ಹಬ್ಬಕ್ಕೆ ಬಿಡುಗಡೆಯಾಗಲಿದೆ.ಸಿಕಂದರ್ ನಂತರ ರಶ್ಮಿಕಾ ರಾಹುಲ್ ರವೀಂದ್ರನ್ ನಿರ್ದೇಶನದ 'ದಿ ಗರ್ಲ್‌ಫ್ರೆಂಡ್' ಚಿತ್ರದಲ್ಲಿ ನಟಿಸಲಿದ್ದಾರೆ. ಈ ಚಿತ್ರದ ಟೀಸರ್ ಅನ್ನು ಇತ್ತೀಚೆಗೆ ವಿಜಯ್ ದೇವರಕೊಂಡ ಬಿಡುಗಡೆ ಮಾಡಿದ್ದರು.

ಅಲ್ಲು ಅರ್ಜುನ್ ಜೊತೆ ರಶ್ಮಿಕಾ ನಟಿಸಿದ್ದ 'ಪುಷ್ಪ 2' ಡಿ.5ರಂದು ರಿಲೀಸ್ ಆಗಿ ಭರ್ಜರಿ ಕಲೆಕ್ಷನ್ ಮಾಡಿದೆ. 1800 ಕೋಟಿ.ರೂಗೂ ಅಧಿಕ ಗಳಿಕೆ ಮಾಡಿ ಸಿನಿಮಾ ಗೆದ್ದು ಬೀಗಿದೆ.

# ಸರಿಗಮ ವಿಜಯ್ ಆರೋಗ್ಯದಲ್ಲಿ ಏರುಪೇರು



ಕನ್ನಡ ಚಿತ್ರರಂಗದ ಹಿರಿಯ ನಟ ಸರಿಗಮ ವಿಜಯ್‌ಅವರ ಆರೋಗ್ಯದಲ್ಲಿ ಏರುಪೇರಾಗಿದೆ. ಕಳೆದ 4 ದಿನಗಳಿಂದ ಅವರು ಯಶವಂತಪುರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದು ಬಂದಿದೆ. ನಟ ಸರಿಗಮ ವಿಜಯ್ ಆರೋಗ್ಯದಲ್ಲಿ ಏರುಪೇರಾಗಿದೆ.

ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಿ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಟನ ಆರೋಗ್ಯ ಸ್ಥಿತಿ ಇಂದು ಗಂಭೀರವಾಗಿದೆ ಎಂದು ಸರಿಗಮ ವಿಜಯ್ ಪುತ್ರ ರೋಹಿತ್ ಮಾಹಿತಿ ಹಂಚಿಕೊಂಡಿದ್ದಾರೆ.

ಅಂದಹಾಗೆ, 1980ರಲ್ಲಿ ಗೀತಪ್ರಿಯಾ ನಿರ್ದೇಶನದ 'ಬೆಳವಳದ ಮಡಿಲಲ್ಲಿ' ಚಿತ್ರಕ್ಕೆ ಸಣ್ಣ ಪಾತ್ರದಲ್ಲಿ ನಟಿಸುವುದರ ಮೂಲಕ ನಟನಾಗಿ ಗುರುತಿಸಿಕೊಂಡರು. ಆ ನಂತರ ಚಿತ್ರರಂಗದಲ್ಲಿ ತೊಡಗಿಕೊಂಡವರು. ಅದರ ಫಲವೇ 269 ಚಿತ್ರಗಳಲ್ಲಿ ನಟನೆ, 80 ಚಿತ್ರಗಳಿಗೆ ಸಹಾಯಕ ನಿರ್ದೇಶನ ಮಾಡಿದ್ದಾರೆ. 2,400 ಧಾರಾವಾಹಿಗಳ ನಿರ್ದೇಶನದ ಜೊತೆಗೆ ನಟನೆ ಮಾಡಿದ್ದಾರೆ. ವಿಶೇಷ ಅಂದರೆ, ಇವರ ನಟನೆಯ ಚಿತ್ರಗಳ ಪಟ್ಟಿಯಲ್ಲಿ ಟೈಗರ್ ಪ್ರಭಾಕರ್ ಚಿತ್ರಗಳೇ ಹೆಚ್ಚಾಗಿದೆ. ಇನ್ನೂ ಅವರು ಸರಿಗಮ ವಿಜಿ ಎಂದೇ ಫೇಮಸ್ ಆಗಿದ್ದಾರೆ.



# ಆಕ್ಸಿಡೆಂಟ್‌ನಿಂದ ಹಾಸಿಗೆ ಹಿಡಿದಾಗ ಹೆಲ್ಪ್ ಮಾಡಿದ್ದು ಆ ನಟ ಮಾತ್ರ!

ಯೂಟ್ಯೂಬ್ ಚಾನೆಲ್‌ನ ಸಂದರ್ಶನದಲ್ಲಿ ಮಾತಾಡಿದ ನಟ ಮಂಡ್ಯ ರಮೇಶ್, ಕಷ್ಟದ ದಿನಗಳಲ್ಲಿ ಇಂಡಸ್ಟ್ರಿ ನನ್ನ ಕೈ ಹಿಡಿಯಲಿಲ್ಲ, ನನಗೆ ಸಹಾಯ ಮಾಡಿದ್ದು ಆ ಒಬ್ಬ ನಟ ಮಾತ್ರ ಎಂದಿದ್ದಾರೆ.



ನನಗೆ 8 ತಿಂಗಳ ಹಿಂದೆ ಭೀಕರ ಅಪಘಾತವಾಗಿತ್ತು. ಸಿನಿಮಾ ಶೂಟಿಂಗ್ ನಡೆಯುವ ವೇಳೆಯೇ ದೊಡ್ಡ ಆಯಕ್ಸಿಡೆಂಟ್ ಆಯ್ತು. ಎದ್ದು ನಿಲ್ಲೋದಕ್ಕೂ ಹಲವು ತಿಂಗಳು ತೆಗೆದುಕೊಂಡೆ. ನಾನು ಬೆಡ್ ಮೇಲೆ ಇದ್ದಾಗ ನನ್ನ ಕಡೆಯವರು ಇಂಡಸ್ಟ್ರಿಯ ಕೆಲವರ ಬಳಿ ಅಪ್ರೋಚ್ ಮಾಡಿದ್ರು. ಆದ್ರೆ ಯಾರು ಆಗ ಸಹಾಯಕ್ಕೆ ಮುಂದೆ ಬಂದಿಲ್ಲ ಎಂದು ಮಂಡ್ಯ ರಮೇಶ್ ಹೇಳಿದ್ರು. ಕನ್ನಡ ಒಬ್ಬ ನಟ ಮಾತ್ರ ನನ್ನ ಸಹಾಯಕ್ಕೆ ಬಂದ್ರು, ನಾನು ಅವರ ಜೊತೆ ಯಾವ ಸಿನಿಮಾದಲ್ಲೂ ನಟಿಸಿಲ್ಲ. ನನಗೆ ಫೋನ್ ಮಾಡಿ ಭೀಕರ ಅಪಘಾತದಲ್ಲಿ ಬದುಕುಳಿದಿದ್ದೆ ದೊಡ್ಡದು, 1 ತಿಂಗಳಿಂದ ಹಾಸಿಗೆ ಹಿಡಿದಿದ್ದೀರಾ, ಜೀವನ ಹೇಗೆ ಅಣ್ಣ ಅಂತ ಮಾತಾಡಿ ಕಾಲ್ ಕಟ್ ಮಾಡಿದ್ರು. ಫೋನ್ ಕಟ್ ಆದ ತಕ್ಷಣ ನನ್ನ ಅಕೌಂಟ್‌ಗೆ ಹಣ ಬಂದಿತ್ತು. ಆ ನಟ ಬೇರೆ ಯಾರು ಅಲ್ಲ ನಟ ರಿಷಬ್ ಶೆಟ್ಟಿ ಎಂದು ಮಂಡ್ಯ ರಮೇಶ್ ಹೇಳಿದ್ರು.

ರಾಕಿಂಗ್ ಸ್ಟಾರ್ ಯಶ್ ಬಗ್ಗೆ ಮಾತಾಡಿದ ಮಂಡ್ಯ ರಮೇಶ್ ಅವರು ನಾನು ಅವರ ಜೊತೆ ಗಜಕೇಸರಿ ಸಿನಿಮಾ ಮಾಡುವಾಗ ಈ ನಟ ಮುಂದೆ ಕೆಜಿಎಫ್ ಅಂತಹ ಸಿನಿಮಾ ಮಾಡ್ತಾರೆ, ನ್ಯಾಷನಲ್ ಸ್ಟಾರ್ ಆಗ್ತಾರೆ ಎನ್ನುವ ಯಾವ ಕಲ್ಪನೆಯೂ ಇರಲಿಲ್ಲ ಎಂದಿದ್ದಾರೆ. ರಂಗಭೂಮಿಯಿಂದ ಬಂದ ಹುಡುಗ, ಒಳ್ಳೆಯ ನಟ ಯಶ್ ಅವರನ್ನು ಶ್ರದ್ಧೆ ಹಾಗೂ ಶ್ರಮ ಅವರನ್ನು ಕಾಪಾಡಿತು ಎಂದು ಮಂಡ್ಯ ರಮೇಶ್ ಹೇಳಿದ್ರು.

# ತ್ರಿಶತಕ ಸಿಡಿಸಿದ ಯುವ ಬ್ಯಾಟರ್



ಮುಂಬೈನ 14 ವರ್ಷದ ಇರಾ ಜಾಧವ್ ಅವರು ಭಾರತದ ಅಂಡರ್-19 ಮಹಿಳಾ ಏಕದಿನ ಟ್ರೋಫಿಯಲ್ಲಿ ದಾಖಲೆಯ 346 ರನ್‌ಗಳ ಅಜೇಯ ಇನ್ನಿಂಗ್ಸ್ ಆಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಇರಾ ಕೇವಲ 157 ಎಸೆತಗಳಲ್ಲಿ 42 ಬೌಂಡರಿ ಮತ್ತು 16 ಸಿಕ್ಸರ್‌ಗಳೊಂದಿಗೆ ಈ ಸಾಧನೆ ಮಾಡಿದ್ದಾರೆ. ಈ ಮೂಲಕ ಅವರು ಸ್ಮೃತಿ ಮಂಧಾನ ಅವರ ಹಿಂದಿನ ದಾಖಲೆಯನ್ನು ಮುರಿದಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಗಳಿಸುವುದು ಪ್ರತಿಯೊಬ್ಬ ಬ್ಯಾಟ್ಸ್‌ಮನ್‌ನ ಕನಸು. ಇಲ್ಲಿಯವರೆಗೆ ವೃತ್ತಿಪರ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಕ್ರಿಕೆಟಿಗರು ಬಹಳ ಕಡಿಮೆ. ಆದರೆ ಭಾರತದ ಯುವ ಆಟಗಾರ್ತಿಯೊಬ್ಬರು ಇದೀಗ 50 ಓವರ್‌ಗಳ ಪಂದ್ಯಗಳಲ್ಲಿ ತ್ರಿಶತಕ ಬಾರಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಭಾರತದ ದೇಶೀಯ ಕ್ರಿಕೆಟ್‌ನಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಮಹಿಳಾ ಏಕದಿನ ಟ್ರೋಫಿಯಲ್ಲಿ ಈ ಐತಿಹಾಸಿಕ ಇನ್ನಿಂಗ್ಸ್ ಮೂಡಿಬಂದಿದ್ದು, ಮುಂಬೈನ ಯುವ ಬ್ಯಾಟರ್ 14 ವರ್ಷದ ಇರಾ ಜಾಧವ್ ಈ ಸಾಧನೆ ಮಾಡಿದ್ದಾರೆ.

ಬೆಂಗಳೂರಿನ ಆಲೂರು ಕ್ರೀಡಾಂಗಣದಲ್ಲಿ ನಡೆದ ಮುಂಬೈ ಹಾಗೂ ಮೇಘಾಲಯ ನಡುವಿನ ಪಂದ್ಯದಲ್ಲಿ ಇರಾ ಜಾಧವ್ ಈ ದಾಖಲೆಯ ಇನ್ನಿಂಗ್ಸ್ ಆಡಿದರು. ಈ ಪಂದ್ಯದಲ್ಲಿ ಅವರು 157 ಎಸೆತಗಳಲ್ಲಿ 346 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು. ಈ ವೇಳೆ ಅವರ ಬ್ಯಾಟ್‌ನಿಂದ 42 ಬೌಂಡರಿ ಹಾಗೂ 16 ಸಿಕ್ಸರ್ ಕೂಡ ಸಿಡಿದವು. 220 ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟ್ ಬೀಸಿದ ಅವರು 138 ಎಸೆತಗಳಲ್ಲಿ ತ್ರಿಶತಕ ಪೂರೈಸಿದರು. ಇದರೊಂದಿಗೆ ಇರಾ ಜಾಧವ್ 19 ವರ್ಷದೊಳಗಿನವರ ಏಕದಿನ ಟ್ರೋಫಿಯಲ್ಲಿ ತ್ರಿಶತಕ ಸಿಡಿಸಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

# ಏಕದಿನ ಕ್ರಿಕೆಟ್‌ನಲ್ಲಿ ದಾಖಲೆ ಬರೆದ ಭಾರತ



**1 ಶತಕ 3 ಅರ್ಧ ಶತಕ..!**

ಭಾರತ ಮತ್ತು ಐರ್ಲೆಂಡ್ ಮಹಿಳಾ ಕ್ರಿಕೆಟ್ ತಂಡಗಳ ನಡುವಿನ ಏಕದಿನ ಪಂದ್ಯದಲ್ಲಿ ಭಾರತ ತಂಡ 370 ರನ್ ಗಳಿಸಿ ದಾಖಲೆ ಸೃಷ್ಟಿಸಿದೆ. ಜೆಮಿಮಾ ರೋಡ್ರಿಗಸ್ ಅವರ ಚೊಚ್ಚಲ ಏಕದಿನ ಶತಕ (102 ರನ್) ಹಾಗೂ ಸ್ಮೃತಿ ಮಂಧಾನ (73), ಪ್ರತೀಕಾ (67), ಹರ್ಲೀನ್ (89) ಅವರ ಅರ್ಧಶತಕಗಳ ನೆರವಿನಿಂದ ಭಾರತ ಏಕದಿನದಲ್ಲಿ ಬೃಹತ್ ಮೊತ್ತ ಕಲೆಹಾಕಿದೆ. ಭಾರತ ಮತ್ತು ಐರ್ಲೆಂಡ್ ಮಹಿಳಾ ತಂಡಗಳ ನಡುವೆ 3 ಪಂದ್ಯಗಳ ಏಕ ದಿನ ಸರಣಿ ನಡೆಯುತ್ತಿದೆ. ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್‌ಸ್ಟೇಡಿಯಂನಲ್ಲಿ ನಡೆಯುತ್ತಿರುವ ಸರಣಿಯ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಬರೋಬ್ಬರಿ 370 ರನ್ ಕಲೆಹಾಕಿದೆ. ಭಾರತ ಮತ್ತು ಐರ್ಲೆಂಡ್ ಮಹಿಳಾ ತಂಡಗಳ ನಡುವೆ 3 ಪಂದ್ಯಗಳ ಏಕದಿನ ಸರಣಿ ನಡೆಯುತ್ತಿದೆ. ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಸರಣಿಯ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಬರೋಬ್ಬರಿ 370 ರನ್ ಕಲೆಹಾಕಿದೆ. ತಂಡದ ಪರ ಮೂರು ಅರ್ಧಶತಕ ಹಾಗೂ 1 ಶತಕ ದಾಖಲಾಗಿದ್ದು, ಐರ್ಲೆಂಡ್‌ಗೆ ಬೃಹತ್ ಟಾರ್ಗೆಟ್ ನೀಡಲಾಗಿದೆ.

ಆರಂಭಿಕರಾಗಿ ಕಣಕ್ಕಿಳಿದಿದ್ದ ನಾಯಕಿ ಸ್ಮೃತಿ ಮಂಧಾನ 73, ಪ್ರತೀಕಾ 67, ಹರ್ಲೀನ್ 89 ಹಾಗೂ ಜೆಮಿಮಾ 102 ರನ್‌ಗಳ ಶತಕದ ಇನ್ನಿಂಗ್ಸ್ ಆಡಿದರು. ಜೆಮಿಮಾ ರಾಡ್ರಿಗಸ್ ಅವರ ಈ ಶತಕದ ಇನ್ನಿಂಗ್ಸ್ ಹಾಗೂ ಉಳಿದ ಮೂವರ ಅರ್ಧಶತಕದಿಂದಾಗಿ ಟೀಂ ಇಂಡಿಯಾ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 370 ರನ್ ಗಳಿಸಿದೆ. ಇದು ಏಕದಿನ ಕ್ರಿಕೆಟ್‌ನಲ್ಲಿ ಭಾರತ ಮಹಿಳಾ ತಂಡದ ಈವರೆಗಿನ ಅತಿ ದೊಡ್ಡ ಸ್ಕೋರ್ ಆಗಿದೆ. ಇದಲ್ಲದೆ ಜೆಮಿಮಾ ಈ ಶತಕದ ಮೂಲಕ ತಮ್ಮ 7 ವರ್ಷಗಳ ಬರವನ್ನು ನೀಗಿಸಿಕೊಂಡರು. 4ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದು 102 ರನ್‌ಗಳ ದಾಖಲೆಯ ಇನ್ನಿಂಗ್ಸ್ ಆಡಿದ ಜೆಮಿಮಾ ರೋಡ್ರಿಗಸ್‌ಗೆ ಇದು ಅವರ ಚೊಚ್ಚಲ ಏಕದಿನ ಶತಕವಾಗಿದೆ. ತಮ್ಮ ಇನ್ನಿಂಗ್ಸ್‌ನಲ್ಲಿ 91 ಎಸೆತಗಳನ್ನು ಎದುರಿಸಿದ ಅವರು 112.08 ಸ್ಟ್ರೈಕ್ ರೇಟ್‌ನಲ್ಲಿ 102 ರನ್ ಗಳಿಸಿದರು. ಈ ವೇಳೆ ಜೆಮಿಮಾ ರಾಡ್ರಿಗಸ್ 12 ಬೌಂಡರಿಗಳನ್ನು ಬಾರಿಸಿದರು. ಮೇಲೆ ಹೇಳಿದಂತೆ ಜೆಮಿಮಾ ರೋಡ್ರಿಗಸ್ ಅವರ ಅಂತಾರಾಷ್ಟ್ರೀಯ ವೃತ್ತಿಜೀವನದ ಮೊದಲ ಶತಕ ಇದಾಗಿದೆ. ಫೆಬ್ರವರಿ 2018 ರಲ್ಲಿ ಟಿ20 ಕ್ರಿಕೆಟ್ ಮೂಲಕ ತಮ್ಮ ಅಂತರರಾಷ್ಟ್ರೀಯ ವೃತ್ತಿಜೀವನವನ್ನು ಪ್ರಾರಂಭಿಸಿದ ಅವರು, 12 ಮಾರ್ಚ್ 2018 ರಂದು ತಮ್ಮ ಚೊಚ್ಚಲ ಏಕದಿನ ಪಂದ್ಯವನ್ನು ಆಡಿದ್ದರು.

## ಬಿಸಿಸಿಐ ಕಾರ್ಯದರ್ಶಿಯಾಗಿ ದೇವಜಿತ್ ಸೈಕಿಯಾ ಅವಿರೋಧ ಆಯ್ಕೆ



ಬಿಸಿಸಿಐನ ಹೊಸ ಕಾರ್ಯದರ್ಶಿಯಾಗಿ ದೇವಜಿತ್ ಸೈಕಿಯಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಜಯ್ ಶಾ ಅವರು ಐಸಿಸಿ ಅಧ್ಯಕ್ಷರಾದ ನಂತರ ಖಾಲಿಯಾಗಿದ್ದ ಈ ಹುದ್ದೆಗೆ ಸೈಕಿಯಾ ಅವರನ್ನು ಆಯ್ಕೆ ಮಾಡಲಾಗಿದೆ. ಈ ಮೊದಲು ಅವರನ್ನು ಹಂಗಾಮಿ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿತ್ತು.

ಜಯ್ ಶಾ ಅವರು ಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಖಾಲಿಯಾಗಿದ್ದ ಬಿಸಿಸಿಐ ಕಾರ್ಯದರ್ಶಿ ಹುದ್ದೆಗೆ ಇದೀಗ ದೇವಜಿತ್ ಸೈಕಿಯಾ ಅವರನ್ನು ಆಯ್ಕೆ ಮಾಡಲಾಗಿದೆ. ಭಾನುವಾರ ನಡೆದ ವಿಶೇಷ ಸಾಮಾನ್ಯ ಸಭೆಯ (ಎಸ್‌ಜಿಎಂ) ನಂತರ ಬಿಸಿಸಿಐ ಅವರ ಹೆಸರನ್ನು ಅಧಿಕೃತವಾಗಿ ಘೋಷಿಸಿತು. ಮಂಡಳಿಯ ಸಂವಿಧಾನದ ಪ್ರಕಾರ, ಈ ಖಾಲಿ ಹುದ್ದೆಯನ್ನು ಭರ್ತಿ ಮಾಡಲು 45 ದಿನಗಳ ಕಾಲಾವಕಾಶವಿದ್ದು, ಇದಕ್ಕಾಗಿ ಚುನಾವಣೆ ನಡೆಸಲಾಯಿತು. ಆದರೆ ಈ ಹುದ್ದೆಗೆ ಸೈಕಿಯಾ ಅವರನ್ನು ಹೊರತುಪಡಿಸಿ ಮತ್ತ್ಯಾರು ನಾಮಪತ್ರ ಸಲ್ಲಿಸದ ಕಾರಣ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ವಾಸ್ತವವಾಗಿ ಜಯ್ ಶಾ ಅವರ ನಿರ್ಗಮನದ ಬಳಿಕ ಈ ಹುದ್ದೆಗೆ ಸೈಕಿಯಾ ಅವರನ್ನೇ ಹಂಗಾಮಿ ಕಾರ್ಯದರ್ಶಿಯನ್ನಾಗಿ ಮಾಡಲಾಗಿತ್ತು. ಮತ್ತೊಂದೆಡೆ, ಪ್ರಭತೇಜ್ ಭಾಟಿಯಾ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ. ಡಿಸೆಂಬರ್ 2024 ರಲ್ಲಿ ಐಸಿಸಿ ಅಧ್ಯಕ್ಷರಾಗಿ ಜಯ್ ಶಾ ಅಧಿಕಾರ ವಹಿಸಿಕೊಂಡ ನಂತರ ಸೈಕಿಯಾ ಮಧ್ಯಂತರದಲ್ಲಿ ಬಿಸಿಸಿಐ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಮಂಡಳಿಯ ಸಂವಿಧಾನದ ಪ್ರಕಾರ ಯಾವುದೇ ಹುದ್ದೆ ಖಾಲಿಯಾದರೆ 45 ದಿನಗಳೊಳಗೆ ಭರ್ತಿ ಮಾಡಿ ಇದಕ್ಕಾಗಿ ಚುನಾವಣೆ ನಡೆಸಬೇಕು. ಆ ಪ್ರಕಾರ ಕಾರ್ಯದರ್ಶಿ ಹುದ್ದೆಗೆ ಸೈಕಿಯಾ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಜನವರಿ 12 ರಂದು ಅವರನ್ನು ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ದೇವಜಿತ್ ಸೈಕಿಯಾ ಯಾರು?

ಸುಮಾರು 56 ವರ್ಷ ವಯಸ್ಸಿನ ದೇವಜಿತ್ ಸೈಕಿಯಾ ಅವರು ಏಪ್ರಿಲ್ 1969 ರಲ್ಲಿ ಅಸ್ಸಾಂನ ಗುವಾಹಟಿಯಲ್ಲಿ ಜನಿಸಿದರು. ಸೈಕಿಯಾ ಬೆಳೆದದ್ದು ಗುವಾಹಟಿಯಲ್ಲಿ. ಸೈಕಿಯಾ ಪ್ರಥಮ ದರ್ಜೆ ಕ್ರಿಕೆಟಿಗರಾಗಿದ್ದು, ಅವರು 1990-91ರ ಸೀಸನ್‌ನಲ್ಲಿ ಅಸ್ಸಾಂ ಪರ ರಣಜಿ ಟ್ರೋಫಿಯಲ್ಲಿ 4 ಪಂದ್ಯಗಳನ್ನು ಆಡಿದ್ದರು. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿದ್ದ ಅವರು, ಅಸ್ಸಾಂ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಅಷ್ಟೇ ಅಲ್ಲದೆ ಗುವಾಹಟಿ ಕ್ರೀಡಾ ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಅವರು ಅಸ್ಸಾಂನ ಅಡ್ವೊಕೇಟ್ ಜನರಲ್ ಕೂಡ ಆಗಿದ್ದಾರೆ.

ದೇವಜಿತ್ ಸೈಕಿಯಾ ಅವರು 1984 ರಲ್ಲಿ ಜೂನಿಯರ್ ಮಟ್ಟದಲ್ಲಿ ಬಿಸಿಸಿಐನ ಅತ್ಯಂತ ಪ್ರಮುಖ ಪಂದ್ಯಾವಳಿಯಾದ ಸಿಕೆ ನಾಯುಡು ಟ್ರೋಫಿ ಮೂಲಕ ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಗುರುತಿಸಿಕೊಂಡರು. ಇದರ ನಂತರ, ಅವರು ವಿಜಯ್ ಮರ್ಚೆಂಟ್ ಟ್ರೋಫಿಯಲ್ಲಿ ಅಸ್ಸಾಂ ಅಂಡರ್-15 ತಂಡದ ಪರ ಕಣಕ್ಕಿಳಿದು ತಮ್ಮ ಚೊಚ್ಚಲ ಪಂದ್ಯದಲ್ಲಿ ಅಜೇಯ 55 ರನ್ ಕಲೆಹಾಕಿದರು. ನಂತರ 1987 ರಲ್ಲಿ ನಡೆದ ಅಂಡರ್-17 ವಿಜಯ್ ಹಜಾರೆ ಟ್ರೋಫಿಯಲ್ಲಿ ಒಡಿಶಾ ವಿರುದ್ಧ ಅದ್ಭುತ ಶತಕ ಗಳಿಸುವ ಮೂಲಕ ಹಿರಿಯ ಪೂರ್ವ ವಲಯ ತಂಡದಲ್ಲಿ ಸ್ಥಾನ ಪಡೆದರು. ಆ ಬಳಿಕ 1989 ರಲ್ಲಿ ರಣಜಿ ಟ್ರೋಫಿಗೆ ಪಾದಾರ್ಪಣೆ ಮಾಡಿದ ಅವರು 4 ಪಂದ್ಯಗಳನ್ನು ಆಡಿದ್ದಾರೆ ಆದಾಗ್ಯೂ, ಅವರು ತಮ್ಮ ಅಧ್ಯಯನವನ್ನು ಪೂರ್ಣಗೊಳಿಸಲು ಕೇವಲ 21 ನೇ ವಯಸ್ಸಿನಲ್ಲಿ ವೃತ್ತಿಪರ ಕ್ರಿಕೆಟ್ ಅನ್ನು ತೊರೆದರು. ತಮ್ಮ ಕಾನೂನು ಅಧ್ಯಯನವನ್ನು ಪೂರ್ಣಗೊಳಿಸಿದ ಸೈಕಿಯಾ 1997 ರಲ್ಲಿ ಗೌಹಾಟಿ ಹೈಕೋರ್ಟ್‌ನಲ್ಲಿ ವಕೀಲರಾಗಿ ಅಭ್ಯಾಸ ಮಾಡಲು ಪ್ರಾರಂಭಿಸಿದರು. 2021 ರಲ್ಲಿ, ಸೈಕಿಯಾ ಅಸ್ಸಾಂನ ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡರು ಮತ್ತು ಈ ಹುದ್ದೆಯನ್ನು ಅಲಂಕರಿಸಿದ ಅತ್ಯಂತ ಕಿರಿಯ ವ್ಯಕ್ತಿ ಎನಿಸಿಕೊಂಡಿದ್ದರು.



**ಗಂಭೀರ್ ಅಸಮಾಧಾನ**

# ಆಸ್ಟ್ರೇಲಿಯಾದಲ್ಲೇ ನಿವೃತ್ತಿ ಘೋಷಿಸಲು ಸಿದ್ಧರಾಗಿದ್ದ ರೋಹಿತ್ ಶರ್ಮಾ

3 ಪಂದ್ಯಗಳು, 5 ಇನಿಂಗ್ಸ್ 31 ರನ್‌ಗಳು. ಇದು ಈ ಬಾರಿಯ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಕಲೆಹಾಕಿದ ಒಟ್ಟು ರನ್‌ಗಳು. 6.20 ಸರಾಸರಿಯಲ್ಲಿ ಅತ್ಯಂತ ಕಳಪೆ ಬ್ಯಾಟಿಂಗ್ ಪ್ರದರ್ಶಿಸಿದ ಕಾರಣ ಸಿಡ್ನಿ ಟೆಸ್ಟ್ ಪಂದ್ಯದಿಂದ ರೋಹಿತ್ ಶರ್ಮಾ ಹೊರಗುಳಿದಿದ್ದರು. ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿ ನಡುವೆಯೇ ನಿವೃತ್ತಿ ಘೋಷಿಸಲು ಮುಂದಾಗಿದ್ದರು ಎಂಬ ವಿಚಾರ ಇದೀಗ ಬಹಿರಂಗವಾಗಿದೆ. ಮೆಲ್ಬೋರ್ನ್‌ಟೆಸ್ಟ್‌ನಲ್ಲಿ ಭಾರತ ತಂಡದ ಹೀನಾಯ ಸೋತ ಬೆನ್ನಲ್ಲೇ ರೋಹಿತ್ ಶರ್ಮಾ ನಿವೃತ್ತಿ ಘೋಷಿಸಲು ನಿರ್ಧರಿಸಿದ್ದರು. ಆದರೆ ಆಪ್ತರ ಸಲಹೆ ಮೇರೆಗೆ ಹಿಟ್‌ಮ್ಯಾನ್ ದಿಢೀರ್ ತಮ್ಮ ನಿರ್ಧಾರವನ್ನು ಬಲಿಸಿದರು ಎಂದು ವರದಿಯಾಗಿದೆ.



ಟೈಮ್ಸ್ ಆಫ್ ಇಂಡಿಯಾ ವರದಿ ಪ್ರಕಾರ, ರೋಹಿತ್ ಶರ್ಮಾ ಮೆಲ್ಬೋರ್ನ್ ಟೆಸ್ಟ್ ಪಂದ್ಯದ ಬಳಿಕ ನಿವೃತ್ತಿ ಘೋಷಿಸಲು ಸಜ್ಜಾಗಿದ್ದರು. ಈ ವಿಷಯ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೂ ಗೊತ್ತಿತ್ತು. ಆದರೆ ಕೊನೆಯ ಕ್ಷಣದಲ್ಲಿ ರೋಹಿತ್ ತಮ್ಮ ನಿರ್ಧಾರವನ್ನು ಬದಲಿಸಿದರು.

ಆದರೆ ರೋಹಿತ್ ಶರ್ಮಾ ಅವರ ಈ ನಿರ್ಧಾರದಿಂದ ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಅಸಮಾಧಾನಗೊಂಡಿದ್ದರು. ನಿವೃತ್ತಿ ನಿರ್ಧಾರವನ್ನು ಪ್ರಸ್ತಾಪಿಸಿದ ಬಳಿಕ ರೋಹಿತ್ ದಿಢೀರ್ ಟೆಸ್ಟ್ ಕ್ರಿಕೆಟ್ ವಿದಾಯ ತೀರ್ಮಾನದಿಂದ ಹಿಂದೆ ಸರಿದಿದ್ದು ಗಂಭೀರ್ ಅವರಿಗೆ ಇಷ್ಟವಾಗಿರಲಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ. ಆಸ್ಟ್ರೇಲಿಯಾ ವಿರುದ್ಧದ 4ನೇ ಟೆಸ್ಟ್ ಪಂದ್ಯದಲ್ಲಿನ ಹೀನಾಯ ಸೋಲಿನ ಬಳಿಕ ರೋಹಿತ್ ಶರ್ಮಾ ನಿವೃತ್ತಿ ನಿರ್ಧಾರವನ್ನು ತೆಗೆದುಕೊಂಡಿದ್ದರು. ಆದರೆ ಅವರ 'ಹಿತೈಷಿಗಳು' ಅವರೊಂದಿಗೆ ಮಾತನಾಡಿ ನಿರ್ಧಾರವನ್ನು ಬದಲಾಯಿಸುವಂತೆ ಮನವೊಲಿಸುವಲ್ಲಿ ಯಶಸ್ವಿಯಾದರು. ಹೀಗಾಗಿ ಅವರು ನಿವೃತ್ತಿ ಘೋಷಿಸಿಲ್ಲ. ಈ ವಿಚಾರದಲ್ಲಿ ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಅಸಮಾಧಾನ ವ್ಯಕ್ತಪಡಿಸಿದ್ದರು. ಇದೇ ಕಾರಣದಿಂದಾಗಿ ರೋಹಿತ್ ಶರ್ಮಾ ಸಿಡ್ನಿ ಟೆಸ್ಟ್ ಪಂದ್ಯದಿಂದ ಹೊರಗುಳಿದಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ. ಹೀಗಾಗಿಯೇ ಹಿಟ್‌ಮ್ಯಾನ್ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಕೊನೆಯ ಮ್ಯಾಚ್‌ನಲ್ಲಿ ಹಿಟ್‌ಮ್ಯಾನ್ ಕಣಕ್ಕಿಳಿದಿರಲಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966